ಸೋಮವಾರ, ಆಗಸ್ಟ್ 18, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 229 | ಪುಟ 12

prajavani.net prajavani www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

'ಕ್ಲಾಸಿಕಲ್ ಚೆಸ್' ಕಣಕ್ಕೆ ಗುಕೇಶ್

ವಿಶ್ವ ಚಾಂಪಿಯನ್, ಭಾರತದ ಡಿ. ಗುಕೇಶ್ ಅವರು ಸೋಮವಾರ ಸೇಂಟ್ ಲೂಯಿಸ್‌ನಲ್ಲಿ ಆರಂಭವಾಗಲಿರುವ 'ಸಿಂಕ್‌ಫೀಲ್ಡ್ ಕಪ್' ಗ್ರ್ಯಾಂಡ್ ಚೆಸ್ ಟೂರ್‌ನಲ್ಲಿ (ಜಿಸಿಟಿ) ಕಣಕ್ಕಿಳಿಯಲಿದ್ದಾರೆ

ನಾಗಿಣಿ ನೃತ್ಯ

ದಾವಣಗೆರೆಯ ಗುಂಡಿ ಮಹದೇವಪ್ಪ ಕಲ್ಯಾಣ ಮಂಟಪದಲ್ಲಿ ಕೇರಳ ಸಮಾಜದ ವತಿಯಿಂದ ಭಾನುವಾರ ಆಯೋಜಿಸಿದ್ದ ಸಮರ್ಥನಂ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಪ್ರದರ್ಶಿಸಿದ ನಾಗಿಣಿ ನೃತ್ಯ ಗಮನ ಸೆಳೆಯಿತು

ಕುರಿಗಾಹಿಗೆ ನಿಂದನೆ: 5 ವರ್ಷ ಜೈಲು 7

ವಾಹನಗಳಿಗೆ ಕಡಿಮೆ ಮಟ್ಟದ ತೆರಿಗೆ? 10

Lilly A MEDICINE COMPANY

ನಿಮಗೆ ತಿಳಿದಿದೆಯೇ?
ನಿಮ್ಮ ದೇಹ ತೂಕ ಇಳಿಕೆಯನ್ನು ಪ್ರತಿರೋಧಿಸುತ್ತದೆ ಎಂದು'

ನೀವು ದೀರ್ಘಕಾಲದವರೆಗೆ ಹೆಚ್ಚುವರಿ ತೂಕ ಹೊಂದಿದ್ದಾಗ, ನಿಮ್ಮ ದೇಹವು ಬದಲಾವಣೆಗೆ ಪ್ರತಿರೋಧ ಒಡ್ಡಬಹುದು ಎಂದು ಸಂಶೋಧನೆಗಳು ಸೂಚಿಸುತ್ತವೆ.[1] ವೈದ್ಯಕೀಯ ಬೆಂಬಲವು ಸಹಾಯ ಮಾಡಬಹುದು!

ಇಂದೇ ನಿಮ್ಮ ವೈದ್ಯರೊಂದಿಗೆ ತೂಕ ಇಳಿಕೆಯ ಬಗ್ಗೆ ಮಾತನಾಡಿ.[2,3]

References:
1. Ochner CN, Barrios DM, Lee CD, Pi-Sunyer FX. Biological mechanisms that promote weight regain following weight loss in obese humans. Physiol Behav. 2013;120:106-113. doi:10.1016/j.physbeh.2013.07.009
2. National Heart, Lung, and Blood Institute. Overweight and obesity: treatment. US Department of Health and Human Services. Updated March 24, 2022. Accessed October 8, 2024. https://www.nhlbi.nih.gov/health/overweight-and-obesity/treatment
3. Greenway FL. Physiological adaptations to weight loss and factors favouring weight regain. Int J Obes (Lond). 2015;39(8):1188-1196.

PP-MG-IN-0561

ಪ್ರಮಾಣ ಕೊಡಿ, ಇಲ್ಲ ಕ್ಷಮೆ ಕೇಳಿ: ಆಯೋಗ ಆಗ್ರಹ

'ಮತ ಕಳವು': ರಾಹುಲ್ ಗಾಂಧಿಗೆ ಸಿಇಸಿ ಜ್ಞಾನೇಶ್ ಸವಾಲು

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಮತದಾರರ ಪಟ್ಟಿಯ ಅಕ್ರಮಗಳ ಕುರಿತ ತಮ್ಮ ಆರೋಪಕ್ಕೆ ಸಂಬಂಧಿಸಿದಂತೆ ಏಳು ದಿನಗಳ ಒಳಗಾಗಿ ಲಿಖಿತ ಪ್ರಮಾಣಪತ್ರ ಸಲ್ಲಿಸಬೇಕು. ಇಲ್ಲದಿದ್ದಲ್ಲಿ 'ಮತ ಕಳವು' ಆರೋಪವನ್ನು ಆಧಾರರಹಿತ, ಅಸಿಂಧು ಎಂದು ಪರಿಗಣಿಸಲಾಗುವುದು ಎಂದು ಚುನಾವಣಾ ಆಯೋಗ ಹೇಳಿದೆ.

ಇಲ್ಲದೇ ಹೋದರೆ, ನಿರಾಧಾರ ಆರೋಪ ಮಾಡಿದ್ದಕ್ಕಾಗಿ ದೇಶದ ಮುಂದೆ ಕ್ಷಮೆಯಾಚಿಸಬೇಕು ಎಂದೂ ಅದು ಭಾನುವಾರ ಆಗ್ರಹ ಮಾಡಿದೆ.

ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಮುಖ್ಯ ಚುನಾವಣಾ ಆಯುಕ್ತ (ಸಿಇಸಿ) ಜ್ಞಾನೇಶ್ ಕುಮಾರ್, 'ರಾಜಕೀಯ ಉದ್ದೇಶಗಳಿಗಾಗಿ ಮತದಾರರನ್ನು ಗುರಿಯಾಗಿಸಲು ಚುನಾವಣಾ ಆಯೋಗವನ್ನು ಅಸ್ತ್ರವಾಗಿ ಬಳಸಿಕೊಳ್ಳಲಾಗುತ್ತಿದೆ. ಇಂಥ ಸಂದರ್ಭದಲ್ಲಿ ಆಯೋಗವು ಮತದಾರರೊಂದಿಗೆ ನಿಲ್ಲಲಿದೆ' ಎಂದು ಹೇಳಿದರು.

'ಯಾವುದೇ ಒಂದು ಕ್ಷೇತ್ರದ ಮತದಾರನಲ್ಲದ ವ್ಯಕ್ತಿ ಲಿಖಿತ ಪ್ರಮಾಣಪತ್ರದ ಮೂಲಕ ಮಾತ್ರ ಆಯೋಗಕ್ಕೆ ದೂರು ಸಲ್ಲಿಸಬಹುದು. ರಾಹುಲ್ ಅವರು ಲಿಖಿತ ಪ್ರಮಾಣಪತ್ರ ಸಲ್ಲಿಸದೆಯೇ 1.5 ಲಕ್ಷ ಮತದಾರರಿಗೆ ಆಯೋಗ ನೋಟಿಸ್ ಕಳುಹಿಸಬೇಕೇ' ಎಂದು ಜ್ಞಾನೇಶ್ ಕುಮಾರ್ ಪ್ರಶ್ನಿಸಿದರು. 7

ಮತ ಕಳವು ಆರೋಪದ ಬಗ್ಗೆ ಲಿಖಿತ ಪ್ರಮಾಣ ಸಲ್ಲಿಸುವಂತೆ ಆಯೋಗವು ನನ್ನನ್ನು ಮಾತ್ರ ಕೇಳಿದೆ. ಬಿಜೆಪಿ ನಾಯಕರನ್ನು ಆಯೋಗ ಪ್ರಶ್ನಿಸಿರಲಿಲ್ಲ
ರಾಹುಲ್ ಗಾಂಧಿ, ಕಾಂಗ್ರೆಸ್ ನಾಯಕ

'ಮತದಾರನ ಅಧಿಕಾರ ಯಾತ್ರೆ'ಯಲ್ಲಿ ಪಾಲ್ಗೊಂಡಿದ್ದ ಕಾಂಗ್ರೆಸ್ ಬೆಂಬಲಿಗರು —ಪಿಟಿಐ ಚಿತ್ರ

'ಬಿಹಾರದಲ್ಲಿ ಅಕ್ರಮ ನಡೆಯಲು ಬಿಡೆವು'

ಸಾಸಾರಾಮ್ (ಬಿಹಾರ) (ಪಿಟಿಐ): ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು 'ಒಬ್ಬರಿಗೆ ಒಂದು ಮತ' ಎಂಬ ಪ್ರತಿಪಾದನೆಯೊಂದಿಗೆ 'ಮತದಾರನ ಅಧಿಕಾರ ಯಾತ್ರೆ'ಗೆ ಬಿಹಾರದ ಸಾಸಾರಾಮ್‌ನಲ್ಲಿ ಭಾನುವಾರ ಚಾಲನೆ ನೀಡಿದರು.

ನಂತರ ಜನರನ್ನು ಉದ್ದೇಶಿಸಿ ಮಾತನಾಡಿದ ಅವರು, 'ಚುನಾವಣಾ ಆಯೋಗವು ಬಿಜೆಪಿಯೊಂದಿಗೆ ಶಾಮೀಲಾಗಿ ಚುನಾವಣೆಗಳಲ್ಲಿ ಅಕ್ರಮ ನಡೆಸಿದೆ ಎಂಬುದು ಇಡೀ ದೇಶದ ಜನತೆಗೆ ತಿಳಿದಿದೆ. ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯಲ್ಲಿ ನಡೆಸಿದ್ದ ಅಕ್ರಮವನ್ನು ಬಿಹಾರ ವಿಧಾನಸಭೆ ಚುನಾವಣೆಯಲ್ಲೂ ನಡೆಸಲು 'ಇಂಡಿಯಾ' ಕೂಟ ಅವಕಾಶ ನೀಡುವುದಿಲ್ಲ' ಎಂದು ಹೇಳಿದರು.

ದೇಶದಾದ್ಯಂತ ವಿಧಾನಸಭೆ ಮತ್ತು ಲೋಕಸಭೆ ಚುನಾವಣೆಗಳಲ್ಲಿ ಅಕ್ರಮ ನಡೆದಿದೆ. ಇದೀಗ ಬಿಹಾರದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಮೂಲಕ ಮತದಾರರನ್ನು ಸೇರಿಸುವ ಮತ್ತು ಅಳಿಸಿಹಾಕುವ ಸಂಚು ರೂಪಿಸಿ, ಚುನಾವಣಾ ಅಕ್ರಮಕ್ಕೆ ಆಯೋಗ ಮುಂದಾಗಿದೆ ಎಂದು ಆರೋಪಿಸಿದರು. 7

ಶುಭಾಂಶುಗೆ ಭವ್ಯ ಸ್ವಾಗತ

ನವದೆಹಲಿ (ಪಿಟಿಐ): ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಿಂದ (ಐಎಸ್‌ಎಸ್) ಇತ್ತೀಚೆಗಷ್ಟೆ ವಾಪಸಾದ ಗಗನಯಾನಿ ಶುಭಾಂಶು ಶುಕ್ಲಾ ಅವರು ಭಾನುವಾರ ಮುಂಜಾನೆ ಭಾರತಕ್ಕೆ ಬಂದರು. ಇಲ್ಲಿನ ವಿಮಾನ ನಿಲ್ದಾಣದಲ್ಲಿ ಅಪಾರ ಸಂಖ್ಯೆಯ ಜನರು ಸೇರಿದ್ದರು. ತ್ರಿವರ್ಣ ಧ್ವಜ ಬೀಸುವ ಮೂಲಕ ಅವರು ಭವ್ಯ ಸ್ವಾಗತ ನೀಡಿದರು.

ಜೂನ್ 25ರಿಂದ ಜುಲೈ 15ರವರೆಗೆ 'ಆಕ್ಸಿಯಂ-4'ರ ಭಾಗವಾಗಿ ಬಾಹ್ಯಾಕಾಶದಲ್ಲಿ ಕಳೆದಿದ್ದ ಶುಭಾಂಶು ಅವರು, ಬಾಹ್ಯಾಕಾಶಕ್ಕೆ ತೆರಳಿದ ಎರಡನೇ ಭಾರತೀಯ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಶುಭಾಂಶು ಮತ್ತು ಅವರಿಗೆ ಪರ್ಯಾಯ ಎಂದು ಗುರುತಿಸಲಾಗಿದ್ದ ಗಗನಯಾತ್ರಿ ಪ್ರಶಾಂತ್ ಬಾಲಕೃಷ್ಣನ್ ನಾಯರ್ ಅವರನ್ನು ಕೇಂದ್ರ ಸಚಿವ ಜಿತೇಂದ್ರ ಸಿಂಗ್, ದೆಹಲಿ ಮುಖ್ಯಮಂತ್ರಿ ರೇಖಾ ಗುಪ್ತಾ ಮತ್ತು ಇಸ್ರೊ ಅಧ್ಯಕ್ಷ ವಿ.ನಾರಾಯಣನ್ ವಿಮಾನ ನಿಲ್ದಾಣದಲ್ಲಿ ಸ್ವಾಗತಿಸಿದರು. 10

ಎನ್‌ಡಿಎ ಉಪರಾಷ್ಟ್ರಪತಿ ಅಭ್ಯರ್ಥಿ ರಾಧಾಕೃಷ್ಣನ್

ನವದೆಹಲಿ (ಪಿಟಿಐ): ತಮಿಳುನಾಡಿನ ಬಿಜೆಪಿ ನಾಯಕ, ಆರ್‌ಎಸ್‌ಎಸ್ ಹಿನ್ನೆಲೆಯಿಂದ ಬಂದಿರುವ ಸಿ.ಪಿ. ರಾಧಾಕೃಷ್ಣನ್ ಅವರನ್ನು ಉಪರಾಷ್ಟ್ರಪತಿ ಸ್ಥಾನಕ್ಕೆ ಎನ್‌ಡಿಎ ಮೈತ್ರಿಕೂಟದ ಅಭ್ಯರ್ಥಿಯಾಗಿ ಭಾನುವಾರ ಆಯ್ಕೆ ಮಾಡಲಾಗಿದೆ.

ಮಹಾರಾಷ್ಟ್ರದ ರಾಜ್ಯಪಾಲರಾಗಿ ಕಾರ್ಯನಿರ್ವಹಿಸುತ್ತಿರುವ ರಾಧಾಕೃಷ್ಣನ್ ಅವರ ಹೆಸರನ್ನು ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಅಂತಿಮಗೊಳಿಸಲಾಯಿತು ಎಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ತಿಳಿಸಿದರು. 10

ELV BHASKAR FOUNDATION
HOPE BEGINS HERE

ELV GROUP

Founder's Day

ಹಿರಿಯರು ಕಿರಿಯರು ಎಂಬ ಬೇಧ ಭಾವ ಇಲ್ಲದೆ ನಗುನಗುತಾ ಎಲ್ಲರ ಬಾಳಲ್ಲಿ ಹೊಸಬೆಳಕನ್ನು ಮೂಡಿಸಿ, ನಮ್ಮಂತ ಎಷ್ಟೋ ಮನೆಗಳ ಮನವನ್ನು ಬೆಳಗಿಸಿ, ಎಲ್ಲರ ಪ್ರೀತಿಗೆ ಪಾತ್ರರಾಗಿರುವ ನಿಮ್ಮ ಬಾಳು ನಂದಾದೀಪವಾಗಿ ಸದಾ ಬೆಳಗುತ್ತಲೇ ಇರಲಿ ಮತ್ತು ನೀವು ಮಾಡುವ ಪ್ರತಿ ಪ್ರಯತ್ನದಲ್ಲೂ ನಿಮಗೆ ಗೆಲುವು ಸಿದ್ಧಿಸಿ ಎಂದೆಂದಿಗೂ ನೀವು ರಾಜಕುಮಾರರಂತೆ ರಾರಾಜಿಸಬೇಕೆಂದು, ಇಂತಹ ಮತ್ತಷ್ಟು ಹುಟ್ಟು ಹಬ್ಬಗಳನ್ನು ಅಧೂರಿಯಾಗಿ ಆಚರಿಸಬೇಕೆಂದು ಶುಭ ಹಾರೈಸುತ್ತೇವೆ.

Dr. Bhaskar. E
Founder and Chairman, ELV Group

Wishes by Board of Directors, Management & Staff, ELV Group

ELV PROJECTS · THE PRODIGIES INTERNATIONAL SCHOOL · WARNICK STUDIOS · ELV HEALTH CARE · AARNA REAL ESTATE DUBAI · CHEMTEX · MERCADOS · Blue Metals · Brünex · TORCH BEARER · URBAN · Earth Essence · ELEVON ELEVATORS PVT. LTD · VMAP · skygolf

ಕಥುವಾ: ಮೇಘಸ್ಫೋಟ

ಜಮ್ಮು (ಪಿಟಿಐ): ಕಥುವಾ ಜಿಲ್ಲೆಯಲ್ಲಿ ಭಾನುವಾರ ಸಂಭವಿಸಿದ ಮೇಘಸ್ಫೋಟ ಹಾಗೂ ಭೂಕುಸಿತದಿಂದ ಪ್ರತ್ಯೇಕ ಪ್ರಕರಣಗಳಲ್ಲಿ ನಾಲ್ಕು ಕುಟುಂಬಗಳ ಐದು ಮಂದಿ ಮಕ್ಕಳು ಸೇರಿದಂತೆ ಏಳು ಮಂದಿ ಮೃತಪಟ್ಟಿದ್ದಾರೆ. 11

ಚಿನಕುರುಳಿ ಪ್ರಕಾಶ್ ಶೆಟ್ಟಿ



ವೈದ್ಯಕೀಯ ಇಲಾಖೆಗೆ 'ಸಿಬ್ಬಂದಿ' ಸಂಕಷ್ಟ

ಐದು ವರ್ಷ ಮೇಲ್ಪಟ್ಟ ವೈದ್ಯರು, ಸಿಬ್ಬಂದಿ ನಿಯೋಜನೆ ವಾಪಸ್ ಪಡೆದ ಇಲಾಖೆ

21,860 ವೈದ್ಯಕೀಯ ಕಾಲೇಜಿಗೆ ಮಂಜೂರಾದ ಹುದ್ದೆಗಳು	**9,413** ಕೆಲಸ ಮಾಡುತ್ತಿರುವ ನೌಕರರು	**12,447** ಖಾಲಿ ಹುದ್ದೆಗಳು	**5,584** ಬೋಧನಾ ಆಸ್ಪತ್ರೆಗಳಿಗೆ ಮಂಜೂರಾದ ಹುದ್ದೆಗಳು	**2,028** ಪ್ರಸ್ತುತ ಇರುವ ನೌಕರರು	**3,556** ಖಾಲಿ ಹುದ್ದೆಗಳು

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ವೈದ್ಯಕೀಯ ಕಾಲೇಜು, ಬೋಧನಾ ಆಸ್ಪತ್ರೆಗಳಲ್ಲಿ ಐದು ವರ್ಷಕ್ಕಿಂತ ಹೆಚ್ಚು ನಿಯೋಜನೆಯಲ್ಲಿದ್ದ ಅಧಿಕಾರಿಗಳು ಮತ್ತು ಸಿಬ್ಬಂದಿ ಸೇವೆಯನ್ನು ಆರೋಗ್ಯ ಇಲಾಖೆ ಹಿಂದಕ್ಕೆ ಪಡೆದಿದ್ದು, ವೈದ್ಯಕೀಯ ಶಿಕ್ಷಣ ಇಲಾಖೆಗೆ 'ಸಿಬ್ಬಂದಿ' ಕೊರತೆ ಎದುರಾಗಿದೆ.

ವೈದ್ಯಕೀಯ ಶಿಕ್ಷಣ ಸಂಸ್ಥೆಗಳ ನಿರ್ವಹಣೆ, ಶಿಕ್ಷಣ ನೀತಿಗಳ ರಚನೆ, ಸಂಶೋಧನೆ, ವೈದ್ಯಕೀಯ ಕಾಲೇಜುಗಳ ಸಂಯೋಜನೆ ಮತ್ತು ಶಿಕ್ಷಣದ ಗುಣಮಟ್ಟದ ಸುಧಾರಣೆಗೆ ಹೆಚ್ಚಿನ ಗಮನಹರಿಸಲು ವೈದ್ಯಕೀಯ ಶಿಕ್ಷಣ ಇಲಾಖೆಯನ್ನು ರಚಿಸಲಾಗಿತ್ತು. ಆರೋಗ್ಯ ಇಲಾಖೆಯ ವೈದ್ಯರು, ಶುಶ್ರೂಷಣಾ ಅಧಿಕಾರಿಗಳು ಸೇರಿದಂತೆ ಹಲವು ಸಿಬ್ಬಂದಿ ಮೂರು ದಶಕಗಳಿಂದಲೂ ನಿಯೋಜನೆಯ ಮೇಲೆ ವೈದ್ಯಕೀಯ ಶಿಕ್ಷಣ ಇಲಾಖೆಯ ಕಾಲೇಜುಗಳು ಹಾಗೂ ಬೋಧನಾ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿದ್ದರು.

ಐದು ವರ್ಷಕ್ಕಿಂತ ಅಧಿಕ ಅವಧಿ ನಿಯೋಜನೆ ಮೇಲೆ ಇರುವ ಎಲ್ಲ ವೈದ್ಯರು, ಶುಶ್ರೂಷಣಾ ಅಧಿಕಾರಿಗಳು ಹಾಗೂ ಸಿಬ್ಬಂದಿಯನ್ನು ಮಾತೃ ಇಲಾಖೆಗೆ ವಾಪಸ್ ಕರೆಸಿಕೊಳ್ಳಲು ಇದೇ ವರ್ಷದ ಮೇನಲ್ಲಿ ಸಂಪುಟ ಸಭೆ ಒಪ್ಪಿಗೆ ನೀಡಿತ್ತು. 750ಕ್ಕೂ ಹೆಚ್ಚು ಅಧಿಕಾರಿಗಳು, ಸಿಬ್ಬಂದಿ 30ರಿಂದ 34 ವರ್ಷ ನಿಯೋಜನೆಯಲ್ಲೇ ಕಳೆದಿದ್ದರು. ನಂತರ ಎಲ್ಲರನ್ನೂ ಕೌನ್ಸೆಲಿಂಗ್ ಮೂಲಕ ಹಂತಹಂತವಾಗಿ ಆರೋಗ್ಯ ಇಲಾಖೆಯ ಆಸ್ಪತ್ರೆಗಳಿಗೆ ವರ್ಗಾವಣೆ ಮಾಡಲಾಗಿದೆ. 5

ನಿಯೋಜನೆ ಮೇಲಿದ್ದವರನ್ನು ಆರೋಗ್ಯ ಇಲಾಖೆ ವಾಪಸ್ ಪಡೆದಿದೆ. ಒಳಮೀಸಲಾತಿ ನಿರ್ಧಾರವಾಗದೆ ಹುದ್ದೆಗಳ ಭರ್ತಿಗೆ ಅವಕಾಶ ಇಲ್ಲ. ಹೊರಗುತ್ತಿಗೆ ಮೇಲೆ ನೇಮಕಕ್ಕೆ ಅನುಮತಿ ನೀಡಲಾಗಿದೆ
ಡಾ.ಶರಣಪ್ರಕಾಶ ಪಾಟೀಲ, ವೈದ್ಯಕೀಯ ಶಿಕ್ಷಣ ಸಚಿವ

Advt.

ದಿಗಂತ್ ಮಂಚಾಲೆ

ಪುನಃ ಇಂಧನ ತುಂಬಿಸದೆ, ಒಂದೇ ಒಂದು ಟ್ಯಾಂಕ್ ಭರ್ತಿ ಇಂಧನದಲ್ಲಿ 1200+ ಕಿ.ಮೀ. ಟೊಯೊಟ ಹೈರೈಡರ್ ಹೈಬ್ರಿಡ್ ಚಲಾಯಿಸಿದರು

#ನನ್ನ ಮೊದಲ ಟೊಯೊಟ ಹೈರೈಡರ್ ಹೈಬ್ರಿಡ್

ಸಿಂಗಲ್ ಟ್ಯಾಂಕ್ ಇಂಧನದಲ್ಲಿ ಮೂರು ದಿನಗಳ ಕಾಲ ರಾಜ್ಯಾದ್ಯಂತ 1,200 ಕಿಲೊ ಮೀಟರ್‌ಗೂ ಅಧಿಕ ದೂರ ಕ್ರಮಿಸುವ ಗುರಿಯೊಂದಿಗೆ, ತನ್ನ ಟೊಯೊಟ ಅರ್ಬನ್ ಕ್ರೂಸರ್ ಹೈರೈಡರ್ ಹೈಬ್ರಿಡ್ ವಾಹನದಲ್ಲಿ ಸಂಚರಿಸಿದ, ಕನ್ನಡ ಚಿತ್ರಲೋಕದ ಅಚ್ಚುಮೆಚ್ಚಿನ ನಟ, ದಿಗಂತ್ ಮಂಚಾಲೆ ರವರ ಸಾಧನೆಗೆ ಕರ್ನಾಟಕದ ಹೆದ್ದಾರಿಗಳು ಸಾಕ್ಷಿಯಾಗಿವೆ.

ಬೆಂಗಳೂರಿನ ಹೆಗ್ಗುರುತು ವಿಧಾನಸೌಧದಿಂದ ಆರಂಭವಾದ ಪ್ರಯಾಣ ಚಿತ್ರದುರ್ಗ, ಹೊಸಪೇಟೆ ಮಾರ್ಗವಾಗಿ ಪಾರಂಪರಿಕ ಪ್ರವಾಸಿ ತಾಣವಾದ ಹಂಪಿ ಪಟ್ಟಣದಲ್ಲಿ ಮೊದಲ ದಿನದ ಪ್ರಯಾಣ ಪೂರ್ಣಗೊಂಡಿತು. ಎರಡನೇ ದಿನ ಬೆಳಗಾವಿ ತಲುಪುವುದಕ್ಕೂ ಮುನ್ನವೇ

ಆಹ್ಲಾದಕರತೆ ಮತ್ತು ತಂತ್ರಜ್ಞಾನದ ಸಂಗಮ

ಹೈರೈಡರ್ ಒಳಾಂಗಣದಲ್ಲಿ ವಾತಾನುಕೂಲಿತ ಚರ್ಮದ ಆಸನಗಳಿವೆ, ಪನೋರಮಿಕ್ ಚಾವಣಿ ಜೊತೆಗೆ ವೈರ್‌ಲೆಸ್ ಚಾರ್ಜಿಂಗ್, 360* ಕ್ಯಾಮೆರಾ, ಹೆಡ್-ಅಪ್ ಡಿಸ್‌ಪ್ಲೇ, ಮತ್ತು ಆಕರ್ಷಕ ಬೆಳಕಿನ ವ್ಯವಸ್ಥೆಗಳಿವೆ. ಹಿಂಭಾಗದ ಆಸನದಲ್ಲಿ ಪ್ರಯಾಣಿಸುವವರು ರಿಕ್ಲೈನಿಂಗ್ ಸೀಟ್ ಆನಂದಾನುಭವ ಪಡೆಯುತ್ತಾರೆ. 60:40 ಅನುಪಾತದಲ್ಲಿ ಹೊಂದಾಣಿಕೆ ಮಾಡಬಲ್ಲ ಸ್ಪೋರೇಜ್ ಸಾಮರ್ಥ್ಯವಿದೆ. ಆರು ಏರ್‌ಬ್ಯಾಗ್‌ಗಳ ವ್ಯವಸ್ಥೆಯು ಪ್ರಯಾಣಕರ ಸುರಕ್ಷತೆಯನ್ನು ಖಚಿತಪಡಿಸುತ್ತವೆ. ರಿಮೋಟ್ ಏ.ಸಿ., ರಿಮೋಟ್ ಇಗ್ನಿಷನ್ ಮತ್ತು ಸ್ಮಾರ್ಟ್‌ವಾಚ್ ಕನೆಕ್ಟಿವಿಟಿ ಸೌಕರ್ಯಗಳು, ಈ ವಾಹನದಲ್ಲಿನ ಆಧುನಿಕ ಅನುಕೂಲತೆಗಳಾಗಿವೆ.

ಟೊಯೊಟದಿಂದ ಈ ಹೈರೈಡರ್‌ಗೆ 3-ವರ್ಷ/100,000 ಕಿ.ಮೀ. ಸ್ಟಾಂಡರ್ಡ್ ವಾರಂಟಿ ಮತ್ತು ಹೈಬ್ರಿಡ್ ಬ್ಯಾಟರಿಗೆ 8-ವರ್ಷ/160,000 ಕಿ.ಮೀ. ವಾರಂಟಿ ನೀಡಿದೆ.

ಬೆಳಗಾವಿ



ಬದಾಮಿ ಗುಹಾಂತರ ದೇವಾಲಯಗಳ ದರ್ಶನ ಪೂರೈಸಿಕೊಂಡು, ಮೂರನೇ ದಿನ ಹುಬ್ಬಳ್ಳಿ, ದಾವಣಗೆರೆ ಮತ್ತು ತುಮಕೂರು ಮಾರ್ಗವಾಗಿ ಸಂಚರಿಸುತ್ತ, ತುಮಕೂರಿನ ಶ್ರೀ ಸಿದ್ಧಗಂಗಾ ಮಠದ ಎದುರು ಪ್ರಯಾಣ ಅಂತ್ಯಗೊಂಡಿತು.

ಮೈಲೇಜ್ ದಕ್ಷತೆಯ ಪುರಾವೆ

ಬೆಂಗಳೂರು

"ಕರ್ನಾಟಕದ ಅತ್ಯಂತ ಸುಂದರ ಮಾರ್ಗಗಳಾದ್ಯಂತ, ಸಿಂಗಲ್ ಟ್ಯಾಂಕ್ ಇಂಧನದೊಂದಿಗೆ ಹೈರೈಡರ್ ಚಲಾಯಿಸಿದ್ದು, ಒಂದು ಅವಿಸ್ಮರಣೀಯ ಅನುಭವ - ಮೈಲೇಜ್, ಕಾರ್ಯಕ್ಷಮತೆ ಮತ್ತು ಆಹ್ಲಾದಕರತೆ ಸೂಕ್ತ ಸಂಗಮವಾಗಿದೆ ಈ ವಾಹನ".
- ದಿಗಂತ್ ಮಂಚಾಲೆ

ವಾಸ್ತವಿಕ ಸ್ಥಿತಿಗತಿಗಳಲ್ಲಿ ಹೈಬ್ರಿಡ್ ಶಕ್ತಿ

ವಾಸ್ತವ ಲೋಕದ ಬಯಲುಸೀಮೆಯಲ್ಲಿ - ನಗರದ ರಸ್ತೆಗಳಿಂದ ವಿಶಾಲ ಹೆದ್ದಾರಿಗಳು ಮತ್ತು ಗುಡ್ಡಗಾಡು ರಸ್ತೆಗಳಲ್ಲಿ ನಡೆಸಲಾದ ಈ ಚಾಲನಾ ಪರೀಕ್ಷೆಯಲ್ಲಿ ಹೈರೈಡರ್‌ನ ಸೆಲ್ಫ್-ಚಾರ್ಜಿಂಗ್ ಹೈಬ್ರಿಡ್ ವ್ಯವಸ್ಥೆಯು ತನ್ನ ಕಾರ್ಯಕ್ಷಮತೆ ಸಾಬೀತುಪಡಿಸಿದೆ.

- **ನಿಧಾನವಾಗಿ ಸಂಚರಿಸುವ ಮತ್ತು ಸಂಚಾರ ದಟ್ಟಣೆ ಇರುವ ರಸ್ತೆಗಳಲ್ಲಿ ಇಲೆಕ್ಟ್ರಿಕ್ ಮೋಡ್ ನಿಂದಾಗಿ ಇಂಧನ ಕಡಿತ ಸಾಧ್ಯವಾಯಿತು.**
- **ಪೆಟ್ರೋಲ್ ಇಂಜಿನ್‌ನಿಂದಾಗಿ ಹೆದ್ದಾರಿಯಲ್ಲಿ ಸಂಚಾರಕ್ಕೆ ಶಕ್ತಿ ಲಭಿಸಿತು ಮತ್ತು ಬ್ಯಾಟರಿ ರಿಚಾರ್ಜ್ ಆಯಿತು.**

ಈ ಸಂದರ್ಭದಲ್ಲಿ ಎಆರ್‌ಎಐ ಮೈಲೇಜ್ ಶ್ರೇಯಾಂಕ ಪ್ರತಿ ಲೀಟರ್‌ಗೆ 27.97 ಕಿ.ಮೀ. ಆಗಿದ್ದರೆ, ಹಲವಾರು ಚಾಲಕರು ಪ್ರತಿ ಲೀಟರ್‌ಗೆ 28-30 ಕಿ.ಮೀ. ಎಂದು ತಿಳಿಸಿದ್ದಾರೆ. ಇನ್ನು ಕೆಲವರು

ಸೂರ್ಯೋದಯ: 6:08 ಸೂರ್ಯಾಸ್ತ : 6:40 ಚಂದ್ರೋದಯ: ರಾ. 12:07 ಚಂದ್ರಾಸ್ತ: ಮ. 1:29 | ಭಾನುವಾರದ ಉಷ್ಣಾಂಶ : ಗರಿಷ್ಠ 25° ಕನಿಷ್ಠ 20°

ಸೋಮವಾರ • ಆಗಸ್ಟ್ 18, 2025

ಸೋಮವಾರದ ಉಷ್ಣಾಂಶ 25° ಗರಿಷ್ಠ 20° ಕನಿಷ್ಠ | ಮಂಗಳವಾರ 26° : 20° | ಬುಧವಾರ 27° : 20° | ಗುರುವಾರ 27° : 20°

ಪ್ರಜಾವಾಣಿ

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಸಾಧಾರಣ ಮಳೆಯಾಗುವ ಸಾಧ್ಯತೆ

ಗಜಪಡೆ ಚಿನ್ನಾಟ, ಭಾವುಕರಾದ ಸಿಬ್ಬಂದಿ

ಜಪಾನ್ ಪರಿಸರಕ್ಕೆ ಹೊಂದಿಕೊಂಡ ಬನ್ನೇರುಘಟ್ಟ ಆನೆಗಳು

ಪ್ರಜಾವಾಣಿ ವಾರ್ತೆ

ಜಪಾನ್‌ನಲ್ಲಿ ಗಜರಾಜನ ಚಿನ್ನಾಟ

ಆನೇಕಲ್: ಬನ್ನೇರುಘಟ್ಟ ಜೈವಿಕ ಉದ್ಯಾನದಿಂದ ಜಪಾನಿನ ಹಿಮೇಜಿ ಸೆಂಟ್ರಲ್ ಪಾರ್ಕ್‌ಗೆ ತೆರಳಿದ್ದ ನಾಲ್ಕು ಆನೆಗಳು ಅಲ್ಲಿನ ಪರಿಸರಕ್ಕೆ ಹೊಂದಿಕೊಂಡಿವೆ. ಅಲ್ಲಿನ ರೀತಿ-ರಿವಾಜು ಕಲಿಯತೊಡಗಿವೆ.

ಇಲ್ಲಿಂದ ಹೋಗುವಾಗ ಒಲ್ಲದ ಮನಸ್ಸಿನಿಂದಲೇ ಕಣ್ಣೀರು ಹಾಕುತ್ತಾ ತೆರಳಿದ್ದ ಆನೆಗಳಿಗೆ ಹೊಸ ಮನೆ, ಹೊಸ ವಾತಾವರಣ ಸಂಭ್ರಮ ತಂದಿದೆ. ಆದರೆ, ಮಾವುತರು ಮತ್ತು ಮೇಲ್ವಿಚಾರಣೆ ತಂಡಕ್ಕೆ ಭಾರದ ಮನಸ್ಸು. ಆದರೂ, ಖುಷಿಯ ವಿದಾಯದೊಂದಿಗೆ ವಾಪಸ್ ಬಂದಿದ್ದಾರೆ.

'ಕಬ್ಬು ತಿನ್ನಿಸಿ ವಿದಾಯ ಹೇಳುವಾಗ ನಮ್ಮಿಂದ ದೂರ ಆಗುತ್ತಿವೆ ಎಂಬ ನೋವು ಕಾಡುತ್ತಿತ್ತು. ಆದರೆ, ಸಂಭ್ರಮದಿಂದ ಚಿನ್ನಾಟ ಆಡುತ್ತಿರುವುದನ್ನು ಕಂಡು ಆನಂದವಾಯಿತು. ನಮ್ಮ ಆನೆಗಳನ್ನು ಚೆನ್ನಾಗಿ ನೋಡಿಕೊಳ್ಳಿ ಎಂದು ಅಲ್ಲಿನ ಸಿಬ್ಬಂದಿಗೆ ಹೇಳಿ ಹೊರಡುವಾಗ ಕಣ್ಣಂಚಿನಲ್ಲಿ ನೀರು ಜಿನುಗಿತು' ಎಂದು ಅಲ್ಲಿನ ಕ್ಷಣಗಳನ್ನು ನೆನೆದು ಸಿಬ್ಬಂದಿ ಭಾವುಕರಾದರು.

ಜುಲೈ 24ರಂದು ಪ್ರಾಣಿ ವಿನಿಮಯ ಯೋಜನೆಯಡಿ ಬನ್ನೇರುಘಟ್ಟ ಜೈವಿಕ ಉದ್ಯಾನದಿಂದ ಸುರೇಶ್, ತುಳಸಿ, ಗೌರಿ ಮತ್ತು ಶೃತಿ ಎಂಬ ಆನೆಗಳನ್ನು ಕಳುಹಿಸಿ ಕೊಡಲಾಗಿತ್ತು. ಇವುಗಳ ಜತೆ ಮಾವುತರು, ವೈದ್ಯರು, ಮೇಲ್ವಿಚಾರಕರು ಮತ್ತು ಜೀವಶಾಸ್ತ್ರಜ್ಞರು ಸೇರಿ ಎಂಟು ಮಂದಿಯ ತಂಡವೂ ತೆರಳಿತ್ತು.

ಈ ತಂಡವು ಆನೆಗಳ ಜತೆಗೆ 15 ದಿನ ಉಳಿದುಕೊಂಡು ಹೊಸ ಪರಿಸರಕ್ಕೆ ಹೇಗೆ ಹೊಂದಿಕೊಳ್ಳಬೇಕು. ಯಾವ ರೀತಿ ವರ್ತನೆ ಮಾಡಬೇಕೆಂದು ಮಕ್ಕಳಿಗೆ ಬುದ್ಧಿವಾದ ಹೇಳಿದಂತೆ ತರಬೇತಿ ನೀಡಿದ್ದಾರೆ. ಜತೆಗೆ ಆರೈಕೆ, ಲಾಲನೆ-ಪಾಲನೆ ಹೇಗೆ ಮಾಡಬೇಕೆಂದು ಹಿಮೇಜಿ ಸೆಂಟ್ರಲ್ ಪಾರ್ಕ್ ಸಿಬ್ಬಂದಿಗೆ ಹೇಳಿಕೊಟ್ಟಿದ್ದಾರೆ. ಆನೆಗಳ ಜತೆ ತೆರಳಿದ್ದ ತಂಡವು ಆಗಸ್ಟ್ 10ರಂದು ಬನ್ನೇರುಘಟ್ಟಕ್ಕೆ ವಾಪಸ್ ಬಂದಿದೆ.

ಹೊಸ ಪರಿಸರದಲ್ಲಿ ಆರೋಗ್ಯವಾಗಿರುವ ಕಾರಣ ಕ್ವಾರಂಟೈನ್ ಮುಕ್ತಗೊಳಿಸಲಾಗಿದೆ. ಹಿಮೇಜಿ ಸೆಂಟ್ರಲ್ ಪಾರ್ಕ್‌ನಲ್ಲಿ ಗಜಮುಖ ಗಣಪತಿಗೆ ಪೂಜೆ ಸಲ್ಲಿಸುವುದರೊಂದಿಗೆ ಆನೆ ಬಿಡಾರವನ್ನು ಅನಾವರಣಗೊಳಿಸಲಾಗಿದೆ. ಆಗಸ್ಟ್ 9ರಿಂದ ಹಿಮೇಜಿ ಸೆಂಟ್ರಲ್ ಪಾರ್ಕ್‌ನಲ್ಲಿ ಆನೆಗಳ ವೀಕ್ಷಣೆಗೆ ಅವಕಾಶ ಮಾಡಿಕೊಡಲಾಗಿದೆ ಎನ್ನುತ್ತಾರೆ ಮಾವುತ ಕಾರ್ತಿಕ್.

ಪಾಲನೆಗೆ ಕೊರತೆ ಇಲ್ಲ

ನಾಲ್ಕು ಆನೆಗಳು ಅಲ್ಲಿನ ವಾತಾವರಣಕ್ಕೆ ಒಗ್ಗಿಕೊಂಡಿದ್ದು, ಆರೋಗ್ಯವಾಗಿವೆ. ಅಲ್ಲಿನ ಸಿಬ್ಬಂದಿಗೆ ಉತ್ತಮವಾಗಿ ಸ್ಪಂದಿಸುತ್ತಿವೆ ಎಂದು ಆನೆಗಳ ಜತೆ ತೆರಳಿದ್ದ ಬನ್ನೇರುಘಟ್ಟದ ಜೀವಶಾಸ್ತ್ರಜ್ಞರಾದ ಐಶ್ವರ್ಯಾ ಮಾಹಿತಿ ನೀಡಿದರು.

ಕಠಿಣವಾದ ತರಬೇತಿ ನೀಡಿದ್ದರಿಂದ ಆನೆಗಳು ವಿಮಾನದಲ್ಲಿ ಸುಗಮವಾಗಿ ಪ್ರಯಾಣಿಸಲು ಅನುಕೂಲವಾಯಿತು. ಜಪಾನ್‌ನ ಜನರು ಶಿಸ್ತಿಗೆ ಹೆಚ್ಚಿನ ಮಹತ್ವ ನೀಡುತ್ತಾರೆ. ಆನೆಗಳ ಪಾಲನೆಯನ್ನು ಕರಾರುವಕ್ಕಾಗಿ ಮಾಡುತ್ತಿರುವುದು ಸಂತಸ ತಂದಿದೆ. ಬನ್ನೇರುಘಟ್ಟದ ಆನೆಗಳನ್ನು ಜಪಾನ್‌ನಲ್ಲಿ ಬಿಟ್ಟು ನೆಮ್ಮದಿಯಿಂದ ಬರಲು ಸಾಧ್ಯವಾಯಿತು ಎಂದು ತಿಳಿಸಿದರು.

ಮುದ್ದೆ ಮಾಡುವುದನ್ನು ಕಲಿತ ಜಪಾನ್ ಸಿಬ್ಬಂದಿ

ಅಲ್ಲಿನ ಸಿಬ್ಬಂದಿಗೆ ಆನೆಗೆ ಅವಶ್ಯಕ ಆಹಾರ ತಯಾರು ಮಾಡುವ ತರಬೇತಿ ನೀಡಲಾಗಿದೆ. ಪ್ರತಿ ಆನೆಗೆ 150 ಕೆ.ಜಿ ಆಹಾರ ನೀಡಬೇಕು. ಅದರಲ್ಲಿ ಹಣ್ಣು, ಹುಲ್ಲು, ಮುದ್ದೆ, ಬೆಲ್ಲ ಸೇರಿಸಬೇಕು. ಜಪಾನ್‌ನವರಿಗೆ ಬನ್ನೇರುಘಟ್ಟದ ಬಾಣಸಿಗರು ವಿವಿಧ ಭಕ್ಷ್ಯ ತಯಾರಿ ಮಾಡುವುದನ್ನು ಕಲಿಸಿಕೊಟ್ಟಿದ್ದಾರೆ.

'ಹಿಮೇಜಿ ಸೆಂಟ್ರಲ್ ಪಾರ್ಕ್ ಸಿಬ್ಬಂದಿ ನಾವು ಹೇಳಿಕೊಟ್ಟ ಪಾಠ ಬೇಗ ಕಲಿತು ಅವರೇ ಮುದ್ದೆ ತಯಾರಿಸುತ್ತಿದ್ದಾರೆ' ಎಂದು ಜಪಾನ್‌ಗೆ ತೆರಳಿದ್ದ ಆನೆಗಳ ಮೇಲ್ವಿಚಾರಕ ಸುರೇಶ್ ತಿಳಿಸಿದರು.

'ಕೊನೆಯ ನಾಲ್ಕು ದಿನಗಳು ನಾವ್ಯಾರೂ ಸಹಾಯ ಮಾಡದೇ ಅವರನ್ನೇ ಅಡುಗೆ ಮಾಡಲು ಬಿಟ್ಟೆವು. ಅವರು ಪಕ್ಕಾ ಭಾರತೀಯ ಬಾಣಸಿಗರಂತೆ ಮುದ್ದೆ ಮಾಡಿ ಆನೆಗಳಿಗೆ ತಿನಿಸಿದರು. ಆನೆಗಳು ಇವರ ಕೈ ರುಚಿಗೆ ಪಳಗಿವೆ' ಎಂದು ಅಲ್ಲಿನ ಅನುಭವ ಹಂಚಿಕೊಂಡರು ಸಿಬ್ಬಂದಿ.

ಮಲೆನಾಡು, 'ಕಲ್ಯಾಣ'ದಲ್ಲಿ ಮಳೆ

ಪ್ರಜಾವಾಣಿ ವಾರ್ತೆ

ಶೃಂಗೇರಿಯಲ್ಲಿ ತುಂಗಾ ನದಿ ಮೈದುಂಬಿ ಹರಿಯಿತು ಚಿತ್ರ: ಕೆ.ಎನ್.ರಾಘವೇಂದ್ರ

ಬೆಂಗಳೂರು: ರಾಜ್ಯದ ಚಿಕ್ಕಮಗಳೂರು, ಕೊಡಗು ಹಾಗೂ ಕಲ್ಯಾಣ ಕರ್ನಾಟಕದ ಕಲಬುರ್ಗಿ, ಯಾದಗಿರಿ ಜಿಲ್ಲೆಗಳಲ್ಲಿ ಭಾನುವಾರ ಧಾರಾಕಾರ ಮಳೆಯಾಗಿದೆ.

ಕುದುರೆ ಮುಖ ಭಾಗದಲ್ಲಿ ಭಾರಿ ಮಳೆ ಇದ್ದು, ತುಂಗಾ ನದಿ ಮೈದುಂಬಿ ಹರಿಯುತ್ತಿದೆ.

ಶೃಂಗೇರಿ, ಕೊಪ್ಪ, ಕಳಸ, ಎನ್.ಆರ್. ಪುರ, ಮೂಡಿಗೆರೆ ವ್ಯಾಪ್ತಿಯಲ್ಲಿ ಜೋರು ಮಳೆ ಇದೆ. ಚಾರ್ಮಾಡಿ ಘಾಟಿಯಲ್ಲಿ ಜೋರು ಮಳೆಯಿಂದಾಗಿ ವಾಹನ ಸವಾರರು ಪರದಾಡಿದರು.

ಕೊಡಗು ಜಿಲ್ಲೆಯ ಮಡಿಕೇರಿ, ವಿರಾಜಪೇಟೆಯಲ್ಲಿ ಮಳೆ ಬಿರುಸಾಗಿದೆ. ಮಡಿಕೇರಿ ತಾಲ್ಲೂಕಿನ ಹೆರವ ನಾಡುನಲ್ಲಿ ವಿದ್ಯುತ್ ಕಂಬ ಬಿದ್ದು, ಕೊಟ್ಟಿಗೆ ಸಂಪೂರ್ಣ ಹಾನಿಯಾಗಿದೆ.

ಕಲ್ಯಾಣ ಕರ್ನಾಟಕದ ಕಲಬುರಗಿ ಹಾಗೂ ಯಾದಗಿರಿ ಜಿಲ್ಲೆಗಳ ವಿವಿಧೆಡೆ ಭಾನುವಾರ ಉತ್ತಮ ಮಳೆ ಸುರಿಯಿತು.

ಶಿವಮೊಗ್ಗ ವರದಿ: ಜಿಲ್ಲೆಯ ವಿವಿಧೆಡೆ ಇಡೀ ದಿನ ಮಳೆ ಇದ್ದು, ತುಂಗ-ಭದ್ರಾ ಹಾಗೂ ಲಿಂಗನಮಕ್ಕಿ ಜಲಾಶಯಗಳಿಗೆ ಹರಿವು ಹೆಚ್ಚಿದ್ದು, ತುಂಗಾ ಜಲಾಶಯ ಭರ್ತಿ ಆಗಿದೆ.

ದಾವಣಗೆರೆ ನಗರದಲ್ಲೂ ಭಾನುವಾರ ದಿನವಿಡೀ ಬಿಟ್ಟು ಬಿಟ್ಟು ಮಳೆಯಾಗಿದೆ. ಚಿತ್ರದುರ್ಗದಲ್ಲಿ ಸೋನೆ ಮತ್ತು ಮೊಳಕಾಲ್ಮುರು ತಾಲ್ಲೂಕಿನಾದ್ಯಂತ ಧಾರಾಕಾರ ಮಳೆ ಇದೆ.

5 ಜಿಲ್ಲೆಗೆ 'ರೆಡ್ ಅಲರ್ಟ್'

ಧಾರಾಕಾರ ಮಳೆ ಸಾಧ್ಯತೆ ಹಿನ್ನೆಲೆಯಲ್ಲಿ ಹವಾಮಾನ ಇಲಾಖೆ ಸೋಮವಾರ ಐದು ಜಿಲ್ಲೆಗಳಿಗೆ 'ರೆಡ್ ಅಲರ್ಟ್' ಹಾಗೂ ನಾಲ್ಕು ಜಿಲ್ಲೆಗಳಿಗೆ 'ಆರೆಂಜ್ ಅಲರ್ಟ್' ಘೋಷಿಸಿದೆ.

ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ, ಮಲೆನಾಡಿನ ಶಿವಮೊಗ್ಗ ಹಾಗೂ ಚಿಕ್ಕಮಗಳೂರು ಜಿಲ್ಲೆಗೆ 'ರೆಡ್ ಅಲರ್ಟ್' ನೀಡಲಾಗಿದೆ.

ಕಲಬುರಗಿ, ವಿಜಯಪುರ, ಬೆಳಗಾವಿ ಹಾಗೂ ಕೊಡಗು ಜಿಲ್ಲೆಗೆ 'ಆರೆಂಜ್ ಅಲರ್ಟ್' ನೀಡಲಾಗಿದೆ. ಉತ್ತರ ಹಾಗೂ ದಕ್ಷಿಣ ಒಳನಾಡಿನ ಉಳಿದ ಜಿಲ್ಲೆಗಳಲ್ಲಿ ಸಾಧಾರಣ ಮಳೆ ಸಾಧ್ಯತೆಯಿದೆ ಎಂದು ಇಲಾಖೆ ತಿಳಿಸಿದೆ.

ಮಳೆ: ಎಲ್ಲಿ, ಎಷ್ಟು?

(ಸೆಂಟಿ ಮೀಟರ್‌ಗಳಲ್ಲಿ)

ಶಿವಮೊಗ್ಗ ಜಿಲ್ಲೆ	
ಚಕ್ರಾ	21
ಮಾಸ್ತಿಕಟ್ಟೆ	17.4
ಹುಲಿಕಲ್	16.1
ಯಡೂರು	14,
ಸಾವೇಹಕ್ಲು	13.5
ಮಾಣಿ	10.4
ಕೊಡಗು ಜಿಲ್ಲೆ	
ಶ್ರೀಮಂಗಲ, ಕೊಡ್ಲಿಪೇಟೆ	8
ಸಂಪಾಜೆ, ಶನಿವಾರಸಂತೆ, ಶಾಂತಳ್ಳಿ	ತಲಾ 7.6
ಮಡಿಕೇರಿ	5.5

ಸಮಾಧಿ ಜಾಗದಲ್ಲೇ ಸ್ಮಾರಕ ನಿರ್ಮಿಸಿ: ಅಭಿಮಾನಿಗಳ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಷ್ಣುವರ್ಧನ್ ಸ್ಮಾರಕ ನಿರ್ಮಾಣ ವಿಚಾರದಲ್ಲಿ ಅವರ ಅಭಿಮಾನಿಗಳ ಜತೆ ನಮ್ಮ ಕುಟುಂಬ ನಿಲ್ಲುತ್ತದೆ' ಎಂದು ನಟ ಅನಿರುದ್ಧ ಹೇಳಿದರು.

ವಿಷ್ಣುವರ್ಧನ್ ಪುಣ್ಯಭೂಮಿ ಉಳಿವಿಗೆ ಹೋರಾಟ ಹಾಗೂ ಸಮಾಧಿ ನೆಲಸಮ ವಿಚಾರವಾಗಿ ನಟ ಅನಿರುದ್ಧ ಅವರು ಭಾನುವಾರ ಬೆಂಗಳೂರಿನ ಜಯನಗರದಲ್ಲಿರುವ ವಿಷ್ಣುವರ್ಧನ್ ನಿವಾಸದಲ್ಲಿ ಸಭೆ ನಡೆಸಿ ಮಾತನಾಡಿದರು. ಉತ್ತರಹಳ್ಳಿ-ಕೆಂಗೇರಿ ರಸ್ತೆಯಲ್ಲಿನ ಅಭಿಮಾನ್ ಸ್ಟುಡಿಯೊದಲ್ಲಿ ಈ ಹಿಂದೆ ವಿಷ್ಣುವರ್ಧನ್ ಸಮಾಧಿಯಿದ್ದ ಜಾಗದಲ್ಲಿಯೇ ಅವರ ಸ್ಮಾರಕ ನಿರ್ಮಾಣವಾಗಬೇಕೆಂದು ವಿಷ್ಣುವರ್ಧನ್ ಅಭಿಮಾನಿಗಳು ಸಭೆಯಲ್ಲಿ ಒತ್ತಾಯಿಸಿದರು.

'ಅಭಿಮಾನ್ ಸ್ಟುಡಿಯೊದಲ್ಲಿ ನಡೆದ ಘಟನೆ ಖಂಡನೀಯ. ನಮಗೆಲ್ಲರಿಗೂ ದುಃಖವಾಗಿದೆ. ನಮ್ಮ ಕುಟುಂಬದ ಮೇಲೆ ಒಂದಷ್ಟು ಜನ ಆರೋಪ ಮಾಡುತ್ತಿದ್ದಾರೆ. ಆದರೆ ನಾವು ಈ ಹಿಂದೆ ಸ್ಮಾರಕ ವಿಷಯವಾಗಿ ನಮ್ಮ ಮನೆಯಲ್ಲಿಯೇ ಎರಡು ಸಲ ಸಭೆ ನಡೆಸಿದ್ದೆವು. ಅದಕ್ಕೆ ಬೇಕಾದ ಸಾಕ್ಷ್ಯಗಳಿವೆ. ಸಮಾಧಿ ತೆರವು ವಿಚಾರ ನಮಗೆ ಗೊತ್ತಿತ್ತು, ಆ ವಿಚಾರದಲ್ಲಿ ದುಡ್ಡು ಬಂದಿದೆ ಅಂತೆಲ್ಲ ಕೆಲವರು ಹೇಳುತ್ತಿದ್ದಾರೆ. ಇದೆಂಥಾ ವಿಕೃತ ಮನಸ್ಸು? ತಂದೆ ಸ್ಮಾರಕ ತೆರವುಗೊಳಿಸಲು ನಾವು ದುಡ್ಡು ತೆಗೆದುಕೊಳ್ಳುತ್ತೇವಾ?' ಎಂದು ಅವರು ಬೇಸರ ವ್ಯಕ್ತಪಡಿಸಿದರು.

'ಈಗ ಸಮಾಧಿಯಿರುವ ಜಾಗದಲ್ಲಿಯೇ ಸ್ಮಾರಕ ನಿರ್ಮಾಣವಾಗಬೇಕೆಂಬುದು ಅಭಿಮಾನಿಗಳ ಒತ್ತಾಯ. ಅವರ ನಿಲುವಿಗೆ ಕುಟುಂಬ ಬದ್ಧವಾಗಿದೆ. ಮುಂದಿನ ಹೆಜ್ಜೆ ಕುರಿತು ಸಂಬಂಧಿತರೊಂದಿಗೆ ಚರ್ಚಿಸುತ್ತೇವೆ' ಎಂದು ಅವರು ತಿಳಿಸಿದರು.

'ಕುಟುಂಬದವರ ಮಾತಿಗೆ ನಾವು ಬದ್ಧರಾಗಿ ಇರುತ್ತೇವೆ. ಯಾವುದೇ ಕಾರಣಕ್ಕೂ ನಾವು ಬೇರೆ ಜಾಗ ಕೇಳಲ್ಲ. ಆ ಜಾಗವನ್ನೇ ಖರೀದಿ ಮಾಡಬೇಕು ಎಂದರೂ ನಾವು ತಲಾ ಒಂದು ಲಕ್ಷ ರೂಪಾಯಿ ನೀಡಲು ಸಿದ್ಧರಾಗಿದ್ದೇವೆ. ಪುಣ್ಯಭೂಮಿಗೆ ಅದೇ ಜಾಗ ಬೇಕಾಗುತ್ತದೆ' ಎಂದು ವಿಷ್ಣು ಅಭಿಮಾನಿಗಳ ಸಂಘದ ಕ್ರಾಂತಿರಾಜು ಹೇಳಿದರು.

10 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳ ನೋಂದಣಿ

ವಿದೇಶಿ ಅಧ್ಯಯನ ಮೇಳಕ್ಕೆ ಸ್ಪಂದನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಓದುವ ಅವಕಾಶ ದೊರೆತರೆ ಯಾರಿಗೆ ಬೇಡ ಹೇಳಿ. ಪ್ರತಿ ಕುಟುಂಬಕ್ಕೂ, ಪ್ರತಿ ವಿದ್ಯಾರ್ಥಿಗೂ ಅಂಥದ್ದೊಂದು ಬಯಕೆ ಒಂದಲ್ಲ ಒಮ್ಮೆ ಕಾಡಿರಲೂ ಸಾಕು. ಕೌಶಲಾಭಿವೃದ್ಧಿ ಇಲಾಖೆ ಮತ್ತು ಕರ್ನಾಟಕ ವೃತ್ತಿಪರ ತರಬೇತಿ ಮತ್ತು ಕೌಶಲ್ಯ ಅಭಿವೃದ್ಧಿ ನಿಗಮ (ಕೆವಿಟಿಎಸ್‌ಡಿಸಿ) ನಗರದಲ್ಲಿ ಆಯೋಜಿಸಿದ್ದ 'ವಿದೇಶದಲ್ಲಿ ಅಧ್ಯಯನ ಮೇಳ'ವು ರಾಜ್ಯದ ವಿದ್ಯಾರ್ಥಿಗಳಿಗೆ ಅಂಥದ್ದೊಂದು ವೇದಿಕೆ ಒದಗಿಸಿಕೊಟ್ಟಿತ್ತು.

ನಗರದ ಹೋಟೆಲ್ ಲಲಿತ್ ಅಶೋಕದಲ್ಲಿ ಆಯೋಜಿಸಲಾಗಿದ್ದ ಮೇಳದಲ್ಲಿ ಅಮೆರಿಕ, ಆಸ್ಟ್ರೇಲಿಯ, ಜರ್ಮನಿ, ಬ್ರಿಟನ್‌ನ ಹಲವು ವಿಶ್ವವಿದ್ಯಾಲಯಗಳೂ ಸೇರಿ ಜಾಗತಿಕ ಮಟ್ಟದ 65 ಶೈಕ್ಷಣಿಕ ಸಂಸ್ಥೆಗಳು ಭಾಗಿಯಾಗಿದ್ದವು. ಈ ವಿಶ್ವವಿದ್ಯಾಲಯಗಳಲ್ಲಿ ಅಧ್ಯಯನದ ಅವಕಾಶಗಳ ಬಗ್ಗೆ ಪರಿಶೀಲಿಸಲು 10,000ಕ್ಕೂ ಹೆಚ್ಚು ವಿದ್ಯಾರ್ಥಿಗಳು ತಮ್ಮ ಪೋಷಕರ ಜತೆಗೆ ಮೇಳಕ್ಕೆ ಬಂದಿದ್ದರು.

ಮೇಳವು ಬೆಳಿಗ್ಗೆ 10ಕ್ಕೆ ಆರಂಭವಾಗಲಿತ್ತಾದರೂ, 9 ಗಂಟೆಯ ಹೊತ್ತಿಗೇ ಸಾವಿರಾರು ವಿದ್ಯಾರ್ಥಿಗಳು ನೋಂದಣಿಗೆ ಸರದಿಯಲ್ಲಿ ನಿಂತಿದ್ದರು. ಈ ಮೊದಲೇ ಆನ್‌ಲೈನ್‌ನಲ್ಲಿ ನೋಂದಣಿ ಮಾಡಿಸಿದ್ದ 5 ಸಾವಿರ ವಿದ್ಯಾರ್ಥಿಗಳು ಮತ್ತು ಸ್ಥಳದಲ್ಲೇ ನೋಂದಣಿ ಮಾಡಿಸಿದ 5,000 ಮಂದಿ ಮೇಳಕ್ಕೆ ಕಳೆತಂದರು.

ಕೆವಿಟಿಎಸ್‌ಡಿಸಿ ಮೂಲಕ ಅರ್ಜಿ ಸಲ್ಲಿಸುವ ಅರ್ಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಒದಗಿಸುವುದಾಗಿ ಹಲವು ವಿಶ್ವವಿದ್ಯಾಲಯಗಳು ಮೇಳದಲ್ಲಿಯೇ ಘೋಷಿಸಿದವು. ಯೂನಿವರ್ಸಿಟಿ ಆಫ್ ವೆಸ್ಟರ್ನ್ ಆಸ್ಟ್ರೇಲಿಯಾ ಪದವಿ ವಿದ್ಯಾರ್ಥಿಗಳಿಗೆ 48,000 ಆಸ್ಟ್ರೇಲಿಯನ್ ಡಾಲರ್, ಸ್ನಾತಕ ಪದವಿ ವಿದ್ಯಾರ್ಥಿಗಳಿಗೆ 24,000 ಆಸ್ಟ್ರೇಲಿಯನ್ ಡಾಲರ್, ಯೂನಿವರ್ಸಿಟಿ ಆಫ್ ಈಸ್ಟ್ ಆಂಗ್ಲಿಯಾ ಶುಲ್ಕದಲ್ಲಿ ಶೇ 50ರಷ್ಟು, ಬಾಂಗೋರ್ ಯೂನಿವರ್ಸಿಟಿಯು ಶುಲ್ಕದಲ್ಲಿ ಶೇ 50ರಷ್ಟು ವಿದ್ಯಾರ್ಥಿವೇತನ ನೀಡುವುದಾಗಿ ಘೋಷಿಸಿದವು.

'ಬಹುತೇಕ ವಿದ್ಯಾರ್ಥಿಗಳು ಎಂಜಿನಿಯರಿಂಗ್, ಕೃತಕ ಬುದ್ಧಿಮತ್ತೆ ಮತ್ತು ಫಾರ್ಮಸಿ ಕೋರ್ಸ್ ಬಗ್ಗೆ ವಿವರಣೆ ಪಡೆದರು. ವಿದ್ಯಾರ್ಥಿವೇತನ, ಉದ್ಯೋಗಾವಕಾಶಗಳ ಬಗ್ಗೆ ಮಾಹಿತಿ ಪಡೆದರು' ಎಂದು ಅಮೆರಿಕದ ನಾರ್ತ್ ಟೆಕ್ಸಾಸ್ ಯೂನಿವರ್ಸಿಟಿಯ ಪ್ರತಿನಿಧಿ ಗೀತಾ ಕುರುಬ ಹೇಳಿದರು.

ಮೇಳದ ಅಂತ್ಯದ ವೇಳೆಗೆ ಕೌಶಲಾಭಿವೃದ್ಧಿ ಸಚಿವ ಶರಣ ಪ್ರಕಾಶ ಪಾಟೀಲ, ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ, ಉನ್ನತ ಶಿಕ್ಷಣ ಸಚಿವ ಎಂ.ಸಿ.ಸುಧಾಕರ್ ಅವರು ವಿದ್ಯಾರ್ಥಿಗಳ ಜತೆಗೆ ಸಂವಾದ ನಡೆಸಿದರು. ಇಂತಹ ಮೇಳಗಳನ್ನು ಮತ್ತಷ್ಟು ನಡೆಸುವಂತೆ, ರಾಜ್ಯ ಸರ್ಕಾರದಿಂದಲೂ ವಿದ್ಯಾರ್ಥಿ ವೇತನ ಒದಗಿಸುವಂತೆ ವಿದ್ಯಾರ್ಥಿಗಳು ಕೋರಿದರು. ಈ ಬಗ್ಗೆ ಪರಿಶೀಲನೆ ನಡೆಸಲಾಗುವುದು ಎಂದು ಮೂವರು ಸಚಿವರೂ ಹೇಳಿದರು.

'ವಿದ್ಯಾರ್ಥಿಗಳ ಕಲ್ಯಾಣಕ್ಕೆ ಕಟಿಬದ್ಧ'

'ವಿದ್ಯಾರ್ಥಿಗಳ ಕಲ್ಯಾಣಕ್ಕೆ ಸರ್ಕಾರ ಕಟಿಬದ್ಧವಾಗಿದೆ. ವಿದೇಶದಲ್ಲಿ ಓದಲು ಬಯಸುವ ವಿದ್ಯಾರ್ಥಿಗಳಿಗೆ ಲಭ್ಯವಿರುವ ಅವಕಾಶಗಳ ಬಗ್ಗೆ ಮುಕ್ತ ಮತ್ತು ಪಾರದರ್ಶಕವಾದ ಮಾರ್ಗದರ್ಶನ ಒದಗಿಸುವುದು ಈ ಮೇಳದ ಉದ್ದೇಶವಾಗಿತ್ತು. ಈ ನಿಟ್ಟಿನಲ್ಲಿ ಮೇಳವು ಯಶಸ್ವಿಯಾಗಿದೆ. ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತಹ ಕ್ರಮಗಳನ್ನು ತೆಗೆದುಕೊಳ್ಳುವಲ್ಲಿ ನಮ್ಮ ಸರ್ಕಾರವು ಸದಾ ಮುಂದಿರುತ್ತದೆ' ಎಂದು ಸಚಿವ ಶರಣ ಪ್ರಕಾಶ ಪಾಟೀಲ ಹೇಳಿದರು.

'ಕನ್ನಡ ಸಂಶೋಧನೆ: ಗೌರವ ತಗ್ಗಿಸಿದ ಮಾರ್ಗದರ್ಶಕರು'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಾಹಿತ್ಯದ ಸಂಶೋಧನೆ ಮಾಡುವ ಬದಲು ಹಣ ಪಡೆದು ಪಿಎಚ್.ಡಿ ಪ್ರಬಂಧ ಬರೆದುಕೊಡುವ ಚಟುವಟಿಕೆಗಳು ಇತ್ತೀಚೆಗೆ ಹೆಚ್ಚಾಗುತ್ತಿವೆ ಎಂದು ಸಾಹಿತಿ ಓ.ಎಲ್.ನಾಗಭೂಷಣಸ್ವಾಮಿ ಹೇಳಿದರು.

ನಗರದ ಗಾಂಧಿ ಭವನದಲ್ಲಿ ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯೋದ್ಯಮ ಕನ್ನಡ ಸಂಘಗಳ ಒಕ್ಕೂಟ ಭಾನುವಾರ ಆಯೋಜಿಸಿದ್ದ ಪಂಪೋತ್ಸವದಲ್ಲಿ ಎಂ.ತಿಮ್ಮಯ್ಯ ಅವರ 'ನಿಚ್ಚಂ ಪೊಸತು', 'ಸರ್ವಕಾಲಕ್ಕೂ ಪಂಪ' ಪುಸ್ತಕಗಳ ಲೋಕಾರ್ಪಣೆ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಕನ್ನಡ ಸಾಹಿತ್ಯದಲ್ಲಿ ಸಂಶೋಧನೆ ಮಾಡಬಯಸುವವರು ನೋಂದಣಿ ಮಾಡಿಸುವುದರಿಂದ ಮೊದಲ್ಗೊಂಡು ಪ್ರಬಂಧ ಸಲ್ಲಿಸುವವರೆಗೂ ₹2 ಲಕ್ಷದಿಂದ ₹5 ಲಕ್ಷವನ್ನು ಮಾರ್ಗದರ್ಶಕರಿಗೆ ಕೊಡಬೇಕಾದ ವಾತಾವರಣ ನಿರ್ಮಿಸಲಾಗಿದೆ. ಹಣ ಪಡೆದ ನಂತರ ಪ್ರಬಂಧವನ್ನು ಹೇಗೆ ನೀಡಿದರೂ ಅದನ್ನು ಪಿಎಚ್.ಡಿ ಪದವಿಗೆ ಪರಿಗಣಿಸಲಾಗುತ್ತಿದೆ. ಕನ್ನಡದಲ್ಲಿ ಪಿಎಚ್.ಡಿ ಪಡ

ಪರಿಸರ ಸ್ನೇಹಿ ಕೈಚೀಲ ಬಳಸಿ: ರಾಮಲಿಂಗಾರೆಡ್ಡಿ

'ಪ್ಲಾಸ್ಟಿಕ್ ಮುಕ್ತ ದೇವಾಲಯಗಳ ಅಭಿಯಾನ'ಕ್ಕೆ ಚಾಲನೆ ನೀಡಿದ ಸಚಿವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಜರಾಯಿ ದೇವಸ್ಥಾನಗಳಲ್ಲಿ ಏಕಬಳಕೆಯ ಪ್ಲಾಸ್ಟಿಕ್ ನಿಷೇಧಿಸಲಾಗಿದ್ದು, ಪರಿಸರಕ್ಕೆ ಹಾನಿಯಾಗದ ಕೈಚೀಲಗಳನ್ನು ಭಕ್ತರು ಬಳಸಬೇಕು ಎಂದು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ಬಸವನಗುಡಿ ದೊಡ್ಡಗಣಪತಿ ದೇವಸ್ಥಾನದಲ್ಲಿ ಭಾನುವಾರ ಹಮ್ಮಿಕೊಂಡಿದ್ದ 'ಪ್ಲಾಸ್ಟಿಕ್ ಮುಕ್ತ ದೇವಾಲಯಗಳ ಅಭಿಯಾನ- ಪರಿಸರ ಉಳಿಸಿ, ಪರಿಸರ ಬೆಳೆಸಿ' ಜಾಗೃತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಬೇರೆ ರಾಜ್ಯಗಳಿಂದ ಕರ್ನಾಟಕಕ್ಕೆ ಪ್ಲಾಸ್ಟಿಕ್ ಪೂರೈಕೆ ಆಗುತ್ತಿರುವುದರಿಂದ ಅದರ ಬಳಕೆ ಹೆಚ್ಚುತ್ತಿದೆ. ಪ್ಲಾಸ್ಟಿಕ್ ನಿಷೇಧಿಸಿ ರಾಜ್ಯ ಸರ್ಕಾರ ತೀರ್ಮಾನ ಕೈಗೊಂಡಿದ್ದರೂ ಈ ಕಾರಣದಿಂದ ಸಂಪೂರ್ಣವಾಗಿ ನಿಯಂತ್ರಣಕ್ಕೆ ಬಂದಿಲ್ಲ . ರಾಜ್ಯ ಸರ್ಕಾರ ಮಾತ್ರವಲ್ಲ, ಕೇಂದ್ರ ಸರ್ಕಾರವೂ ಪ್ಲಾಸ್ಟಿಕ್ ನಿಷೇಧಿಸಬೇಕು ಎಂದು ಆಗ್ರಹಿಸಿದರು.

ಶಾಸಕ ಎಲ್.ಎ. ರವಿ ಸುಬ್ರಹ್ಮಣ್ಯ ಮಾತನಾಡಿ, 'ರಾಜ್ಯದ ಯಾವುದೇ ದೇವಾಲಯಗಳ ಆವರಣದಲ್ಲಿ ಮರು ಬಳಕೆಯಾಗದ ಪ್ಲಾಸ್ಟಿಕ್ ಉಪಯೋಗಿಸಬಾರದು ಎಂಬುದು ಒಳ್ಳೆಯ ನಿರ್ಧಾರವಾಗಿದೆ' ಎಂದರು.

ರಾಮಲಿಂಗಾರೆಡ್ಡಿ ಅವರು ಬಟ್ಟೆಯ ಕೈಚೀಲಗಳನ್ನು ವಿತರಿಸಿದರು. ಯು.ಬಿ.ವೆಂಕಟೇಶ್ ಉಪಸ್ಥಿತರಿದ್ದರು

ವಿಧಾನ ಪರಿಷತ್‌ನ ಮಾಜಿ ಸದಸ್ಯ ಯು.ಬಿ. ವೆಂಕಟೇಶ್, ದೊಡ್ಡಗಣಪತಿ ದೇವಾಲಯದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಶ್ರೀನಿವಾಸ್, ಜಿಲ್ಲಾ ಧಾರ್ಮಿಕ ಪರಿಷತ್ತಿನ ಸದಸ್ಯ ಕೆ.ಎಸ್. ನಾಗರಾಜ್, ಧಾರ್ಮಿಕ ಇಲಾಖೆಯ ಕೇಂದ್ರ ಸ್ಥಾನಿಕ ಸಹಾಯಕ ಮಹೇಶ್ ಉಪಸ್ಥಿತರಿದ್ದರು.

ಬಸವನಗುಡಿಯ ದೊಡ್ಡಗಣಪತಿ ದೇವಾಲಯಕ್ಕೆ ಭೇಟಿ ನೀಡಿದ್ದ ಮಹಿಳೆಯರಿಗೆ ಸಚಿವರು ಬಟ್ಟೆಯ ಕೈಚೀಲ ವಿತರಿಸಿದರು.

'ಸಹಕಾರ ಮುಖ್ಯ'

ಹಿಂದೂ ಧಾರ್ಮಿಕ ಹಾಗೂ ಧರ್ಮಾದಾಯ ದತ್ತಿಗಳ ಇಲಾಖೆಯಡಿ (ಮುಜರಾಯಿ) 34,500ಕ್ಕೂ ಅಧಿಕ ದೇವಸ್ಥಾನಗಳಿವೆ. ಇಲ್ಲಿ ಪ್ಲಾಸ್ಟಿಕ್ ಬಳಸಬಾರದು ಎಂಬ ತೀರ್ಮಾನ ಕೈಗೊಳ್ಳಲಾಗಿದೆ. ಈ ಕುರಿತು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಭಕ್ತರು ಸಹಕಾರ ನೀಡಬೇಕು ಎಂದು ರಾಮಲಿಂಗಾರೆಡ್ಡಿ ಕೋರಿದರು.

ಸುದ್ದಿ ವೈವಿಧ್ಯಕ್ಕೆ
prajavani.net ಗೆ ಭೇಟಿ ಮಾಡಿ

ನಂದಿ ಗಿರಿಧಾಮಕ್ಕೆ ಪ್ರವಾಸಿಗರ ಲಗ್ಗೆ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ನಂದಿಬೆಟ್ಟಕ್ಕೆ ಭಾನುವಾರ ಭಾರಿ ಸಂಖ್ಯೆಯಲ್ಲಿ ಪ್ರವಾಸಿಗರು ಭೇಟಿ ನೀಡಿದರು. ಇದರಿಂದ ಕಿಲೋಮೀಟರ್ ಗಟ್ಟಲೆ ಸಂಚಾರ ದಟ್ಟಣೆ ಉಂಟಾಯಿತು. ನಿಯಂತ್ರಿಸಲು ಸಾಧ್ಯವಾಗದಷ್ಟು ಸಂಖ್ಯೆಯಲ್ಲಿ ಪ್ರವಾಸಿಗರು ಭೇಟಿ ನೀಡಿದ ಕಾರಣ ಟಿಕೆಟ್ ಕೌಂಟರ್‌ಗಳ ಮುಂದೆ ದಟ್ಟಣೆ ಹೆಚ್ಚಿತ್ತು.

ಬೆಳ್ಳಂಬೆಳಿಗ್ಗೆ 10 ಸಾವಿರಕ್ಕೂ ಹೆಚ್ಚು ಪ್ರವಾಸಿಗರು ನಂದಿ ಬೆಟ್ಟಕ್ಕೆ ಬಂದಿದ್ದರು. ಟಿಕೆಟ್ ವಿತರಿಸುವಲ್ಲಿ ಅವ್ಯವಸ್ಥೆ ಉಂಟಾಯಿತು. ಟಿಕೆಟ್ ಪಡೆಯಲು ಪ್ರವಾಸಿಗರು ಮುಗಿಬಿದ್ದರು.

ಸಾವಿರಾರು ಪ್ರವಾಸಿಗರಿಗೆ ಎರಡು ಕೌಂಟರ್‌ನಲ್ಲಿ ಮಾತ್ರ ಟಿಕೆಟ್ ವಿತರಿಸಲಾಯಿತು. ಮಳೆ ಲೆಕ್ಕಿಸದೆ ಟಿಕೆಟ್‌ಗಾಗಿ ಮಹಿಳೆಯರು, ಮಕ್ಕಳು, ಯುವ ಸಮುದಾಯ ಸಾಲುಗಟ್ಟಿದ್ದರು. ಗಿರಿಧಾಮದಲ್ಲಿನ ಈ ಅವ್ಯವಸ್ಥೆ ಬಗ್ಗೆ ಪ್ರವಾಸಿಗರು ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಚಾರ್ಟರ್ಡ್ ಸಹಕಾರಿ ಬ್ಯಾಂಕ್‌ನ ರಜತ ಮಹೋತ್ಸವ ಕಾರ್ಯಕ್ರಮದಲ್ಲಿ ಸ್ಮರಣಸಂಚಿಕೆ ಬಿಡುಗಡೆಗೊಳಿಸಲಾಯಿತು

'ಚಾರ್ಟರ್ಡ್ ಸಹಕಾರಿ ಬ್ಯಾಂಕ್ ಮಾದರಿ'

ಪ್ರಜಾವಾಣಿ ವಾರ್ತೆ

ಬೊಮ್ಮನಹಳ್ಳಿ: 'ಸಹಕಾರಿ ಬ್ಯಾಂಕುಗಳು ಮುಚ್ಚುತ್ತಿರುವ ಸಂದರ್ಭದಲ್ಲಿ ಚಾರ್ಟರ್ಡ್ ಸಹಕಾರಿ ಬ್ಯಾಂಕ್ ಗ್ರಾಹಕರ ವಿಶ್ವಾಸ ಗಳಿಸಿ ಲಾಭದಾಯಕವಾಗಿ ಮುನ್ನಡೆಯುತ್ತಿದೆ ಎಂದು ಸಹಕಾರ ಅಭಿವೃದ್ಧಿ ಅಧಿಕಾರಿ ಮಾಧವರೆಡ್ಡಿ ತಿಳಿಸಿದರು.

ಭಾನುವಾರ ಕೋರಮಂಗಲದಲ್ಲಿ ನಡೆದ ಚಾರ್ಟರ್ಡ್ ಸಹಕಾರಿ ಬ್ಯಾಂಕ್ ರಜತ ಮಹೋತ್ಸವವನ್ನು ಉದ್ಘಾಟಿಸಿ ಮಾತನಾಡಿದರು.

ಚಾರ್ಟರ್ಡ್ ಬ್ಯಾಂಕ್ 2022ನೇ ಸಾಲಿನ ದೇಶದ ಅತ್ಯುತ್ತಮ ಬ್ಯಾಂಕ್ ಎಂಬ ಭಾಜನಕ್ಕೆ ಪಾತ್ರವಾಗಿದೆ. ಜತೆಗೆ ಅನುತ್ಪಾದಕ ಆಸ್ತಿಯ ಪ್ರಮಾಣವನ್ನು ಶೂನ್ಯಕ್ಕಿಳಿಸಿದ ಸಾಧನೆ ಮಾಡುವ ಮೂಲಕ ದೇಶಕ್ಕೆ ಮಾದರಿಯಾಗಿದೆ ಎಂದು ಶ್ಲಾಘಿಸಿದರು.

ಬ್ಯಾಂಕ್ ಆಡಳಿತ ಮಂಡಳಿ ಅಧ್ಯಕ್ಷ ಎಂ.ಮುನಿರೆಡ್ಡಿ ಮಾತನಾಡಿ, 'ಕೇವಲ ₹80 ಲಕ್ಷ ಬಂಡವಾಳದೊಂದಿಗೆ ಆರಂಭವಾದ ಬ್ಯಾಂಕ್ ಇಂದು ₹170 ಕೋಟಿ ವಹಿವಾಟು ನಡೆಸುವ ಹಂತಕ್ಕೆ ಬೆಳೆದಿದೆ. ಆರು ಸಾವಿರಕ್ಕೂ ಹೆಚ್ಚು ಗ್ರಾಹಕರನ್ನು ಹೊಂದಿದೆ ಎಂದರು.

ಉಪಾಧ್ಯಕ್ಷ ನಾರಾಯಣ ಎಸ್. ಭಟ್, ಸಂಸ್ಥಾಪಕ ಅಧ್ಯಕ್ಷ ಎಂ.ನಾಗರಾಜ್, ಸಂಸ್ಥಾಪಕ ಉಪಾಧ್ಯಕ್ಷ ವಿಜಯರಾಘವ ರೆಡ್ಡಿ, ಬ್ಯಾಂಕಿನ ಸಿಇಒ ಕೆ.ಬಿ. ಶಿವಣ್ಣ, ಆಡಳಿತ ಮಂಡಳಿ ಸದಸ್ಯರಾದ ಮುನಿವೆಂಕಟಪ್ಪ, ವೆಂಕಟೇಶ್ ಅಯ್ಯರ್ ಇದ್ದರು. ರಜತ ಮಹೋತ್ಸವದ ಸ್ಮರಣೆ ಸಂಚಿಕೆಯನ್ನು ಬಿಡುಗಡೆ ಮಾಡಲಾಯಿತು.

'ವಿಜಯನಗರ ಅರಸರಿಂದ ಧರ್ಮಾತೀತ ಆಡಳಿತ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಜಯನಗರ ಸಾಮ್ರಾಜ್ಯದ ಅರಸರು ಧರ್ಮಾತೀತ ಆಡಳಿತ ನಡೆಸುವ ಮೂಲಕ ಕಲೆ, ಸಾಹಿತ್ಯ ಮತ್ತು ವಾಸ್ತುಶಿಲ್ಪಕ್ಕೆ ತಮ್ಮದೆ ಆದ ಕೊಡುಗೆ ನೀಡಿದ್ದಾರೆ. ಆ ವಾಸ್ತುಶಿಲ್ಪವನ್ನು ಸಂರಕ್ಷಿಸಿ, ಮುಂದಿನ ಪೀಳಿಗೆಗೆ ಪರಿಚಯಿಸುವ ಹೊಣೆಗಾರಿಕೆ ನಮ್ಮ ಮೇಲಿದೆ' ಎಂದು ನಿವೃತ್ತ ಐಎಎಸ್ ಅಧಿಕಾರಿ ಚಿರಂಜೀವಿಸಿಂಘ್ ಹೇಳಿದರು.

ಭಾರತೀಯ ವಿದ್ಯಾಭವನ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಶ್ರೀಕೃಷ್ಣ ದೇವರಾಯನ ವಂಶಸ್ಥ ತಿರುಮಲ ವೆಂಕಟ ದೇವರಾಯ ಅವರು ಸಂಪಾದಿಸಿರುವ 'ಇನ್ ದಿ ಎಂಪೈರ್ ಆಫ್ ದಿ ಗಾಡ್ ಕಿಂಗ್' ಪುಸ್ತಕವನ್ನು ಜನಾರ್ಪಣೆ ಮಾಡಿ, ಮಾತನಾಡಿದರು.

'ವಿಜಯನಗರ ಸಾಮ್ರಾಜ್ಯವನ್ನು ಅಳಿದವರಲ್ಲಿ ಶ್ರೀಕೃಷ್ಣ ದೇವರಾಯ ದೂರದೃಷ್ಟಿ ಹೊಂದಿದ್ದರು. ಕನ್ನಡ, ತೆಲುಗು, ಸಂಸ್ಕೃತ ಭಾಷೆಯ ಕವಿಗಳಿಗೆ ಆಶ್ರಯ ನೀಡಿದ್ದ ಅವರು, ಸಾಹಿತ್ಯದ ಪೋಷಣೆ ಜತೆಗೆ ವಿವಿಧ ದೇವಾಲಯಗಳನ್ನು ನಿರ್ಮಿಸುವ ಮೂಲಕ ಸಾಮ್ರಾಜ್ಯದ ಚರಿತ್ರೆಯನ್ನು ಶಾಶ್ವತವಾಗಿ ಉಳಿಯುವಂತೆ ಮಾಡಿದ್ದಾರೆ. ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿದ್ದ ಹಂಪಿ, ಈಗ ಪ್ರವಾಸಿ ತಾಣ ಮಾತ್ರವಾಗಿರದೆ ವಿಶ್ವಪಾರಂಪರಿಕ ಪಟ್ಟಿಯಲ್ಲಿ ಸೇರಿದೆ' ಎಂದರು.

'ಶ್ರೀಕೃಷ್ಣ ದೇವರಾಯ ಅರಸ ಮಾತ್ರವಾಗಿರದೆ, ಸ್ವತಃ ಕವಿಯಾಗಿದ್ದರು. ಅವರ ಆಡಳಿತದಲ್ಲಿ ಹಿಂದೂ-ಮುಸ್ಲಿಮರಲ್ಲಿ ಪರಸ್ಪರ ಸಾಮರಸ್ಯವಿತ್ತು. ಇದಕ್ಕೆ ಸಾಕ್ಷಿ ಎಂಬಂತೆ ಹಂಪಿಯಲ್ಲಿ ನಿರ್ಮಿಸಿರುವ ದೇವಾಲಯಗಳು ಹಾಗೂ ಗೋಪುರಗಳು ಇಂಡೋ-ಸಾರ್ಸೆನಿಕ್ ವಾಸ್ತುಶಿಲ್ಪ ಶೈಲಿಯನ್ನು ಒಳಗೊಂಡಿವೆ' ಎಂದು ಹೇಳಿದರು.

ಶ್ರೀಕೃಷ್ಣ ದೇವರಾಯರನ 19ನೇ ವಂಶಸ್ಥ ಶ್ರೀಕೃಷ್ಣ ದೇವರಾಯ ಅವರು ಪುಸ್ತಕದ ಬಗ್ಗೆ ಮಾತನಾಡಿದರು.

ಎಡಿಜಿಪಿ ಎಸ್. ಮುರುಗನ್ ಮಾತನಾಡಿದರು. ಭಾರತೀಯ ವಿದ್ಯಾಭವನದ ಅಧ್ಯಕ್ಷ ಕೆ.ಜಿ.ರಾಘವನ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಶಾಸಕ ಶಿವಗಂಗಾಗೆ ನೋಟಿಸ್ ಜಾರಿ

ಬೆಂಗಳೂರು: ಮುಖ್ಯಮಂತ್ರಿ ಬದಲಾವಣೆ ಕುರಿತು ಬಹಿರಂಗವಾಗಿ ಹೇಳಿಕೆ ನೀಡಿರುವ ಚನ್ನಗಿರಿ ಶಾಸಕ ಶಿವಗಂಗಾ ಬಸವರಾಜು ಅವರಿಗೆ ಕೆಪಿಸಿಸಿ ಶಿಸ್ತು ಸಮಿತಿ ಭಾನುವಾರ ನೋಟಿಸ್ ನೀಡಿದ್ದು, ಉತ್ತರ ನೀಡಲು ಏಳು ದಿನಗಳ ಕಾಲಾವಕಾಶ ನೀಡಲಾಗಿದೆ.

'ಮುಜುಗರ ಉಂಟುಮಾಡುವ ಹೇಳಿಕೆಗಳನ್ನು ಮಾಧ್ಯಮಗಳಿಗೆ ನೀಡುವ ಮೂಲಕ ಪಕ್ಷದ ಶಿಸ್ತು ಉಲ್ಲಂಘಿಸಿದ್ದೀರಿ. ನೋಟಿಸ್‌ಗೆ ಸೂಕ್ತ ಸಮಜಾಯಿಷಿ ನೀಡಿ' ಎಂದು ಶಿಸ್ತು ಸಮಿತಿಯ ಸಂಚಾಲಕರಾದ ನಿವೇದಿತ್ ಆಳ್ವಾ ಅವರು ನೀಡಿರುವ ನೋಟಿಸ್‌ನಲ್ಲಿ ಸೂಚಿಸಲಾಗಿದೆ.

ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ

ವೇಗ ಚಾಲನೆ ಮುಖ್ಯವಲ್ಲ ಸುರಕ್ಷಿತ ಚಾಲನೆ ಮುಖ್ಯ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಡಿ ಕೆ ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

ಅತಿವೇಗದಿಂದ ವಾಹನ ಚಾಲನೆ ಮಾಡಿದ ಪರಿಣಾಮ 24 ವರ್ಷದ ಮಗ ಸಾವಿಗೀಡಾಗಿ, ಆತನ ತಾಯಿ ಅದೇ ಚಿಂತೆಯಲ್ಲೇ ಕೊನೆಯುಸಿರೆಳೆದಿರುತ್ತಾರೆ. ಹೀಗೆ ತನ್ನ ಮಗ ಹಾಗೂ ಹೆಂಡತಿಯನ್ನು ಕಳೆದುಕೊಂಡ ವ್ಯಕ್ತಿಯು ಎಲ್ಲರಿಗೂ ಹೇಳುವ ಕಿವಿಮಾತು,

"ಸ್ವಲ್ಪ ತಡವಾದರೂ ಸರಿ, ನಿಧಾನವಾಗಿ ಚಲಿಸಿ ಸುರಕ್ಷಿತವಾಗಿ ತಲುಪಿ"

ನಿಮ್ಮ ಕುಟುಂಬವನ್ನು ಸಂಕಷ್ಟದಿಂದ ತಪ್ಪಿಸಿ.

*ಮೋಟಾರು ವಾಹನ ಕಾಯ್ದೆ 1988ರ ಕಲಂ -183ರ ಅಡಿ ಅತಿವೇಗದ ಚಾಲನೆ ಶಿಕ್ಷಾರ್ಹ ಅಪರಾಧವಾಗಿದೆ.

ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರಾದ ಶ್ರೀ ರಾಮಲಿಂಗಾರೆಡ್ಡಿ ರವರು ಇಲಾಖಾ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಸಂದರ್ಭ

ನಿಮ್ಮ ಒಂದು ಕ್ಷಣದ ದುಡುಕುತನ ನಿಮ್ಮವರನ್ನು ಸಂಕಷ್ಟಕ್ಕೆ ಸಿಲುಕಿಸುತ್ತದೆ. ಜವಾಬ್ದಾರಿಯಿಂದ ಚಾಲನೆಮಾಡಿ, ಕುಟುಂಬವನ್ನು ಸಂತೋಷವಾಗಿಡಿ.

ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ನಿಧಾನಿಸಿ ವೇಗದ ಮಿತಿಯನ್ನು ಅನುಸರಿಸಿ

ಚಿಟಿಕೆ ಸುದ್ದಿ

ಆಗಸ್ಟ್ 20ರಿಂದ ಪುಸ್ತಕಗಳ ಪ್ರದರ್ಶನ

ಬೆಂಗಳೂರು: 2022ರಲ್ಲಿ ಪ್ರಥಮ ಮುದ್ರಣಗೊಂಡ ಪುಸ್ತಕಗಳ ಆಯ್ಕೆ ಪ್ರಕ್ರಿಯೆಯನ್ನು ರಾಜ್ಯಮಟ್ಟದ ಆಯ್ಕೆ ಸಮಿತಿ ಪೂರ್ಣಗೊಳಿಸಿದೆ. ಆಯ್ಕೆಯಾದ ಮತ್ತು ಆಯ್ಕೆಯಾಗದ ಪುಸ್ತಕಗಳ ಪ್ರದರ್ಶನವನ್ನು ವಿಜಯನಗರದ ಎಂ.ಸಿ. ಬಡಾವಣೆಯ ವಿಷ್ಣುವರ್ಧನ ಸ್ಪರ್ಧಾತ್ಮಕ ಪರೀಕ್ಷೆಗಳ ಅಧ್ಯಯನ ಕೇಂದ್ರದಲ್ಲಿ ಆ.20 ರಿಂದ 22ರವರೆಗೆ ಏರ್ಪಡಿಸಲಾಗಿದೆ.

ಪ್ರತಿದಿನ ಬೆಳಿಗ್ಗೆ 10ರಿಂದ ಸಂಜೆ 5.30ರವರೆಗೆ ಪುಸ್ತಕ ಪ್ರದರ್ಶನ ವೀಕ್ಷಣೆಗೆ ಅವಕಾಶ ಕಲ್ಪಿಸಲಾಗಿದೆ.

ತಾತ್ಕಾಲಿಕ ಆಯ್ಕೆಪಟ್ಟಿಯನ್ನು ರಾಜ್ಯದ ಎಲ್ಲ ಜಿಲ್ಲಾ, ನಗರ ಕೇಂದ್ರ ಗ್ರಂಥಾಲಯಗಳ ಉಪ ನಿರ್ದೇಶಕರು, ಮುಖ್ಯ ಗ್ರಂಥಾಲಯಗಳ ಕಚೇರಿಗಳಲ್ಲಿ ಪ್ರದರ್ಶಿಸಲಾಗುವುದು. ಇಲಾಖೆಯ ಅಧಿಕೃತ ವೆಬ್‌ಸೈಟ್ www.dpl.karnataka.gov.inನಲ್ಲಿ ಪ್ರಕಟಿಸಲಾಗುವುದು.

ಆಕ್ಷೇಪಣೆಗಳಿದ್ದಲ್ಲಿ ಆಗಸ್ಟ್ 30ರ ಒಳಗೆ ಆಯುಕ್ತರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ವಿಶ್ವೇಶ್ವರಯ್ಯ ಮುಖ್ಯ ಗೋಪುರ, 4ನೇ ಮಹಡಿ, ಡಾ. ಅಂಬೇಡ್ಕರ್ ವೀದಿ, ಬೆಂಗಳೂರು - 560001 ಇಲ್ಲಿಗೆ ಲಿಖಿತವಾಗಿ ಸಲ್ಲಿಸಲು ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಮುಖ್ಯ ಗ್ರಂಥಾಲಯ ಅಧಿಕಾರಿ ಅನಿತಾ ಆರ್. ತಿಳಿಸಿದ್ದಾರೆ.

ಟೂಲ್ ಡಿಸೈನ್ ಕೋರ್ಸ್

ಬೆಂಗಳೂರು: ಬೆಂಗಳೂರಿನ ಸರ್ಕಾರಿ ಉಪಕರಣಗಾರ ಮತ್ತು ತರಬೇತಿ ಕೇಂದ್ರದಲ್ಲಿ 2025-26ನೇ ಸಾಲಿನ 'ಪೋಸ್ಟ್ ಡಿಪ್ಲೊಮಾ ಇನ್ ಟೂಲ್ ಡಿಸೈನ್' ಕೋರ್ಸ್‌ಗೆ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಡಿಎಂಇ, ಡಿಟಿಡಿಎಂ, ಬಿಇ (ಮೆಕ್ಯಾನಿಕಲ್, ಇಂಡಸ್ಟ್ರಿಯಲ್ ಆ್ಯಂಡ್ ಮ್ಯಾನುಫ್ಯಾಕ್ಚರಿಂಗ್, ಇಂಡಸ್ಟ್ರಿಯಲ್ ಆ್ಯಂಡ್ ಪ್ರೊಡಕ್ಷನ್, ಆಟೊಮೊಬೈಲ್ ಎಂಜಿನಿಯರಿಂಗ್) ತೇರ್ಗಡೆಯಾದವರು ಅರ್ಜಿ ಸಲ್ಲಿಸಬಹುದು. ಪ್ರಾಂಶುಪಾಲರು ಪಿಜಿ/ಪಿಡಿ ಸ್ಟಡೀಸ್ ಕೇಂದ್ರ, ರಾಜಾಜಿನಗರ, ಬೆಂಗಳೂರು. ಮೊಬೈಲ್: 9141629584, 9880217473, ವೆಬ್‌ಸೈಟ್: https://gttc.karnataka.gov.in

ಬಿಎಂಶ್ರೀ ಪ್ರತಿಷ್ಠಾನಕ್ಕೆ ಆಯ್ಕೆ

ಬೆಂಗಳೂರು: ಬಿಎಂಶ್ರೀ ಪ್ರತಿಷ್ಠಾನದ ಕಾರ್ಯಕಾರಿ ಸಮಿತಿಗೆ ಸಾಹಿತಿ ಸಿಸಿರಾ ಸೇರಿದಂತೆ ಐದು ಜನರು ಆಯ್ಕೆಯಾಗಿದ್ದಾರೆ.

2025--28ರ ಅವಧಿಗೆ ಕಾರ್ಯಕಾರಿ ಸಮಿತಿಯ ಐದು ಸ್ಥಾನಗಳಿಗೆ ಇತ್ತೀಚೆಗೆ ಚುನಾವಣೆ ಮೂಲಕ ಆಯ್ಕೆ ಮಾಡಲಾಯಿತು ಎಂದು ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ, ಕಾರ್ಯದರ್ಶಿ ಶಾಂತರಾಜು ತಿಳಿಸಿದ್ದಾರೆ.

ಎಸ್.ರಾಮಲಿಂಗೇಶ್ವರ (ಸಿಸಿರಾ), ಜಿ. ಅಶ್ವತ್ಥನಾರಾಯಣ, ಎಸ್.ಜಿ. ಮಾಲತಿ ಶೆಟ್ಟಿ, ಬಿ.ಆರ್. ರವೀಂದ್ರನಾಥ್, ಸಂಗಮೇಶ್ ಬಾದವಾಡಗಿ ಆಯ್ಕೆಯಾಗಿದ್ದಾರೆ ಎಂದಿದ್ದಾರೆ.

ಅರ್ಜಿ ಆಹ್ವಾನ

ಬೆಂಗಳೂರು: ಬೆಂಗಳೂರಿನ ಸರ್ಕಾರಿ ಉಪಕರಣಗಾರ ಮತ್ತು ತರಬೇತಿ ಕೇಂದ್ರದಲ್ಲಿ 'ಎಂ-ಟೆಕ್ ಇನ್ ಟೂಲ್ ಎಂಜಿನಿಯರಿಂಗ್' ಕೋರ್ಸಿಗೆ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಬಿಇ ಮೆಕ್ಯಾನಿಕಲ್ ಎಂಜಿನಿಯರಿಂಗ್, ಆಟೊಮೊಬೈಲ್ ಎಂಜಿನಿಯರಿಂಗ್, ಆಟೊಮೇಷನ್ ಆ್ಯಂಡ್ ರೊಬೊಟಿಕ್ ಎಂಜಿನಿಯರಿಂಗ್, ಇಂಡಸ್ಟ್ರಿಯಲ್ ಆ್ಯಂಡ್ ಪ್ರೊಡಕ್ಷನ್ ಎಂಜಿನಿಯರಿಂಗ್, ಮೆಕ್ಯಾಟ್ರಾನಿಕ್ಸ್ ಎಂಜಿನಿಯರಿಂಗ್ ಉತ್ತೀರ್ಣರಾದವರು ಅರ್ಜಿ ಸಲ್ಲಿಸಬಹುದು.

ಮಾಹಿತಿಗೆ ಮತ್ತು ಅರ್ಜಿ ಸಲ್ಲಿಸಲು ಪ್ರಾಂಶುಪಾಲರು ಪಿಜಿ/ಪಿಡಿ ಸ್ಟಡೀಸ್ ಕೇಂದ್ರ, ರಾಜಾಜಿನಗರ, ಬೆಂಗಳೂರು. ಮೊಬೈಲ್: 9141629584, ವೆಬ್‌ಸೈಟ್: https://gttc.karnataka.gov.in

ಪದಾಧಿಕಾರಿಗಳ ನೇಮಕ

ಬೆಂಗಳೂರು: ಬಿಜೆಪಿಯ ವಿಜಯನಗರ ಮಂಡಲ ಘಟಕಕ್ಕೆ ಪದಾಧಿಕಾರಿಗಳನ್ನು ನೇಮಕ ಮಾಡಲಾಗಿದೆ.

ಉಪಾಧ್ಯಕ್ಷರಾಗಿ ಎಂ.ಎಲ್. ಶಿವಕುಮಾರ್, ನರಸಿಂಹಮೂರ್ತಿ, ಕೃಷ್ಣ ನರೇಂದ್ರಗೌಡ, ರಾಧಾಬಾಯಿ, ಜಯಶ್ರೀ, ಪ್ರಧಾನ ಕಾರ್ಯದರ್ಶಿಗಳಾಗಿ ಎ.ಪಿ.ವಿಜಯಕೃಷ್ಣ, ಗೋಪಿನಾಥ ರಾಜು, ಎ.ಜಿ.ಆನಂದ್, ಕಾರ್ಯದರ್ಶಿಯಾಗಿ ಸೇಲಂ ಸುಬ್ರಹ್ಮಣ್ಯ, ಬಲರಾಮ್, ಎಸ್.ಸಿ.ಉಮಾಶಂಕರ್, ಗೋವರ್ಧನ್, ಆರ್, ಹೇಮಂತಕುಮಾರ್, ಪ್ರಕಾಶ್, ಕಾರ್ಯಾಲಯ ಕಾರ್ಯದರ್ಶಿಯಾಗಿ ಎಚ್.ವಿ.ಜನಾರ್ದನ್ ಅವರನ್ನು ನೇಮಿಸಲಾಗಿದೆ ಎಂದು ಅಧ್ಯಕ್ಷ ವಿ. ರಾಮಾಂಜನಿ ತಿಳಿಸಿದ್ದಾರೆ.

ಅವೈಜ್ಞಾನಿಕ ಕಟ್ಟಡಗಳಿಗೆ ನೋಟಿಸ್

ಎಲ್ಲ ಕಟ್ಟಡಗಳ ಸಮೀಕ್ಷೆ, ಮಾಲೀಕರ ವಿರುದ್ಧ ಕ್ರಿಮಿನಲ್ ಪ್ರಕರಣ: ಡಿಕೆಶಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ವಾಸಯೋಗ್ಯ ಪ್ರಮಾಣ ಪತ್ರವಿಲ್ಲದ 4 ಲಕ್ಷ ಕಟ್ಟಡಗಳು
- ಯೋಗ್ಯವಲ್ಲದ ಕಟ್ಟಡಗಳಿಗೆ ನೀರು, ವಿದ್ಯುತ್ ಸಂಪರ್ಕ ಕಡಿತ
- ಕಟ್ಟಡಗಳ ಅಕ್ರಮ ನಿರ್ಮಾಣಕ್ಕೆ ಸಂಪೂರ್ಣ ಕಡಿವಾಣ

ಬೆಂಗಳೂರು: ಅವೈಜ್ಞಾನಿಕವಾಗಿ ನಿರ್ಮಾಣ ಮಾಡಿರುವ, ದುರ್ಬಲ ಕಟ್ಟಡಗಳ ಮಾಲೀಕರಿಗೆ ನೋಟಿಸ್ ನೀಡಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ನಗರ್ತಪೇಟೆಯಲ್ಲಿ ಬೆಂಕಿ ಅವಘಡದಿಂದ ಹಾನಿಗೊಳಗಾದ ಸ್ಥಳಕ್ಕೆ ಭಾನುವಾರ ಭೇಟಿ ನೀಡಿ, ಪರಿಶೀಲಿಸಿದ ಬಳಿಕ ಅವರು ಮಾತನಾಡಿದರು.

'ಅವೈಜ್ಞಾನಿಕವಾಗಿ ನಿರ್ಮಾಣ ಮಾಡಿರುವ ದುರ್ಬಲ ಕಟ್ಟಡಗಳನ್ನು ಭದ್ರಗೊಳಿಸುವ ಕೆಲಸ ಮೊದಲು ಆಗಬೇಕು. ಎರಡು, ಮೂರು ಮಹಡಿಗಳನ್ನು ಕಟ್ಟಲು ಅನುಮತಿ ಪಡೆದು, 8-10 ಮಹಡಿಗಳನ್ನು ನಿರ್ಮಾಣ ಮಾಡಲಾಗಿದೆ. ಹಲವು ಕಟ್ಟಡಗಳು ವಾಸಕ್ಕೆ ಯೋಗ್ಯವಾಗಿಲ್ಲ. ಒಳಗೆ ಬಂದು ನೋಡಿದಾಗ ಗಾಬರಿಯಾಯಿತು. ಇಂತಹ ಇಕ್ಕಟ್ಟಿನ ಜಾಗದಲ್ಲಿ ಬೆಂಕಿ ಅವಘಡ ನಡೆದರೆ ಜನರು ಓಡಿ ಹೋಗುತ್ತಾರೆ. ಆಗ ಕಾಲ್ತುಳಿತದ ಅಪಾಯವೂ ಇರುತ್ತದೆ. ದೆಹಲಿ, ಮುಂಬೈನಲ್ಲೂ ಇದೇ ಪರಿಸ್ಥಿತಿ ಇದೆ' ಎಂದರು.

'ಇಂತಹ ಕಟ್ಟಡಗಳನ್ನು ಕೆಡವಲು ಹೋಗುವುದಿಲ್ಲ. ದುರಸ್ತಿ ಮಾಡಿ, ಸುಸ್ಥಿತಿಯಲ್ಲಿ ಇಟ್ಟುಕೊಳ್ಳುವಂತೆ ಮಾಲೀಕರಿಗೆ ಸೂಚಿಸಲಾಗುವುದು. ಎಲ್ಲ ಕಟ್ಟಡಗಳ ಸಮೀಕ್ಷೆ ನಡೆಸಲಾಗುವುದು. ನಿಯಮ ಪಾಲಿಸದವರ ವಿರುದ್ಧ ಕ್ರಮ ಜರುಗಿಸಲಾಗುವುದು. ಈ ಪ್ರಕ್ರಿಯೆಗೆ ಸಾಕಷ್ಟು ಸಮಯ ತೆಗೆದುಕೊಳ್ಳುತ್ತದೆ' ಎಂದರು.

'ಚಿಕ್ಕಪೇಟೆ, ನಗರ್ತಪೇಟೆ ಹೆಸರಿಗಷ್ಟೇ ವಾಸಸ್ಥಳಗಳು, ಆದರೆ, ವ್ಯಾಪಾರ ಕೇಂದ್ರಗಳಾಗಿ ಬದಲಾಗಿವೆ. ಕೆಲ ಕಟ್ಟಡಗಳಲ್ಲಿ ಮೇಲ್ಭಾಗಕ್ಕೆ ಹೋಗಲು ಆಗುತ್ತಿಲ್ಲ. ಬಡತನದ ಬದುಕು ಇಂತಹ ಕೆಲಸ ಮಾಡಿಸುತ್ತದೆ. ಬಾಡಿಗೆಗಾಗಿ ಹೀಗೆ ಕಟ್ಟಡಗಳನ್ನು ನಿರ್ಮಾಣ ಮಾಡಿರುವುದೇ ಅನಾಹುತಗಳಿಗೆ ಕಾರಣ. ಅಗ್ನಿಶಾಮಕ ನಿಯಮದ ಪ್ರಕಾರ ಹೋದರೆ ಎಲ್ಲಾ ಕಟ್ಟಡಗಳನ್ನು ಒಡೆದು ಹಾಕಬೇಕಾಗುತ್ತದೆ' ಎಂದರು.

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಬೆಂಗಳೂರಿನ ನಗರ್ತಪೇಟೆಯಲ್ಲಿ ಅಗ್ನಿ ಅವಘಡ ಸಂಭವಿಸಿದ ಕಟ್ಟಡವನ್ನು ಭಾನುವಾರ ವೀಕ್ಷಿಸಿದರು

'ಶೇ 70 ರಷ್ಟು ಕಟ್ಟಡಗಳು ಅಕ್ರಮ'

'ನಗರದಲ್ಲಿ ಶೇ 70ರಷ್ಟು ಕಟ್ಟಡಗಳ ನಿರ್ಮಾಣ ಅಕ್ರಮವಾಗಿದೆ. ಬಿಡಿಎ ಬಡಾವಣೆಗಳಲ್ಲೂ ಸಾಮರ್ಥ್ಯಕ್ಕಿಂತ ಹೆಚ್ಚು ಮಹಡಿ ನಿರ್ಮಾಣ ಮಾಡಿದ್ದಾರೆ' ಎಂದು ಶಿವಕುಮಾರ್ ಹೇಳಿದರು.

'ಇಂತಹ ಕಟ್ಟಡಗಳಿಗೆ ನೀರು, ವಿದ್ಯುತ್ ಸಂಪರ್ಕ ನೀಡದಂತೆ ಸುಪ್ರೀಂಕೋರ್ಟ್ ತೀರ್ಪು ನೀಡಿದೆ. ಹಾಗಾಗಿ, 4 ಲಕ್ಷ ಕಟ್ಟಡಗಳಿಗೆ ಸಂಪರ್ಕ ಕಡಿತಗೊಳಿಸಲಾಗುತ್ತಿದೆ. 30x40 ಅಡಿ ಅಳತೆಯಲ್ಲಿ ನಿರ್ಮಿಸಿರುವ ಎರಡು ಮಹಡಿಯ ಕಟ್ಟಡಗಳಿಗೆ ವಿನಾಯಿತಿ ನೀಡಬೇಕು ಎನ್ನುವ ವಿಚಾರವನ್ನು ಸಂಪುಟ ಸಭೆಯಲ್ಲಿ ಚರ್ಚಿಸಲಾಗುವುದು' ಎಂದರು.

'ಮೃತರ ಕುಟುಂಬಗಳಿಗೆ ತಲಾ ₹5 ಲಕ್ಷ ಪರಿಹಾರ'

ಅವಘಡದಲ್ಲಿ ಮೃತಪಟ್ಟವರ ಕುಟುಂಬಗಳಿಗೆ ತಲಾ ₹5 ಲಕ್ಷ ಪರಿಹಾರ ನೀಡಲು ಸರ್ಕಾರ ನಿರ್ಧರಿಸಿದೆ ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

ನಿರ್ಲಕ್ಷ್ಯ ವಹಿಸಿರುವ ಕಟ್ಟಡ ಮಾಲೀಕರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗಿದೆ. ಸೂಕ್ತ ಕಾನೂನು ಕ್ರಮ ಜರುಗಿಸಲು ಪೊಲೀಸರಿಗೆ ಮುಕ್ತ ಅವಕಾಶ ನೀಡಲಾಗಿದೆ ಎಂದರು.

ಕಟ್ಟಡದ ಇಬ್ಬರು ಮಾಲೀಕರ ಬಂಧನ

ತಿಗಳರಪೇಟೆಯಲ್ಲಿ ನಾಲ್ಕು ಅಂತಸ್ತಿನ ಕಟ್ಟಡದಲ್ಲಿ ಅಗ್ನಿ ಅವಘಡ ಸಂಭವಿಸಿ ಐವರು ಮೃತಪಟ್ಟ ಪ್ರಕರಣ ಸಂಬಂಧ ಕಟ್ಟಡಗಳ ಇಬ್ಬರು ಮಾಲೀಕರನ್ನು ಹಲಸೂರು ಗೇಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮೃತನ ಸೋದರ ಗೋಪಾಲ್ ಸಿಂಗ್ ನೀಡಿದ ದೂರಿನ ಮೇರೆಗೆ ಕಟ್ಟಡದಲ್ಲಿ ಅಗ್ನಿ ಸುರಕ್ಷತಾ ವ್ಯವಸ್ಥೆ ಕಲ್ಪಿಸದ ಆರೋಪದಡಿ ಪ್ರಕರಣ ದಾಖಲಿಸಿಕೊಂಡು, ಕಟ್ಟಡ ಮಾಲೀಕರಾದ ಬಾಲಕೃಷ್ಣ ಶೆಟ್ಟಿ ಮತ್ತು ಸಂದೀಪ್ ಶೆಟ್ಟಿ ಅವರನ್ನು ಬಂಧಿಸಿ, ವಿಚಾರಣೆಗೆ ಒಳಪಡಿಸಲಾಗಿದೆ.

ಶನಿವಾರ ನಸುಕಿನಲ್ಲಿ ಸಂಭವಿಸಿದ ಆಕಸ್ಮಿಕ ಅಗ್ನಿ ಅವಘಡದಲ್ಲಿ ಗೃಹೋಪಯೋಗಿ ವಸ್ತುಗಳ ವ್ಯಾಪಾರಿ ಮದನ್ ಕುಮಾರ್ ಪುರೋಹಿತ್, ಪತ್ನಿ ಸಂಗೀತಾ, ಮಕ್ಕಳಾದ ಮಿಥೇಶ್, ವಿಹಾನ್ ಹಾಗೂ ಪಕ್ಕದ ಕಟ್ಟಡದ ಸುರೇಶ್ ಎಂಬುವವರು ಸಜೀವ ದಹನವಾಗಿದ್ದರು.

ಕಟ್ಟಡದ ನೆಲ ಮಹಡಿಯಲ್ಲಿದ್ದ ಪ್ಲಾಸ್ಟಿಕ್ ಮ್ಯಾಟ್ ಗೋದಾಮಿನಲ್ಲಿ ಕಾಣಿಸಿಕೊಂಡ ಬೆಂಕಿಯಿಂದ ಅವಘಡ ಸಂಭವಿಸಿರಬಹುದು. ಬೆಂಕಿಯ ಕೆನ್ನಾಲಿಗೆ ಬಹುಬೇಗನೆ ವ್ಯಾಪಿಸಿದ್ದರಿಂದ ಐವರು ಮೃತಪಟ್ಟಿರುವ ಸಾಧ್ಯತೆಗಳಿವೆ ಎಂದು ಪೊಲೀಸರು ತಿಳಿಸಿದ್ದಾರೆ.

'ಕಟ್ಟಡಗಳಲ್ಲಿ ಪ್ರಾಥಮಿಕ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳದಿರುವುದು ಕಂಡು ಬಂದಿದೆ. ಘಟನೆಗೆ ನಿಖರ ಕಾರಣ ತಿಳಿದು ಬಂದಿಲ್ಲ. ವಿಧಿ ವಿಜ್ಞಾನ ಪ್ರಯೋಗಾಲಯದ ತಂಡವು ಘಟನಾ ಸ್ಥಳದಲ್ಲಿ ಕೆಲ ಮಾದರಿಗಳನ್ನು ಸಂಗ್ರಹಿಸಿದೆ. ತನಿಖೆ ಬಳಿಕ ಮಾಹಿತಿ ಲಭ್ಯವಾಗಲಿದೆ' ಎಂದು ಕೇಂದ್ರ ವಿಭಾಗದ ಡಿಸಿಪಿ ಅಕ್ಷಯ್ ಮಚ್ಚೀಂದ್ರ ತಿಳಿಸಿದ್ದಾರೆ.

'ಅಗತ್ಯ ಸುರಕ್ಷತಾ ಕ್ರಮಗಳನ್ನು ಅನುಸರಿಸದೇ, ಕಿಟಕಿ, ಬೆಳಕಿನ ವ್ಯವಸ್ಥೆ ಸೂಕ್ತವಾಗಿರದೆ ಅವೈಜ್ಞಾನಿಕವಾಗಿ ಕಟ್ಟಡ ನಿರ್ಮಾಣ ಮಾಡಲಾಗಿದೆ. ಇದರಿಂದಾಗಿಯೇ ಅವಘಡ ಸಂಭವಿಸಿದೆ' ಎಂದು ಗೋಪಾಲ್ ಸಿಂಗ್ ದೂರು ನೀಡಿದ್ದರು.

ಘಟನೆ ಸಂಭವಿಸಿದ್ದು ಹೇಗೆ?: ನಾಲ್ಕು ಅಂತಸ್ತಿನ ಕಟ್ಟಡದ ನೆಲಮಹಡಿ ಹಾಗೂ ಮೊದಲ ಮಹಡಿಯಲ್ಲಿ ಪ್ಲಾಸ್ಟಿಕ್ ಮ್ಯಾಟ್‌ಗಳನ್ನು ಸಂಗ್ರಹಿಸಿಟ್ಟಿದ್ದ ಗೋದಾಮು ಇತ್ತು. ಮೂರನೇ ಮಹಡಿಯಲ್ಲಿದ್ದ ಮನೆಯಲ್ಲಿ ಮದನ್ ಕುಮಾರ್ ಕುಟುಂಬ ವಾಸವಿತ್ತು.

ಅಗ್ನಿ ಅವಘಡ ಸಂಭವಿಸಿದಾಗ ಮದನ್ ಕುಮಾರ್ ಕುಟುಂಬ ಹಾಗೂ ಮೊದಲ ಮಹಡಿಯಲ್ಲಿನ ಗೋದಾಮಿನೊಳಗೆ ಮೂವರು ಕಾರ್ಮಿಕರು ಸಿಲುಕಿಕೊಂಡಿದ್ದರು ಎಂದು ಪೊಲೀಸರು ಶನಿವಾರ ಮಾಹಿತಿ ನೀಡಿದ್ದರು.

ಸುದ್ದಿ 2 ನಿಮಿಷ

ಪ್ರತ್ಯೇಕ ಅಪಘಾತ: ಇಬ್ಬರು ಯುವಕರ ಸಾವು

ಬೆಂಗಳೂರು: ನಗರದಲ್ಲಿ ಸಂಭವಿಸಿದ ಪ್ರತ್ಯೇಕ ರಸ್ತೆ ಅಪಘಾತಗಳಲ್ಲಿ ಡೆಲಿವರಿ ಬಾಯ್ ಸೇರಿ ಇಬ್ಬರು ಮೃತಪಟ್ಟಿರುವ ಘಟನೆ ನಡೆದಿದೆ.

ನಾಗಸಂದ್ರ ಮೆಟ್ರೊ ನಿಲ್ದಾಣ ಸಮೀಪದ ಪೀಣ್ಯ ಮೇಲ್ಸೇತುವೆ ಮೇಲೆ ಸಂಭವಿಸಿದ ಅಪಘಾತದಲ್ಲಿ ಗ್ಯಾಸ್ ಸಿಲಿಂಡರ್ ಡೆಲಿವರಿ ಬಾಯ್ ಶಶಿಕುಮಾರ್ (26) ಮೃತಪಟ್ಟಿದ್ದಾರೆ.

ಚಿತ್ರದುರ್ಗ ಜಿಲ್ಲೆಯ ಶಶಿಕುಮಾರ್, ಮಾದನಾಯಕನಹಳ್ಳಿಯಲ್ಲಿ ವಾಸವಾಗಿದ್ದರು. ಕೆಲಸದ ನಿಮಿತ್ತ ಮಾದನಾಯಕನಹಳ್ಳಿಯಿಂದ ನಗರಕ್ಕೆ ಮುಂಜಾನೆ 6.30ರಲ್ಲಿ ನಾಗಸಂದ್ರ ಮೆಟ್ರೊ ಸ್ಟೇಷನ್ ಸಮೀಪ ಪೀಣ್ಯ ಮೇಲ್ಸೇತುವೆ ಮೇಲೆ ಬರುತ್ತಿದ್ದಾಗ ಹಿಂದಿನಿಂದ ಅತಿ ವೇಗವಾಗಿ ಬಂದ ವಾಹನ ಡಿಕ್ಕಿ ಹೊಡೆದಿದೆ.

ತೀವ್ರ ಗಾಯಗೊಂಡ ಅವರು ಆಸ್ಪತ್ರೆಗೆ ಸಾಗಿಸುವ ಮಾರ್ಗಮಧ್ಯೆ ಮೃತಪಟ್ಟಿದ್ದಾರೆ. ಅಪಘಾತದ ಬಳಿಕ ಚಾಲಕ ವಾಹನ ನಿಲ್ಲಿಸಿಲ್ಲ. ಸ್ಥಳಕ್ಕೆ ಪೀಣ್ಯ ಸಂಚಾರ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಅಪರಿಚಿತ ವಾಹನ ಚಾಲಕನ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಬೈಕ್ ಸವಾರ ಸಾವು: ಕ್ಯಾಂಟರ್ ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ರಾಮು (38) ಮೃತಪಟ್ಟಿರುವ ಘಟನೆ ನೆಲಮಂಗಲದಲ್ಲಿ ನಡೆದಿದೆ.

ಕ್ಯಾಂಟರ್ ವಾಹನ ಬೈಕ್‌ಗೆ ಡಿಕ್ಕಿ ಹೊಡೆದು, ನಿಲ್ಲಿಸದೇ ಪರಾರಿಯಾಗಿದ್ದು, ಹಿಂಬದಿ ಸವಾರ ಹರೀಶ್ ಗಾಯಗೊಂಡಿದ್ದಾರೆ. ಹರೀಶ್ ಅವರನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದೆ. ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ, ಪರಿಶೀಲನೆ ನಡೆಸಿದರು. ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ಬಕೆಟ್‌ನಲ್ಲಿ ಕಾಲು ಹಾಕಿದ ಮಗು ಪೋಷಕರಿಗೆ ಬ್ಯಾಟ್‌ನಿಂದ ಥಳಿತ

ಬೆಂಗಳೂರು: ಆರು ವರ್ಷದ ಮಗು ಎದುರು ಮನೆಯ ನೀರಿನ ಬಕೆಟ್‌ನಲ್ಲಿ ಕಾಲಿಟ್ಟ ವಿಚಾರಕ್ಕೆ ಎರಡು ಕುಟುಂಬಗಳ ನಡುವೆ ಜಗಳವಾಗಿ, ಮಗುವಿನ ಪೋಷಕರಿಗೆ ಕ್ರಿಕೆಟ್ ಬ್ಯಾಟ್ ಮತ್ತು ವಿಕೆಟ್‌ನಿಂದ ಥಳಿಸಿರುವ ಘಟನೆ ಬ್ಯಾಡರಹಳ್ಳಿ ಬಳಿಯ ವಿದ್ಯಾಮಾನ್ಯ ನಗರದಲ್ಲಿ ನಡೆದಿದೆ.

ಗಂಗಾಧರ್ ಮತ್ತು ಸೌಮ್ಯಾ ದಂಪತಿ ನೀಡಿದ ದೂರು ಆಧರಿಸಿ, ರಾಜೇಶ್ವರಿ ಹಾಗೂ ಅವರ ಮಗನ ವಿರುದ್ಧ ಬ್ಯಾಡರಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಗಂಗಾಧರ್ ದಂಪತಿಯ ಮನೆಯ ಮುಂಭಾಗದಲ್ಲೇ ರಾಜೇಶ್ವರಿ ಅವರ ಮನೆಯಿದೆ. ದಂಪತಿಯ ಆರು ವರ್ಷದ ಮಗು, ಆಗಸ್ಟ್ 14ರಂದು ಆಟವಾಡುತ್ತಾ ರಾಜೇಶ್ವರಿ ಅವರ ಮನೆಯ ಬಳಿ ಹೋಗಿ ನೀರಿನ ಬಕೆಟ್‌ನ ಒಳಗೆ ಕಾಲು ಹಾಕಿತ್ತು. ಈ ವಿಚಾರಕ್ಕೆ ರಾಜೇಶ್ವರಿ ಮತ್ತು ಸೌಮ್ಯಾ ನಡುವೆ ಗಲಾಟೆಯಾಗಿತ್ತು. ಬಳಿಕ ಅದೇ ದಿನ ರಾತ್ರಿ ರಾಜೇಶ್ವರಿ ಅವರ ಮಗ ತನ್ನ ಸಹಚರರೊಂದಿಗೆ ಸೌಮ್ಯಾ ಅವರ ಮನೆ ಬಳಿ ಹೋಗಿ, ಕಿಟಕಿಗಳ ಗಾಜು ಒಡೆದು ದಾಂದಲೆ ನಡೆಸಿದ್ದಾನೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಗಂಗಾಧರ್ ಅವರನ್ನು ರಸ್ತೆಗೆ ಎಳೆದುಕೊಂಡು ಬಂದು ಅವಾಚ್ಯ ಶಬ್ದಗಳಿಂದ ನಿಂದಿಸಿ, ಬ್ಯಾಟ್ ಮತ್ತು ವಿಕೆಟ್‌ಗಳಿಂದ ಮನಬಂದಂತೆ ಹೊಡೆದು ಜೀವ ಬೆದರಿಕೆ ಹಾಕಿದ್ದಾರೆ. ಪತಿ ರಕ್ಷಣೆಗೆ ಧಾವಿಸಿದ ಸೌಮ್ಯಾ ಅವರನ್ನು ಆರೋಪಿಗಳು ಎಳೆದಾಡಿದ್ದಾರೆ. ದೃಶ್ಯಾವಳಿಯು ಸಿ.ಸಿ.ಟಿ.ವಿ. ಕ್ಯಾಮೆರಾದಲ್ಲಿ ಸೆರೆಯಾಗಿದೆ' ಎಂದು ಪೊಲೀಸರು ಹೇಳಿದ್ದಾರೆ. ಘಟನೆ ಬಳಿಕ ಆರೋಪಿಗಳು ತಲೆಮರೆಸಿಕೊಂಡಿದ್ದಾರೆ.

ಧರ್ಮಸ್ಥಳ ಪ್ರಕರಣ: ಕರ್ನಾಟಕ ಜಾಗೃತ ನಾಗರಿಕರ ಒಕ್ಕೂಟ ಆಗ್ರಹ

'ಕಾನೂನು ವಿರೋಧಿ ಹೇಳಿಕೆ ನಿಲ್ಲಿಸಿ'

ಪ್ರಜಾವಾಣಿ ವಾರ್ತೆ

'ಕ್ಷೇತ್ರಕ್ಕೆ ಅಪಪ್ರಚಾರ ಎಂದು ಬಿಂಬಿಸಲಾಗುತ್ತಿದೆ'

ವ್ಯಕ್ತಿಗಳು ಎಸಗಿದ ತಪ್ಪುಗಳ

ಚಿಟಿಕೆ ಸುದ್ದಿ

'ಪುರಂದರದಾಸರ ಯಕ್ಷಗಾನ ಕೃತಿ ಲಭ್ಯ'

ಶಿರಸಿ: ಇಲ್ಲಿನ ನಿವೃತ್ತ ಉಪನ್ಯಾಸಕಿ ವಿಜಯನಳಿನಿ ರಮೇಶ ಅವರ ಗೃಹ ಗ್ರಂಥಾಲಯದಲ್ಲಿ ಕರ್ನಾಟಕ ಸಂಗೀತದ ಪಿತಾಮಹ ಪುರಂದರದಾಸರು ರಚಿಸಿದ 'ಅನಸೂಯಾಚರಿತ್ರೆ' ಯಕ್ಷಗಾನ ಕೃತಿ ಸಿಕ್ಕಿದ್ದು, ಇದು ಯಕ್ಷಗಾನ ಕ್ಷೇತ್ರದ ಪ್ರಾಚೀನತೆಗೆ ಪುಷ್ಟಿ ನೀಡಿದೆ ಎಂದು ಯಕ್ಷಗಾನ ವಿದ್ವಾಂಸ ಕಬ್ಬಿನಾಲೆ ವಸಂತ ಭಾರದ್ವಾಜ ತಿಳಿಸಿದ್ದಾರೆ.

'ಇದು 16ನೇ ಶತಮಾನದ ಪೂರ್ವಾರ್ಧದ ಕೃತಿಯಾಗಿದ್ದು, 19 ಕಡೆ ಪುರಂದರ ವಿಠಲ ಎಂಬ ಅಂಕಿತವಿರುವುದರಿಂದ ಕೃತಿಯ ಕರ್ತೃತ್ವ ಪ್ರಶ್ನಾತೀತವಾಗಿದೆ' ಎಂದು ಹೇಳಿದ್ದಾರೆ.

'ಕೃತಿಯಲ್ಲಿ ಕಂದಪದ್ಯ, ದ್ವಿಪದಿ ಮತ್ತು ವಚನಗಳು ಹೆಚ್ಚಾಗಿವೆ. 13 ರಾಗಗಳ ವಿವಿಧ ಮಟ್ಟುಗಳಿದ್ದು, ಪುರಂದರದಾಸರ ಪ್ರಸಿದ್ಧವಾದ ಮೂರು ಕೀರ್ತನೆಗಳೂ ಇವೆ. ಹರಿಕಥಾ ನಿರೂಪಣೆಯ ಶೈಲಿಯನ್ನು ಇದು ಹೊಂದಿದೆ. ಕಲೆಯ ವಿಸ್ತಾರ ಹಾಗೂ ಇತಿಹಾಸ ತಿಳಿಯಲು ಈ ಕೃತಿ ಮಹತ್ವದ್ದಾಗಿದೆ' ಎಂದು ಅವರು ತಿಳಿಸಿದ್ದಾರೆ.

'ಜಿಎಸ್‌ಟಿ ಸರಳೀಕರಣದಿಂದ ಅನುಕೂಲ'

ಬಸವರಾಜ ಬೊಮ್ಮಾಯಿ

ಬೆಂಗಳೂರು: 'ಸರಕು ಮತ್ತು ಸೇವಾ ತೆರಿಗೆಯನ್ನು (ಜಿಎಸ್‌ಟಿ) ಸರಳಗೊಳಿಸುವುದಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಘೋಷಿಸಿದ್ದಾರೆ. ಇದರಿಂದ ವ್ಯಾಪಾರಿಗಳಿಗೆ ಮತ್ತು ಜನರಿಗೆ ಅನುಕೂಲವಾಗಲಿದೆ' ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಪತ್ರಿಕಾ ಹೇಳಿಕೆ ನೀಡಿರುವ ಅವರು, 'ಜಿಎಸ್‌ಟಿ ಜಾರಿಯಿಂದ ದೇಶದಾದ್ಯಂತ ತೆರಿಗೆ ಪದ್ಧತಿ ಸರಳವಾಗಿತ್ತು. ಆದರೆ ಇಷ್ಟು ವರ್ಷಗಳ ಅನುಭವದ ನಂತರ ಜಿಎಸ್‌ಟಿಯಲ್ಲಿ ಕೆಲ ಬದಲಾವಣೆಗಳು ಆಗಬೇಕು ಎಂಬ ಅಭಿಪ್ರಾಯ ಸರ್ಕಾರದ ಮಟ್ಟದಲ್ಲಿ ವ್ಯಕ್ತವಾಗಿದೆ. ರೈತ ಸಂಘಟನೆಗಳು, ವ್ಯಾಪಾರಿಗಳು, ಆರ್ಥಿಕ ತಜ್ಞರೂ ಈ ಬಗ್ಗೆ ಮನವಿ ಸಲ್ಲಿಸಿದ್ದರು' ಎಂದು ಹೇಳಿದ್ದಾರೆ.

ಅನುದಾನಿತ ಪ್ರೌಢಶಾಲೆ: 11,095 ಶಿಕ್ಷಕರ ಹುದ್ದೆ ಖಾಲಿ

ಮೈಸೂರು: ರಾಜ್ಯದಲ್ಲಿರುವ ಅನುದಾನಿತ ಪ್ರೌಢಶಾಲೆಗಳಲ್ಲಿ 11,095 ಶಿಕ್ಷಕರ ಹುದ್ದೆಗಳು ಖಾಲಿ ಇವೆ. 22,484 ಮಂದಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಒಟ್ಟು 3,630 ಪ್ರೌಢಶಾಲೆಗಳಿದ್ದು, 22,484 ಶಿಕ್ಷಕರಿದ್ದಾರೆ. 3,240 ಇತರ ಸಿಬ್ಬಂದಿ ಹುದ್ದೆ ಖಾಲಿ ಇವೆ.

ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ ಅವರ ಪ್ರಶ್ನೆಗೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಅವರು ಈ ಉತ್ತರ ನೀಡಿದ್ದಾರೆ.

ಬೆಂಗಳೂರು ವಿಭಾಗದಲ್ಲಿ ಅತಿ ಹೆಚ್ಚು ಅಂದರೆ 1,938 ಅನುದಾನಿತ ಪ್ರೌಢಶಾಲೆಗಳಿದ್ದು, ಬರೋಬ್ಬರಿ 6 ಸಾವಿರ ಶಿಕ್ಷಕರ ಹುದ್ದೆಗಳು ಖಾಲಿ ಇವೆ ಎಂದು ತಿಳಿಸಿದ್ದಾರೆ.

ತುಂಗಾಭದ್ರಾ ಆರತಿ 26ರಂದು

ಕೊಪ್ಪಳ: ಧಾರ್ಮಿಕ ದತ್ತಿ ಇಲಾಖೆ ವ್ಯಾಪ್ತಿಯಲ್ಲಿರುವ ತಾಲ್ಲೂಕಿನ ಹುಲಿಗಿಯ ಹುಲಿಗೆಮ್ಮ ದೇವಿ ದೇವಸ್ಥಾನ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಆ.26ರಂದು ತುಂಗಭದ್ರಾ ನದಿ ತೀರದಲ್ಲಿ ತುಂಗಭದ್ರಾ ಆರತಿ ಉತ್ಸವ ಆಚರಿಸಲು ನಿರ್ಧರಿಸಲಾಗಿದೆ.

'ಮೊದಲ ಬಾರಿಗೆ ತುಂಗಭದ್ರಾ ಆರತಿ ಹಮ್ಮಿಕೊಳ್ಳಲಾಗಿದೆ. ಅಂದು ದೇವಸ್ಥಾನದಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರುಗಲಿವೆ. ಇನ್ನು ಮುಂದೆ ಪ್ರತಿವರ್ಷವೂ ಈ ಕಾರ್ಯಕ್ರಮ ನಡೆಸಲಾಗುವುದು' ಎಂದು ಸಂಸದ ರಾಜಶೇಖರ ಹಿಟ್ನಾಳ, ಶಾಸಕ ರಾಘವೇಂದ್ರ ಹಿಟ್ನಾಳ ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದರು.

'ಕೈಲಾಗದವರ ಕೊನೆಯ ಅಸ್ತ್ರವೇ ಅಪಪ್ರಚಾರ'

ಆರ್.ಅಶೋಕ

ಬೆಂಗಳೂರು: 'ಮತದಾರರ ಪಟ್ಟಿಯ ಬಗ್ಗೆ ರಾಹುಲ್ ಗಾಂಧಿ ಅವರ ಆರೋಪ ಆಧಾರರಹಿತ ಎಂದು ಚುನಾವಣಾ ಆಯೋಗ ವಿವರಿಸಿದೆ. ಕೈಲಾಗದವರ ಕೊನೆಯ ಅಸ್ತ್ರ ಅಪಪ್ರಚಾರ' ಎಂದು ವಿಧಾನ ಸಭೆಯ ವಿಪಕ್ಷದ ನಾಯಕ ಆರ್.ಅಶೋಕ ಹೇಳಿದ್ದಾರೆ.

'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಅವರು, 'ರಾಹುಲ್ ಆರೋಪಗಳಲ್ಲಿ ಹುರುಳಿದ್ದರೆ, ಏಳು ದಿನಗಳ ಒಳಗೆ ಚುನಾವಣಾ ಆಯೋಗಕ್ಕೆ ಪುರಾವೆ ಒದಗಿಸಬೇಕು. ಇಲ್ಲದಿದ್ದಲ್ಲಿ ದೇಶದ ಜನರ ಕ್ಷಮೆಯಾಚಿಸಬೇಕು' ಎಂದು ಒತ್ತಾಯಿಸಿದ್ದಾರೆ.

ದೌರ್ಜನ್ಯ ಪ್ರಕರಣ: ಗಣನೀಯ ಏರಿಕೆ

43,052 ಪ್ರಕರಣ ದಾಖಲು • ಪೋಕ್ಸೊ, ಲೈಂಗಿಕ, ವರದಕ್ಷಿಣೆ ಪ್ರಕರಣಗಳೇ ಅಧಿಕ

• ಖಲೀಲಅಹ್ಮದ ಶೇಖ

'ತ್ವರಿತ ನ್ಯಾಯಾಲಯಗಳನ್ನು ಸ್ಥಾಪಿಸಿ, ಅತ್ಯಾಚಾರ, ಪೋಕ್ಸೊದಂತಹ ಪ್ರಕರಣಗಳನ್ನು ಶೀಘ್ರ ವಿಲೇವಾರಿ ಮಾಡಬೇಕು.
ಡಾ. ನಾಗಲಕ್ಷ್ಮೀ ಚೌಧರಿ,
ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ

ಬೆಂಗಳೂರು: ಮಹಿಳೆಯರು ಮತ್ತು ಮಕ್ಕಳ ರಕ್ಷಣೆಗೆ ಹಲವು ಕಾನೂನುಗಳು ಇದ್ದರೂ, ಅವರ ಮೇಲೆ ನಡೆಯುತ್ತಿರುವ ದೌರ್ಜನ್ಯ ಪ್ರಕರಣಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇದೆ. ಎರಡು ವರ್ಷ, ಏಳು ತಿಂಗಳಲ್ಲಿ ಮಹಿಳೆಯರು ಮತ್ತು ಮಕ್ಕಳ ಮೇಲೆ 43,053 ದೌರ್ಜನ್ಯ ಪ್ರಕರಣಗಳು ರಾಜ್ಯದಲ್ಲಿ ದಾಖಲಾಗಿವೆ.

2023 ರಿಂದ 2025ರ ಜುಲೈ ಅವಧಿಯಲ್ಲಿ ಅತ್ಯಾಚಾರ, ಲೈಂಗಿಕ ಕಿರುಕುಳ, ವರದಕ್ಷಿಣೆ ಕಿರುಕುಳ ಹಾಗೂ ಸಾವು, ಗಂಡನಿಂದ ಕಿರುಕುಳ, ಪೋಕ್ಸೊ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ-2012), ಬಾಲ್ಯ ವಿವಾಹ, ಬಾಲ ಕಾರ್ಮಿಕ, ಮಕ್ಕಳ ರಕ್ಷಣೆ ಮತ್ತು ಆರೈಕೆ ಕಾಯ್ದೆ (ಜೆ.ಜೆ.ಕಾಯ್ದೆ) ಅಡಿ 43 ಸಾವಿರಕ್ಕೂ ಹೆಚ್ಚು ಮಹಿಳೆಯರು ಹಾಗೂ ಮಕ್ಕಳ ಮೇಲೆ ನಡೆದ ದೌರ್ಜನ್ಯ ಪ್ರಕರಣಗಳು ದಾಖಲಾಗಿವೆ. ಇದರಲ್ಲಿ ಮಹಿಳೆಯರಿಗೆ ಲೈಂಗಿಕ ಕಿರುಕುಳ, ವರದಕ್ಷಿಣೆ ಕಿರುಕುಳ ಹಾಗೂ ಪೋಕ್ಸೊ ಕಾಯ್ದೆ ಅಡಿಯಲ್ಲಿ ದಾಖಲಾದ ಪ್ರಕರಣಗಳ ಸಂಖ್ಯೆಯೇ ಅಧಿಕವಾಗಿದೆ.

ಕೆಲಸದ ಸ್ಥಳ ಸೇರಿದಂತೆ ಬೇರೆ ಬೇರೆ ಕಡೆಗಳಲ್ಲಿ ಮಹಿಳೆಯರಿಗೆ ಲೈಂಗಿಕ ಕಿರುಕುಳ ನೀಡಿದಕ್ಕೆ ಸಂಬಂಧಿಸಿದಂತೆ 16,273 ಪ್ರಕರಣಗಳು ದಾಖಲಾಗಿವೆ. ವರದಕ್ಷಿಣೆ ಕಿರುಕುಳಕ್ಕೆ ಸಂಬಂಧಿಸಿದಂತೆ ಒಟ್ಟು 5,456 ಪ್ರಕರಣಗಳು ದಾಖಲಾಗಿದ್ದು, ವರದಕ್ಷಿಣೆ ಕಿರುಕುಳದಿಂದಲೇ 340 ಗೃಹಿಣಿಯರು ಮೃತಪಟ್ಟಿದ್ದಾರೆ. ಗಂಡನ ಕಿರುಕುಳಕ್ಕೆ ಸಂಬಂಧಿಸಿದಂತೆ 7,546 ಪ್ರಕರಣಗಳು ದಾಖಲಾಗಿವೆ ಎಂಬುದು ಪೊಲೀಸ್ ಇಲಾಖೆಯ ಅಂಕಿ-ಅಂಶಗಳಿಂದ ಗೊತ್ತಾಗಿದೆ.

ಪ್ರಕರಣಗಳು	2023	2024	2025 ಜುಲೈವರೆಗೆ	ಒಟ್ಟು
ಅತ್ಯಾಚಾರ	600	739	549	1,888
ಲೈಂಗಿಕ ಕಿರುಕುಳ	6,489	6,334	3,450	16,273
ವರದಕ್ಷಿಣೆ ಕಿರುಕುಳದಿಂದ ಸಾವು	158	112	70	340
ವರದಕ್ಷಿಣೆ ಕಿರುಕುಳ	2,337	1,986	1,133	5,456
ಗಂಡನಿಂದ ಕಿರುಕುಳ	2,959	2,910	1,677	7,546
ಪೋಕ್ಸೊ ಪ್ರಕರಣಗಳು	3,902	4,064	2,544	10,510
ಬಾಲ್ಯ ವಿವಾಹ	143	151	123	417
ಬಾಲ ಕಾರ್ಮಿಕ ಪ್ರಕರಣಗಳು	129	106	53	288
ಜೆ.ಜೆ. ಕಾಯ್ದೆ	96	141	97	334
ಒಟ್ಟು				43,052

'ಬಡತನ, ಅನಕ್ಷರತೆ, ಕಾನೂನಿನ ಕುರಿತು ಸಮರ್ಪಕ ಮಾಹಿತಿ ಇಲ್ಲದಿರುವುದರಿಂದ ಮಹಿಳೆಯರು ಹಾಗೂ ಮಕ್ಕಳ ಮೇಲೆ ದೌರ್ಜನ್ಯ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿವೆ. ಸಂತ್ರಸ್ತ ಮಹಿಳೆಯರಿಗೆ ಮಹಿಳಾ ಆಯೋಗವು ಪೊಲೀಸ್ ಇಲಾಖೆಯ ಸಹಕಾರದ ಮೂಲಕ ರಕ್ಷಣೆ ಒದಗಿಸುವುದರ ಜೊತೆಗೆ ಅವರ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸುತ್ತಿದೆ' ಎಂದು ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮೀ ಚೌಧರಿ 'ಪ್ರಜಾವಾಣಿ'ಗೆ ತಿಳಿಸಿದರು.

'ಕಾವಲು ಸಮಿತಿಯ ಮೂಲಕ ಜಾಗೃತಿ'

ಕೆ. ನಾಗಣ್ಣಗೌಡ

ಮಕ್ಕಳ ಮೇಲಿನ ದೌರ್ಜನ್ಯ, ಬಾಲ್ಯ ವಿವಾಹಗಳನ್ನು ನಿಯಂತ್ರಿಸಲು ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ಕಾವಲು ಸಮಿತಿಗಳನ್ನು ರಚಿಸಲಾಗಿದೆ. ಇಲ್ಲಿ ಪೋಕ್ಸೊ, ಬಾಲಕಾರ್ಮಿಕ ಪದ್ಧತಿ, ಬಾಲ್ಯ ವಿವಾಹದ ಕುರಿತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಿಕ್ಷಣ, ಆರೋಗ್ಯ ಹಾಗೂ ಪೊಲೀಸ್ ಇಲಾಖೆಯ ಸಹಯೋಗದಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ' ಎಂದು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಕೆ. ನಾಗಣ್ಣಗೌಡ 'ಪ್ರಜಾವಾಣಿ'ಗೆ ತಿಳಿಸಿದರು.

ಒಳಮೀಸಲಾತಿ ವರದಿ ನಾಳೆಯೇ ಜಾರಿ ಮಾಡಿ: ಆಂಜನೇಯ

ಪ್ರಜಾವಾಣಿ ವಾರ್ತೆ

ಆಂಜನೇಯ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆ.19ರಂದು ಕರೆದಿರುವ ವಿಶೇಷ ಸಚಿವ ಸಂಪುಟ ಸಭೆಯಲ್ಲಿ ನ್ಯಾ. ನಾಗಮೋಹನದಾಸ್ ಆಯೋಗದ ವರದಿಯನ್ನು ಅಂಗೀಕರಿಸಿ, ಜಾರಿಗೊಳಿಸಬೇಕು ಎಂದು ಮಾಜಿ ಸಚಿವ ಎಚ್. ಆಂಜನೇಯ ಆಗ್ರಹಿಸಿದ್ದಾರೆ.

ಸುಪ್ರೀಂ ಕೋರ್ಟ್‌ನ ಆದೇಶದಂತೆ 101 ಜಾತಿಗಳನ್ನು ಐದು ಗುಂಪುಗಳಾಗಿ ವರ್ಗೀಕರಿಸಲಾಗಿದೆ. ಅತಿ ಹೆಚ್ಚು ಹಿಂದುಳಿದ ಸಣ್ಣ ಜಾತಿಗಳನ್ನು 'ಎ' ಗುಂಪು ಮಾಡಿ ಶೇ 1 ಮೀಸಲಾತಿ ನಿಗದಿಪಡಿಸಲಾಗಿದೆ. ಮಾದಿಗ ಮತ್ತು ಅದೇ ರೀತಿ ಅಸ್ಪೃಶ್ಯತೆ ಹೊಂದಿರುವ ಜಾತಿಗಳನ್ನು 'ಬಿ' ಗುಂಪಿಗೆ ಸೇರಿಸಿ ಶೇ 6, ಹೊಲೆಯ ಮತ್ತು ಅದೇ ರೀತಿ ಅಸ್ಪೃಶ್ಯತೆ ಹೊಂದಿರುವ ಜಾತಿಗಳನ್ನು 'ಸಿ' ಗುಂಪು ಮಾಡಿ ಶೇ 5, ಅಸ್ಪೃಶ್ಯರಲ್ಲದ ಭೋವಿ, ಲಂಬಾಣಿ, ಕೊರಚ, ಕೊರಮ ಜಾತಿಗಳನ್ನು 'ಡಿ' ಗುಂಪಿಗೆ ಸೇರಿಸಿ ಶೇ 4, ಮಾದಿಗ, ಛಲವಾದಿ ಎಂದು ಗುರುತಿಸಿಕೊಳ್ಳದೆ ಆದಿಕರ್ನಾಟಕ, ಆದಿಆಂಧ್ರ, ಆದಿದ್ರಾವಿಡ ಎಂದು ಗುರುತಿಸಿಕೊಂಡಿರುವವರನ್ನು 'ಇ' ಗುಂಪು ಮಾಡಿ ಶೇ 1 ಮೀಸಲಾತಿ ಹಂಚಿಕೆ ಮಾಡಲಾಗಿದೆ. 'ಇ' ಗುಂಪಿನಲ್ಲಿ ಹೊಲೆಯ-ಮಾದಿಗರು ಇದ್ದಾರೆ. ಇದು ಹಿಂದುಳಿದಿರುವಿಕೆಯ ಆಧಾರದಲ್ಲಿ ಮಾಡಲಾಗಿದೆ. ಇದು ವೈಜ್ಞಾನಿಕವಾಗಿದೆ ಎಂದು ತಿಳಿಸಿದ್ದಾರೆ.

'ಛಲವಾದಿ ಸಮುದಾಯದವರು ಗೊಂದಲ ಮೂಡಿಸಬಾರದು. ಒಂದೇ ಕುಟುಂಬದ ಅಣ್ಣ ತಮ್ಮಂದಿರಾದ ನಾವು ಒಳಮೀಸಲಾತಿ ವರದಿಗೆ ಸಂಬಂಧಿಸಿದಂತೆ ಪ್ರಬುದ್ಧರಾಗಿ ವರ್ತಿಸುವ ಮೂಲಕ ವರದಿ ಜಾರಿಯಾಗುವಂತೆ ನೋಡಿಕೊಳ್ಳಬೇಕು. ಇಲ್ಲದೇ ಇದ್ದರೆ ನಮ್ಮ ಸಣ್ಣ ಮನಸ್ತಾಪದಿಂದ ದಲಿತ ಶಕ್ತಿಗೆ ದೊಡ್ಡ ಹೊಡೆತ ಬೀಳಲಿದೆ' ಎಂದು ಎಚ್ಚರಿಸಿದ್ದಾರೆ.

ಧುಮ್ಮಿಕ್ಕಿದ ಜಲಧಾರೆ

ಚಿತ್ರ
ಜಗನ್ನಾಥ ಡಿ. ಶೇರಿಕಾರ

ಕಲಬುರಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಸಂಗಾಪುರ ಬಳಿಯ ಎತ್ತಿಪೋತೆ ಜಲಪಾತ ಧುಮ್ಮಿಕ್ಕಿ ಹರಿಯುತ್ತಿರುವ ದೃಶ್ಯ ಭಾನುವಾರ ಕಂಡು ಬಂತು

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	124.50	26,358	27,391
ಹಾರಂಗಿ	2,859	2,857.20	8,728	8,312
ಕಬಿನಿ	2,284.00	2,283.87	17,010	8,242
ಹೇಮಾವತಿ	2,922	2,921.98	11,911	10,400
ಲಿಂಗನಮಕ್ಕಿ	1,819	1,813.50	29,776	4,034
ಸೂಪಾ (ಮೀ)	564	552.89	18,152	89.00
ಮಾಣಿ	595	591.44	6,948	-
ತುಂಗಭದ್ರಾ	1,633	1,625.75	41,313	53,079
ಮಲಪ್ರಭಾ	2,079.5	2,077.20	3,281	1,194
ಘಟಪ್ರಭಾ	2175	2,173.83	13,480	2,673
ಭದ್ರಾ *	186	185.1	21,043	19,828
ಆಲಮಟ್ಟಿ (ಮೀ)	519.6	519.45	33,968	1,00000
ನಾರಾಯಣಪುರ (ಮೀ)	492.25	491.94	1,10,000	1,20,200

* ನೆಲಮಟ್ಟದಿಂದ

'ತುಂಗಭದ್ರಾ ಅಣೆಕಟ್ಟೆಗೆ ಅಪಾಯ ಇಲ್ಲ'

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): 'ತುಂಗಭದ್ರಾ ಜಲಾಶಯಕ್ಕೆ ಭಾರಿ ಪ್ರಮಾಣದಲ್ಲಿ ನೀರು ಹರಿದರೂ ಅಣೆಕಟ್ಟೆಗೆ ಯಾವ ಅಪಾಯ ಇಲ್ಲ, ಜನರು, ರೈತರು ಭಯಪಡುವ ಅಗತ್ಯವಿಲ್ಲ' ಎಂದು ತುಂಗಭದ್ರಾ ಮಂಡಳಿಯ ಕಾರ್ಯದರ್ಶಿ ಒ.ಆರ್. ಕೆ.ರೆಡ್ಡಿ ಭರವಸೆ ನೀಡಿದ್ದಾರೆ.

'ಅಣೆಕಟ್ಟೆಯ ಆರು ಕ್ರಸ್ಟ್‌ಗೇಟ್ ಬಾಗಿವೆ, ಅವುಗಳನ್ನು ಮೇಲೆ ಎತ್ತಲಾಗದು' ಎಂಬ ಸಚಿವ ಶಿವರಾಜ ತಂಗಡಗಿ ಅವರ ಹೇಳಿಕೆಗೆ ಭಾನುವಾರ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು. 'ಈ ಬಾರಿ ಒಂದು ಬೆಳೆಗೆ ನಿಶ್ಚಿತವಾಗಿ ನೀರು ಸಿಗುತ್ತದೆ' ಎಂದು ಹೇಳಿದರು.

'ಅಣೆಕಟ್ಟೆಯ ಎಲ್ಲ ಗೇಟ್‌ಗಳನ್ನು ಬದಲಿಸಲು ತಜ್ಞರು ಸಲಹೆ ನೀಡಿದ್ದಾರೆ. ಗರಿಷ್ಠ 105.78 ಟಿಎಂಸಿ ಅಡಿ ಸಂಗ್ರಹ ಸಾಮರ್ಥ್ಯದ ಜಲಾಶಯದಲ್ಲಿ ಈಗ 80 ಟಿಎಂಸಿ ಅಡಿ ನೀರು ಸಂಗ್ರಹಿಸಲಾಗುತ್ತಿದೆ. ಗೇಟ್‌ಗಳಿಗೆ ಶೇ 46ರಷ್ಟು ಒತ್ತಡ ಬೀಳುತ್ತಿದೆ' ಎಂದು ತಿಳಿಸಿದರು.

'ರಮೇಶ ಕತ್ತಿ ಅವ್ಯವಹಾರಗಳ ತನಿಖೆ'

ಸಂಕೇಶ್ವರ: 'ಸಂಕೇಶ್ವರದ ಹಿರಣ್ಯಕೇಶಿ ಸಹಕಾರ ಸಕ್ಕರೆ ಕಾರ್ಖಾನೆ, ಹುಕ್ಕೇರಿ ತಾಲ್ಲೂಕು ವಿದ್ಯುಚ್ಛಕ್ತಿ ಸಹಕಾರ ಸಂಘ ಹಾಗೂ ಡಿಸಿಸಿ ಬ್ಯಾಂಕಿನಲ್ಲಿ ಮಾಜಿ ಸಂಸದ ರಮೇಶ ಕತ್ತಿ ಮಾಡಿರುವ ಅವ್ಯವಹಾರಗಳನ್ನು ಶೀಘ್ರ ಜನರ ಮುಂದೆ ಇಟ್ಟು, ತನಿಖೆ ಮಾಡಿಸಲಾಗುವುದು' ಎಂದು ಸಚಿವ ಸತೀಶ ಜಾರಕಿಹೊಳಿ ಹೇಳಿದರು. ಸಹಕಾರ ಸಂಘದ ಚುನಾವಣೆ ಸಭೆಯಲ್ಲಿ ಅವರು, 'ಸಕ್ಕರೆ ಕಾರ್ಖಾನೆ, ವಿದ್ಯುಚ್ಛಕ್ತಿ ಸಹಕಾರ ಸಂಘಗಳು 30 ವರ್ಷಗಳಿಂದ ಕತ್ತಿ ಕುಟುಂಬದ ಆಡಳಿತಾವಧಿಯಲ್ಲಿ, ಹಾನಿ ಅನುಭವಿಸಿ ಕೋಟ್ಯಂತರ ರೂಪಾಯಿ ಸಾಲ ಮಾಡಿಕೊಂಡಿವೆ' ಎಂದು ಆರೋಪಿಸಿದರು.

FEDERAL BANK
YOUR PERFECT BANKING PARTNER
Federal Towers, P O Box No.103, Aluva, Kerala - 683 101, India.
Website: www.federalbank.co.in

Following property of Federal Bank will be sold through 'Tender Cum Public Auction'

Details of the Property	Reserve price	EMD
Commercial Premises Located on Ground Floor, CTS No.1413 & 1414, Basavan Galli, Taluka and District Belgaum.Measuring 1878 Sq ft super built up area with undivided share of land measuring 409 Sq ft	₹ 14,200,000	₹ 710,000

Events	Particulars
Inspection of scheduled property	Till 25-08-2025 (Monday) Between 10 am to 4 pm
Last date & time for tender submission	26-08-2025(Tuesday) before 2.00 PM
Place of tender submission and auction	The Federal Bank Ltd. Branch Belgaum/ City -Ground Floor Vijaylakshmi Arcade, opp Khade Bazaar Police Station, Narvekar galli, Belgaum, Karnataka, India, 590002
Date and time of auction	26-08-2025(Tuesday) 3.00 PM
Mode of payment of EMD	DD/RTGS/NEFT
Minimum bid increment	₹10,000/- or multiples thereof
Full and final payment of bid amount by successful bidder after adjusting the EMD	30 days from the date of confirmation of bid
Delivery of possession of the property	Two weeks from date of payment of full and final sale consideration
Name of authorized officer of the Bank	Anandatheertha M, Senior Manager & Branch Head. Br. Belgaum/City
Contact number of authorized officer	Landline-08312423460 Mobile - 9986031773 Email - anandatheertham@federalbank.co.in Alternate No: Nithin Skariah : 8606618801

Tender form and other details can be collected either from Branch Belgaum/City or by contacting the authorized officer mentioned above. Bank reserves the right to conduct inter se bidding /cancel/ postpone the auction.
Place: Aluva
Date : 18.08.2025
For The Federal Bank Limited
Authorized Officer

ವೈದ್ಯಕೀಯ ಇಲಾಖೆಗೆ 'ಸಿಬ್ಬಂದಿ' ಸಂಕಷ್ಟ

ಒಂದನೇ ಪುಟದಿಂದ...

16,000 ಹುದ್ದೆ ಖಾಲಿ: ವೈದ್ಯಕೀಯ ಶಿಕ್ಷಣ ಇಲಾಖೆಯ ಕಾಲೇಜುಗಳು ಹಾಗೂ ಬೋಧನಾ ಆಸ್ಪತ್ರೆಗಳಿಗೆ ಮಂಜೂರಾಗಿರುವ 27,444 ಹುದ್ದೆಗಳಲ್ಲಿ 16,003 ಹುದ್ದೆಗಳು ಖಾಲಿ ಉಳಿದಿವೆ. ಇದರಿಂದ ಬೋಧನೆ ಮತ್ತು ಚಿಕಿತ್ಸೆಗೆ ಸಿಬ್ಬಂದಿ ಕೊರತೆ ಎದುರಾಗಿದೆ. ಒಳ ಮೀಸಲಾತಿ ನಿರ್ಧಾರ ಆಗುವವರೆಗೂ ಯಾವುದೇ ಹೊಸ ನೇಮಕಾತಿ ಪ್ರಕ್ರಿಯೆ ಆರಂಭಿಸಬಾರದು ಎಂದು ಸರ್ಕಾರ ಸೂಚನೆ ನೀಡಿರುವುದು ಹುದ್ದೆಗಳ ಭರ್ತಿಗೆ ಅಡ್ಡಿಯಾಗಿದೆ.

'ಹುದ್ದೆಗಳು ಖಾಲಿ ಇದ್ದರೂ ವೈದ್ಯಕೀಯ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಬೋಧನೆ, ಆಸ್ಪತ್ರೆಗಳಲ್ಲಿ ರೋಗಿಗಳ ಚಿಕಿತ್ಸೆಗೆ ಸಮಸ್ಯೆ ಆಗದಂತೆ ಸರ್ಕಾರ ಎಲ್ಲಾ ರೀತಿಯ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಂಡಿದೆ. ಯಾದಗಿರಿ, ರಾಯಚೂರು, ಕಲಬುರಗಿ ಮತ

'ಚಂದಮಾಮ' ಪತ್ರಿಕೆಯ ಹಳೆಯ ಸಂಚಿಕೆಗಳು ಅಂತರ್ಜಾಲದಲ್ಲಿ ಓದಲು ಲಭ್ಯವಿವೆ. ಆಸಕ್ತರು https://www.chandamama.in/kannada/ ಕೊಂಡಿ ಬಳಸಿ ಓದಬಹುದು

ಸಂದರ್ಶನ

ಸಾಮಾಜಿಕ ಮಾಧ್ಯಮ ಮಾರಕವಾಗಲಿಲ್ಲ ಮೆಟ್ಟಿಲಾಯಿತು

ಕಾಮಾಕ್ಷಿ

• ಎಂ.ಜಿ.ಬಾಲಕೃಷ್ಣ

• ಪದವಿತನಕ ಕನ್ನಡ ಮಾಧ್ಯಮದಲ್ಲಿ ಓದಿದ ನಿಮಗೆ, ಮುಂಬೈನ ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಸೋಷಿಯಲ್ ಸೈನ್ಸಸ್ ಸಂಸ್ಥೆಗೆ ಸ್ನಾತಕೋತ್ತರ ವ್ಯಾಸಂಗಕ್ಕೆ ತೆರಳುವಾಗ ಹಿಂಜರಿಕೆ ಆಗಿರಲಿಲ್ಲವೇ?

ನಿಜಕ್ಕೂ ನನಗೆ ಆಗ ಇಂಗ್ಲಿಷ್, ಹಿಂದಿ ಎರಡೂ ಸರಿಯಾಗಿ ಬರುತ್ತಿರಲಿಲ್ಲ. ಗೂಗಲ್, ಯೂಟ್ಯೂಬ್‌ಗಳಲ್ಲಿನ ವಿಡಿಯೊಗಳನ್ನು ಬಳಸಿಕೊಂಡು ಎರಡೂ ಭಾಷೆಗಳನ್ನು ಕರಗತ ಮಾಡಿಕೊಂಡೆ. ಕನ್ನಡಿ ಮುಂದೆ ನಿಂತು ದಿನಕ್ಕೆ ಎರಡು, ಮೂರು ವಾಕ್ಯಗಳನ್ನು ಹೇಳುತ್ತಾ ನನ್ನನ್ನು ನಾನೇ ಪರೀಕ್ಷೆ ಮಾಡಿಕೊಂಡು ಸುಧಾರಿಸಿಕೊಂಡೆ. ಸಾಮಾಜಿಕ ಮಾಧ್ಯಮವನ್ನು ನಮ್ಮ ಒಳಿತಿಗೂ ಬಳಸಿಕೊಳ್ಳಬಹುದು ಎಂದು ನನಗೆ ಗೊತ್ತಾದದ್ದುಆಗಲೇ.

ಹೀಗಿದ್ದರೂ ನನ್ನ ಇಂಗ್ಲಿಷ್ ಕನ್ನಡಮಯವಾಗಿಯೇ ಇತ್ತು. ಲಿಖಿತ ಪರೀಕ್ಷೆಗೆ ಮುಂಬೈಗೆ ಹೋದಾಗ ನಾನು ಕನ್ನಡದ ರೀತಿಯಲ್ಲಿ ಇಂಗ್ಲಿಷ್ ಮಾತನಾಡುವುದನ್ನು ಕೇಳಿ ನಕ್ಕಿದ್ದರು. ಅವರ ಜೊತೆ ನಾನೂ ನಕ್ಕಿದ್ದೆ. ನಾನು ಈಗ ಹಿಂಜರಿಯಬಾರದು, ಈಗ ನನಗೆ ಕಲಿಯಲು ಅವಕಾಶ ಇದೆ, ಇದು ಕುಹಕ ಅಲ್ಲ, ನಾನು ಹಿಂಜರಿದರೆ ನನ್ನ ಕೈಹಿಡಿದು ಮುಂದೆ ತರುವವರು ಯಾರೂ ಇಲ್ಲ ಎಂಬ ಸ್ಪಷ್ಟ ಅರಿವು ನನಗಿತ್ತು. ಹೀಗಾಗಿಯೇ ಇಂಗ್ಲಿಷ್ ಸವಾಲನ್ನು ದಾಟಿ ಬರುವುದು ಸಾಧ್ಯವಾಯಿತು.

• 'ನಿನ್ನ ಮನೆ ಸಮೀಪದ ಹಂಪಿಯಲ್ಲೇ ಕನ್ನಡ ವಿಶ್ವವಿದ್ಯಾಲಯ ಇದೆ, ಅಲ್ಲೇ ಎಂ.ಎ ಮಾಡು, ಪಿಎಚ್.ಡಿ ಮಾಡು' ಎಂದು ಹಲವರು ಹೇಳಿರಬೇಕಲ್ಲ?

ಹೌದು, ಆದರೆ ನನ್ನ ಗುರಿ ಅದರಾಚೆ ಇತ್ತು. ನಾನು ಓದಿ ನಮ್ಮ ಸಮುದಾಯದ ಸುಧಾರಣೆಗೆ ಏನಾದರೂ ಕೊಡುಗೆ ನೀಡಬೇಕು ಎಂಬ ಕನಸು ಕಟ್ಟಿಕೊಂಡವಳು. ಅದಕ್ಕೆ ಕಾರಣ ನನ್ನ ಅಮ್ಮ. 'ನನಗೆ ಎಂಟನೇ ವಯಸ್ಸಿಗೇ 'ಮುತ್ತು' ಕಟ್ಟಬಿಟ್ಟರು, ನೀನೂ ಹಾಗೆ ಆಗಬಾರದು, ಸಾಧ್ಯವಿರುವಷ್ಟು ಓದು' ಎನ್ನುತ್ತಿದ್ದ ಅಮ್ಮ ಕೂಲಿ ಕೆಲಸ ಮಾಡಿದರೂ ನನ್ನ ಓದಿಗೆ ಅಡ್ಡಿ ಮಾಡಲೇ ಇಲ್ಲ. ಏನೋ ವಿಶೇಷವಾದುದನ್ನೇ ಸಾಧಿಸಬೇಕು, ನನ್ನ ಸಮುದಾಯದವರು 'ಅಪ್ಪ ಯಾರು' ಎಂಬ ಕುಹಕದ ಪ್ರಶ್ನೆಯಿಂದ ಹೊರಬರುವಂತೆ ಆಗಬೇಕು, ಆ ದಿಸೆಯಲ್ಲಿ ಕೆಲಸ ಮಾಡಬೇಕು ಎಂಬ ಛಲವೇ ನನಗೆ ಇಂಗ್ಲೆಂಡ್ ಹಾದಿತೋರಿಸಿದೆ.

• ಹಾಗಿದ್ದರೆ, ಸಸೆಕ್ಸ್‌ನಂತಹ ಜಾಗತಿಕ ಮಟ್ಟದ ವಿಶ್ವವಿದ್ಯಾಲಯಕ್ಕೆ ಉನ್ನತ ವ್ಯಾಸಂಗಕ್ಕೆ ತೆರಳುವುದು ಸುಲಭವೇ?

ಹೊಸಪೇಟೆ ತಾಲ್ಲೂಕಿನ ನಾಗೇನಹಳ್ಳಿಯ ದೇವದಾಸಿ ಕುಟುಂಬದಲ್ಲಿ ಜನಿಸಿದ ಕಾಮಾಕ್ಷಿ, ಕಿತ್ತು ತಿನ್ನುವ ಬಡತನಕ್ಕಿಂತಲೂ ಮಿಗಿಲಾಗಿ 'ಅಪ್ಪ ಯಾರು' ಎಂಬ ಮೂದಲಿಕೆಯ ಪ್ರಶ್ನೆಯೊಂದಿಗೇ ಬೆಳೆದು ದೊಡ್ಡವರಾದವರು. ಪದವಿತನಕವೂ ಕನ್ನಡ ಮಾಧ್ಯಮದಲ್ಲೇ ಓದಿದರೂ ಇದೀಗ ಇಂಗ್ಲೆಂಡ್‌ನ ಸಸೆಕ್ಸ್ ವಿಶ್ವವಿದ್ಯಾಲಯದಲ್ಲಿ ಪಿಎಚ್.ಡಿ ಅಧ್ಯಯನಕ್ಕೆ ಆಯ್ಕೆಯಾಗಿದ್ದಾರೆ. ತಮ್ಮ ಈ ಕನಸಿನ ಗುರಿ ಸಾಧನೆಗೆ ಪ್ರೇರಣೆಯಾದ ಹಾದಿಯನ್ನು ಅವರಿಲ್ಲಿ ತೆರೆದಿಟ್ಟಿದ್ದಾರೆ

ಉನ್ನತ ಶೈಕ್ಷಣಿಕ, ಆರ್ಥಿಕ, ಸಾಮಾಜಿಕ ಹಿನ್ನೆಲೆ ಇದ್ದವರಿಗೆ ಸಸೆಕ್ಸ್ ಬಿಡಿ, ವಿಶ್ವದ ಯಾವ ವಿಶ್ವವಿದ್ಯಾಲಯಕ್ಕೆ ತೆರಳುವುದೂ ಕಷ್ಟವಲ್ಲ. ಆದರೆ ಸವಾಲು ಇರುವುದು ನನ್ನಂತಹವರಿಗೆ. ಸಸೆಕ್ಸ್ ವಿಶ್ವವಿದ್ಯಾಲಯವನ್ನೇ ತೆಗೆದುಕೊಳ್ಳಿ. ಮೊದಲು ₹ 12 ಲಕ್ಷ ಕಟ್ಟಿದ ಮೇಲಷ್ಟೇ ಅಲ್ಲಿ ವೀಸಾ ಪ್ರಕ್ರಿಯೆ ಆರಂಭವಾಗುತ್ತದೆ. ಆದರೆ ನಾನು ಅಲ್ಲಿನ ಪ್ರೊಫೆಸರ್‌ಗಳ ಪ್ರಾಜೆಕ್ಟ್ ಕೆಲಸಗಳನ್ನು ಒಂದು ವರ್ಷ ಆನ್‌ಲೈನ್ ಮೂಲಕ ಮಾಡಿ, ಅವರಿಂದ ಸೈ ಎನಿಸಿಕೊಂಡೆ. ನನ್ನ ಕೆಲಸದ ಬದ್ಧತೆ, ಸ್ಪಷ್ಟ ಹಾದಿಯನ್ನು ಗಮನಿಸಿದ ಅವರು ನನ್ನನ್ನು ಷರತ್ತುರಹಿತ ಪಿಎಚ್.ಡಿ ವ್ಯಾಸಂಗಕ್ಕೆ ಶಿಫಾರಸು ಮಾಡಿದರು. ಅದರಿಂದ ರಾಜ್ಯದ 'ಪ್ರಬುದ್ಧ' ಯೋಜನೆಯಡಿ ಆಯ್ಕೆಯಾಗುವುದು ಸಾಧ್ಯವಾಯಿತು.

• ಸಸೆಕ್ಸ್ ವಿಶ್ವವಿದ್ಯಾಲಯವನ್ನೇ ಆಯ್ಕೆ ಮಾಡಿಕೊಂಡಿದ್ದು ಏಕೆ?

ನನ್ನ ಸಂಶೋಧನೆಯ ವಿಷಯ 'ಡೆವಲಪ್‌ಮೆಂಟ್ ಆ್ಯಂಡ್ ಎಜುಕೇಷನ್'. ಈ ವಿಷಯದಲ್ಲಿ ಜಾಗತಿಕ ಮಟ್ಟದಲ್ಲಿ ಯಾವ ವಿಶ್ವವಿದ್ಯಾಲಯ, ಯಾವ ಪ್ರೊಫೆಸರ್‌ಗಳು ಶ್ರೇಷ್ಠ ಸಾಧನೆ ಮಾಡಿದ್ದಾರೆ ಎಂಬ ಬಗ್ಗೆ ಆಳವಾದ ಅಧ್ಯಯನ ಮಾಡಿದೆ. 325 ವಿಶ್ವವಿದ್ಯಾಲಯಗಳ ಮಾಹಿತಿ ಕಲೆಹಾಕಿದೆ. 100ಕ್ಕೂ ಅಧಿಕ ವಿಶ್ವವಿದ್ಯಾಲಯಗಳ ಪ್ರೊಫೆಸರ್‌ಗಳೊಂದಿಗೆ ಇ-ಮೇಲ್ ಮೂಲಕ ಸಂವಹನ ನಡೆಸಿದೆ. ಕೆಲವರು ತಿರಸ್ಕರಿಸಿದರು, ಕೆಲವರು ಸ್ಪಂದಿಸಿದರು. ಸಸೆಕ್ಸ್ ವಿಶ್ವವಿದ್ಯಾಲಯದ ಬಾರ್ಬರಾ ಮತ್ತು ಗುಂಜನ್ ಅವರ ಸಂಶೋಧನೆ, ಆಳವಾದ ಜ್ಞಾನವನ್ನು ಗಮನಿಸಿ, ಅವರ ಮಾರ್ಗದರ್ಶನದಲ್ಲೇ ಮುಂದುವರಿಯಲು ಮನಸ್ಸು ಮಾಡಿದೆ. ಅವರೂ ನನಗೆ ಅವಕಾಶ ನೀಡಿದರು.

• ಸಸೆಕ್ಸ್‌ಗೆ ಆಯ್ಕೆಯಾದರೂ ಅಂತರರಾಷ್ಟ್ರೀಯ ಇಂಗ್ಲಿಷ್ ಭಾಷಾ ಪರೀಕ್ಷೆಯನ್ನು (ಐಇಎಲ್‌ಟಿಎಸ್) ನೀವು ಪಾಸು ಮಾಡಲೇಬೇಕಿತ್ತಲ್ಲವೇ? ಆ ಸವಾಲು ದಾಟಿದ್ದು ಹೇಗೆ?

ನಾನು ಯಾವ ಕೋಚಿಂಗಿಗೂ ಹೋಗಲಿಲ್ಲ. ಬದಲಿಗೆ, ಗೂಗಲ್, ಯೂಟ್ಯೂಬ್, ಚಾಟ್ ಜಿಪಿಟಿಯನ್ನು ಗರಿಷ್ಠ ಪ್ರಮಾಣದಲ್ಲಿ ಬಳಸಿಕೊಂಡೆ. ಕೋಚಿಂಗ್‌ಗೆ ಹೋಗುವಷ್ಟು ದುಡ್ಡು ನನ್ನಲ್ಲಿ ಇರಲಿಲ್ಲ. ಈಗ ದೊಡ್ಡ ಕನಸಿನ ಬೆನ್ನತ್ತಿ ಹೊರಟಿದ್ದೇನೆ. ನನ್ನ ಉನ್ನತ ವ್ಯಾಸಂಗಕ್ಕೆ ರಾಜ್ಯ ಸರ್ಕಾರ ನೆರವಾಗುತ್ತಿದೆ. ನನ್ನ ಈ ಹಾದಿಯಲ್ಲಿ ಬೆಂಗಳೂರಿನ ನ್ಯಾಷನಲ್ ಲಾ ಸ್ಕೂಲ್ ಯೂನಿವರ್ಸಿಟಿಯ ಪ್ರೊಫೆಸರ್ ಚಂದ್ರು ಸರ್, ಹೊಸಪೇಟೆಯ 'ಸಖಿ' ಟ್ರಸ್ಟ್‌ನವರು ನೆರವಾಗಿದ್ದಾರೆ.

• ಹಾಗಿದ್ದರೆ ಸಮಾಜದಲ್ಲಿ ಅಂಚಿಗೆ ತಳ್ಳಲ್ಪಟ್ಟ ಸಮುದಾಯದವರೂ ಉನ್ನತ ಶಿಕ್ಷಣದ ಕನಸು ಕಾಣಬಹುದೇ?

ಖಂಡಿತ. ಸ್ಪಷ್ಟ ಗುರಿ, ಸಾಧಿಸುವ ಛಲ ಇವೆರಡು ಮಾತ್ರ ಬೇಕು. ನಮ್ಮನ್ನು ಪೋಷಿಸುವವರು ಇಲ್ಲ ಅಂದುಕೊಳ್ಳಬಾರದು. ಕೈಯಲ್ಲಿ ಮೊಬೈಲ್ ಹಿಡಿದ ಮಾತ್ರಕ್ಕೆ ಯುವಕರು, ಯುವತಿಯರು ಕೆಟ್ಟು ಹೋಗುತ್ತಾರೆ ಎಂದುಕೊಳ್ಳುವುದು ಸರಿಯಲ್ಲ. ಅದರಿಂದ ನಮ್ಮ ವೈಯಕ್ತಿಕ ಲಾಭವನ್ನು ಗರಿಷ್ಠ ಮಟ್ಟದಲ್ಲಿ ಪಡೆಯಬಹುದು ಎಂಬುದೂ ಗಮನದಲ್ಲಿರಲಿ. ನಾನು ಕಪ್ಪಗಿದ್ದೇನೆ, ಗಿಡ್ಡಕ್ಕಿದ್ದೇನೆ, ಭಾಷೆ ಬರದು ಎಂಬಂತಹ ಯಾವ ಕೀಳರಿಮೆಯೂ ಬೇಡ. ಹಾದಿ ಎಷ್ಟೇ ದುರ್ಗಮವಾಗಿರಲಿ, ಗುರಿ ಮಾತ್ರ ಸ್ಪಷ್ಟವಾಗಿರಲಿ ಎಂದಷ್ಟೇ ನಾನು ಸಲಹೆ ನೀಡುವೆ.

• ಇಂಗ್ಲೆಂಡ್‌ನಿಂದ ಮರಳಿದ ಬಳಿಕ ಏನು ಮಾಡಬೇಕು ಅಂದುಕೊಂಡಿದ್ದೀರಿ?

ದೇವದಾಸಿ ಪದ್ಧತಿ ತೊಲಗಬೇಕು. ಅದಕ್ಕಾಗಿ ಪ್ರಯತ್ನ ಇದ್ದೇ ಇರುತ್ತದೆ. ಇಂತಹ ಕುಟುಂಬದಲ್ಲಿ ಹುಟ್ಟಿದವರು ಯಾವ ಹೀಯಾಳಿಕೆಗೂ ಜಗ್ಗದೆ ಉನ್ನತ ಶಿಕ್ಷಣ ಪಡೆಯಬೇಕು. ಅದಕ್ಕಾಗಿ 'ಯುವ ಸಮುದಾಯ ಕೇಂದ್ರ' ಸ್ಥಾಪಿಸಿ, ಉನ್ನತ ಶಿಕ್ಷಣಕ್ಕೆ ಅವರಿಗೆ ಮಾರ್ಗದರ್ಶನ ಮಾಡುವ ಗುರಿ ಇದೆ. ❖

ಪ್ಯಾನಾಸಾನಿಕ್ ರಟ್ಟಿ ಭತ್ರ್ ಸ್ಕಾಲರ್‌ಷಿಪ್

ವಿದ್ಯಾರ್ಥಿವೇತನ ಕೈಪಿಡಿ

ಬಿ.ಇ./ಬಿ.ಟೆಕ್. ಕೋರ್ಸ್‌ಗಳಿಗೆ ಪ್ರವೇಶ ಪಡೆಯುತ್ತಿರುವವರಿಂದ ಪ್ಯಾನಾಸಾನಿಕ್ ಕಂಪನಿಯು ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನಿಸಿದೆ.

ಅರ್ಹತೆ: 2025-26ನೇ ಶೈಕ್ಷಣಿಕ ವರ್ಷಕ್ಕೆ ಯಾವುದೇ ಐಐಟಿಯಲ್ಲಿ (ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ) ಬಿ.ಇ., ಬಿ.ಟೆಕ್. ಕೋರ್ಸ್‌ಗಳಿಗೆ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳಿಗೆ ಇದು ಮುಕ್ತವಾಗಿದೆ. ಅರ್ಜಿದಾರರು 12ನೇ ತರಗತಿ ಪರೀಕ್ಷೆಯಲ್ಲಿ ಕನಿಷ್ಠ ಶೇ 75ರಷ್ಟು ಅಂಕ ಪಡೆದಿರಬೇಕು ಅಥವಾ ಅಂತಿಮ ಫಲಿತಾಂಶಕ್ಕಾಗಿ ಕಾಯುತ್ತಿರುವವರಾಗಿರಬೇಕು. ಕುಟುಂಬದ ವಾರ್ಷಿಕ ಆದಾಯವು ಎಲ್ಲಾ ಮೂಲಗಳಿಂದ ₹ 8 ಲಕ್ಷ ಮೀರಬಾರದು.

ಆರ್ಥಿಕ ಸಹಾಯ: ನಾಲ್ಕು ವರ್ಷಗಳವರೆಗೆ ವರ್ಷಕ್ಕೆ ₹ 70,250.

ಅರ್ಜಿ ಸಲ್ಲಿಕೆಗೆ ಕೊನೇ ದಿನ: 04-09-2025

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್

ಹೆಚ್ಚಿನ ಮಾಹಿತಿಗೆ: Short Url: www.b4s.in/praja/RCSP6 ❖

ಮಕ್ಕಳಲ್ಲಿ ಅರಳಲಿ ಪುಸ್ತಕಪ್ರೀತಿ

'ಅಜ್ಜಿಯ ರುಜು' ಬೇಕೆ? 'ಗಗ್ಗಯ್ಯನ ಗಡಿಬಿಡಿ' ಯಾಕೆ?

• ರಾಜಕುಮಾರ ಕುಲಕರ್ಣಿ

ಬೇಸಿಗೆ ರಜೆಯಲ್ಲಿ ತಮ್ಮ ಮಗಳಿಗೆ ಓದಲು ಒಂದು ಮಕ್ಕಳ ಪುಸ್ತಕವನ್ನು ಶಿಫಾರಸು ಮಾಡುವಂತೆ ನನ್ನ ವೈದ್ಯ ಮಿತ್ರರೊಬ್ಬರು ಕೇಳಿದರು. ಅನುಪಮಾ ನಿರಂಜನ ಅವರ 'ದಿನಕ್ಕೊಂದು ಕಥೆ' ಓದಲು ಹೇಳಿದೆ. ತಕ್ಷಣವೇ ಪುಸ್ತಕದ 12 ಸಂಪುಟಗಳನ್ನೂ ಖರೀದಿಸಿ ಮಗಳಿಗೆ ಓದಲು ಹೇಳಿದರಲ್ಲದೆ ತಾವು ಕೂಡ ಓದಿ ಹರ್ಷಪಟ್ಟರು. ಪುಸ್ತಕದಲ್ಲಿನ ವಿಶಿಷ್ಟ ಕಥೆಗಳ ಓದಿನ ಅನುಭವ ಬೇರೆ ಮಕ್ಕಳಿಗೂ ದಕ್ಕಲೆಂದು ತಮ್ಮ ಬಡಾವಣೆಯಲ್ಲಿನ ಇತರ ಮಕ್ಕಳಿಗೂ ಓದಲು ಕೊಟ್ಟರು. ಈ ಕಥೆಗಳ ಓದಿನಿಂದ ಮಗಳ ಬೇಸಿಗೆಯ ರಜೆ ಅರ್ಥಪೂರ್ಣವಾಗಿ ಕಳೆಯಿತು ಎನ್ನುವ ಸಾರ್ಥಕ ಭಾವ ಅವರಲ್ಲಿ ಮನೆಮಾಡಿತು.

ಕನ್ನಡದಲ್ಲಿ ಮಕ್ಕಳ ಸಾಹಿತ್ಯ ವಿಪುಲವಾಗಿ ಬೆಳೆದಿದೆ. ಪಂಜೆ ಮಂಗೇಶರಾಯರಿಂದ ಹಿಡಿದು, ಇತ್ತೀಚೆಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗೆ ಭಾಜನರಾದ ಶಿವಲಿಂಗಪ್ಪ ಹಂದಿಹಾಳು ಅವರವರೆಗೆ ಅನೇಕ ಸಾಹಿತಿಗಳು ಮಕ್ಕಳ ಸಾಹಿತ್ಯದಲ್ಲಿ ಕೃಷಿ ಮಾಡಿದ್ದಾರೆ. ಜಿ.ಪಿ.ರಾಜರತ್ನಂ, ದಿನಕರ ದೇಸಾಯಿ, ನಾ.ಕಸ್ತೂರಿ, ಕುವೆಂಪು, ಶಿವರಾಮ ಕಾರಂತ, ಆರ್.ಕಲ್ಯಾಣಮ್ಮ, ಸಿಂಪಿ ಲಿಂಗಣ್ಣ, ಎಚ್.ವೈ.ಸರಸ್ವತಮ್ಮ, ಸುಮತೀಂದ್ರ ನಾಡಿಗ, ಸಿಸು ಸಂಗಮೇಶ, ಕಂಚ್ಯಾಣಿ ಶರಣಪ್ಪ ಅವರಂತಹ ಸಾಹಿತಿಗಳು ಮಕ್ಕಳ ಕಥೆ, ಕವಿತೆ, ಕಾದಂಬರಿಗಳನ್ನು ಬರೆದು ಜನಪ್ರಿಯಗೊಳಿಸಿದ್ದಾರೆ.

ಕನ್ನಡ ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಮಕ್ಕಳ ಸಾಹಿತ್ಯವೂ ಒಂದು. ಮಕ್ಕಳ ಆರೋಗ್ಯಕರ ಬೆಳವಣಿಗೆಯಲ್ಲಿ ಮಕ್ಕಳ ಸಾಹಿತ್ಯದ ಪಾತ್ರ ಮತ್ತು ಕೊಡುಗೆ ಅನನ್ಯವಾದುದು. ಮಕ್ಕಳಿಗೆ ಮೌಖಿಕವಾಗಿ ಹೇಳುವುದಕ್ಕಿಂತ ಬರವಣಿಗೆಯ ಮೂಲಕ ನೀತಿಪಾಠಗಳನ್ನು ಕಲಿಸುವುದು ಸಶಕ್ತ ಮತ್ತು ಪರಿಣಾಮಕಾರಿ ವಿಧಾನ. ಮಕ್ಕಳಿಗೆಂದೇ ಪ್ರಕಟವಾದ ಪುಸ್ತಕಗಳನ್ನು ಓದಲು ಕೊಟ್ಟು ಅವರಲ್ಲಿ ಓದಿನ ಅಭಿರುಚಿಯನ್ನು ಬೆಳೆಸುವ ವಾತಾವರಣವನ್ನು ಮನೆ ಮತ್ತು ಶಾಲೆಯಲ್ಲಿ ಸೃಷ್ಟಿಸಬೇಕು. ನಾಗಣ್ಣನ ಕನ್ನಡಕ, ಗಗ್ಗಯ್ಯನ ಗಡಿಬಿಡಿ, ಅಜ್ಜಿಯ ರುಜು, ಮಂಗನ ಮದುವೆ, ನನ್ನ ತಾಯಿ, ಬೆಂಕಿಕೋಳಿ, ಶಾಲೆಯ ಶೂರರು, ಹಾವಾಡಿಗ, ಗಾಂಧಿತಾತಾ, ಸುಳ್ಳಿನ ಸೋಲು, ಚಂದಕ್ಕಿಮಾಮ ಹೀಗೆ ಅನೇಕ ಪುಸ್ತಕಗಳು ಕನ್ನಡದಲ್ಲಿ ಪ್ರಕಟವಾಗಿವೆ.

ಪ್ರಸ್ತುತ ದಿನಗಳಲ್ಲಿ ಆನಂದ ಪಾಟೀಲ, ತಮ್ಮಣ್ಣ ಬೀಗಾರ, ರಾಜಶೇಖರ ಕುಕ್ಕುಂದಾ ಅಂತಹವರು ಮಕ್ಕಳ ಸಾಹಿತ್ಯ ಪರಂಪರೆಯನ್ನು ಮುಂದುವರಿಸಿಕೊಂಡು ಬರುತ್ತಿದ್ದಾರೆ. ಈ ಲೇಖಕರು ಸಾಹಿತ್ಯದ ಬೇರೆ ಪ್ರಕಾರದತ್ತ ವಲಸೆ ಹೋಗದೆ ಮಕ್ಕಳ ಸಾಹಿತ್ಯದಲ್ಲೇ ಕೃಷಿ ಮಾಡುವ ದೀಕ್ಷೆ ಪಡೆದವರಂತೆ ಕಥೆ, ಕವಿತೆ ಮತ್ತು ಕಾದಂಬರಿಗಳನ್ನು ಬರೆಯುತ್ತಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ ತಮ್ಮಣ್ಣ ಬೀಗಾರರ 'ಬಾವಲಿ ಗುಹೆ' ಮತ್ತು ಶಿವಲಿಂಗಪ್ಪ ಹಂದಿಹಾಳು ಅವರ 'ನೋಟ್ ಬುಕ್' ಕೃತಿಗಳಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಬಾಲಸಾಹಿತ್ಯ ಪ್ರಶಸ್ತಿ ದೊರೆತಿರುವುದು ಕನ್ನಡದಲ್ಲಿ ಮಕ್ಕಳ ಸಾಹಿತ್ಯದ ಸಶಕ್ತ ಬೆಳವಣಿಗೆಗೆ ದೃಷ್ಟಾಂತವಾಗಿದೆ. ಕನ್ನಡ ಸಾಹಿತ್ಯ ಅಕಾಡೆಮಿ ಪ್ರಕಟಿಸಿರುವ 'ಮಕ್ಕಳ ಸಾಹಿತ್ಯ 2012-13' ಕೃತಿಯಲ್ಲಿ ಐವತ್ತು ಕಥೆಗಳು ಮತ್ತು ಐವತ್ತು ಕವಿತೆಗಳಿವೆ. ಕೆ.ವಿ. ತಿರುಮಲೇಶ, ನಾ.ಡಿಸೋಜ, ಮಾಲತಿ ಪಟ್ಟಣಶೆಟ್ಟಿ, ವೈದೇಹಿ ಅವರಂತಹವರು ಬರೆದ ಕಥೆ ಮತ್ತು ಕವಿತೆಗಳನ್ನು ಓದುವುದೇ ಒಂದು ಸಂಭ್ರಮ.

ಕನ್ನಡದಲ್ಲಿ ಮಕ್ಕಳಿಗಾಗಿಯೇ ಅತ್ಯಂತ ಸರಳವಾಗಿ ರಾಮಾಯಣ ಮತ್ತು ಮಹಾಭಾರತದ ಕಥೆಗಳನ್ನು ಬರೆದು ಪ್ರಕಟಿಸಲಾಗಿದೆ. ಮಕ್ಕಳಲ್ಲಿ ಜೀವನಮೌಲ್ಯಗಳನ್ನು ಬೆಳೆಸಲು ಮತ್ತು ಬದುಕಿನ ಕುರಿತು ಅವರಲ್ಲಿ ಸಕಾರಾತ್ಮಕ ಮನೋಭಾವವನ್ನು ಮೂಡಿಸಲು ಈ ಬಾಲರಾಮಾಯಣ ಮತ್ತು ಮಹಾಭಾರತದ ಕಥೆಗಳು ನೆರವಾಗುತ್ತವೆ. ರಾಮ, ಕೃಷ್ಣ, ಕರ್ಣ, ಅರ್ಜುನ, ದ್ರೌಪದಿ, ಸೀತೆ, ಲಕ್ಷ್ಮಣ, ಭೀಮ, ಯುಧಿಷ್ಠಿರ, ದುರ್ಯೋಧನ, ಭೀಷ್ಮನ ಕುರಿತಾದ ಪುಟ್ಟ ಪುಟ್ಟ ಕಥೆಗಳು ಮಕ್ಕಳಿಗೆ ಮನರಂಜನೆ ಒದಗಿಸುವುದರ ಜೊತೆಗೆ ಅವರ ಮನೋವಿಕಾಸಕ್ಕೆ ಕಾರಣವಾಗುತ್ತವೆ. ಕೆಲವು ದಶಕಗಳ ಹಿಂದೆ ಮಕ್ಕಳಿಗಾಗಿಯೇ ಪ್ರಕಟವಾಗುತ್ತಿದ್ದ 'ಚಂದಮಾಮ' ಮತ್ತು 'ಬಾಲಮಿತ್ರ' ನಿಯತಕಾಲಿಕಗಳಲ್ಲಿ ಸಾಮಾಜಿಕ ಮತ್ತು ಪೌರಾಣಿಕ ನೀತಿಕಥೆಗಳು ಇರುತ್ತಿದ್ದವು. ಆಬಾಲವೃದ್ಧರಾದಿಯಾಗಿ ಮನೆಯ ಸದಸ್ಯರೆಲ್ಲರೂ ಓದುತ್ತಿದ್ದ ಈ ಪುಸ್ತಕಗಳಿಗೆ ಸಾಹಿತ್ಯ ಕ್ಷೇತ್ರದಲ್ಲಿ ವಿಶಿಷ್ಟವಾದ ಸ್ಥಾನವಿತ್ತು. ಓದುಗರ ಕೊರತೆಯೋ ಅಥವಾ ಮತ್ತಾವ ಕಾರಣವೋ ಈಗ ಈ ನಿಯತಕಾಲಿಕಗಳ ಪ್ರಕಟಣೆ ಸ್ಥಗಿತಗೊಂಡಿದೆ. ಮಕ್ಕಳನ್ನು ಸಾಹಿತ್ಯದ ಓದುಗರನ್ನಾಗಿಸುವುದು ಅತ್ಯಂತ ಅವಶ್ಯ. ಸಾಹಿತ್ಯದ ಮೂಲಕವೇ ಮಗು ಪ್ರೀತಿ ಮತ್ತು ಅಂತಃಕರಣ ತುಂಬಿರುವ ಭಾಷೆಯನ್ನು ಕಲಿಯಬೇಕಿದೆ. ನೊಬೆಲ್ ಪ್ರಶಸ್ತಿ ಪುರಸ್ಕೃತ ಕವಿ ಜೋಸೆಫ್ ಬ್ರಾಡ್‌ಸ್ಕಿ 'ಸಾಹಿತ್ಯದಲ್ಲಿ ಭಾಷೆ ಬಳಕೆಯಾಗುವುದಿಲ್ಲ, ಸೃಷ್ಟಿಯಾಗುತ್ತದೆ' ಎನ್ನುತ್ತಾರೆ. ಬ್ರಾಡ್‌ಸ್ಕಿಯೇ ಹೇಳಿದಂತೆ- 'ಮೌನದ ಸಂತ ಸಮಾಧಾನದಲ್ಲಿ ಸತ್ಯ ಪ್ರಕಟಗೊಳ್ಳುವ ಹಾಗೆ, ಬದುಕಿನ ಅರ್ಥ ಹೊಳೆಯುವ ಹಾಗೆ ಸಾಹಿತ್ಯದಲ್ಲಿ ಭಾಷೆ ಕಾವ್ಯವಾಗುತ್ತದೆ. ಭಾಷೆ ಕಾವ್ಯವಾಗುವುದು ಮನುಷ್ಯ ಸಾಂಸ್ಕೃತಿಕವಾಗಿ ವಿಕಾಸಗೊಳ್ಳುವ ದಿಕ್ಕನ್ನು ಸೂಚಿಸುವ ಸಂಗತಿ'. ಮಕ್ಕಳನ್ನು ಸಾಂಸ್ಕೃತಿಕವಾಗಿ ವಿಕಾಸಶೀಲರನ್ನಾಗಿಸುವ ದಿಸೆಯಲ್ಲಿ ಮಕ್ಕಳ ಸಾಹಿತ್ಯದ ಸಂಪದ್ಭರಿತ ಫಸಲನ್ನು ಉಪಯೋಗಿಸಿಕೊಂಡು, ಅವರಲ್ಲಿ ಪುಸ್ತಕ ಪ್ರೀತಿಯನ್ನು ಒಂದು ಸಂಸ್ಕೃತಿಯಾಗಿ ರೂಪಿಸುವ ಹೊಣೆಗಾರಿಕೆ ಪಾಲಕರು ಮತ್ತು ಶಿಕ್ಷಕರ ಮೇಲಿದೆ. ❖

ಬೆಟ್ಟಕ್ಕೆ ಚಳಿಯಾದರೆ...

ಎಂ.ಎಸ್.ಪುಟ್ಟಣ್ಣ ಅವರ 'ನೀತಿ ಚಿಂತಾಮಣಿ', ಜಿ.ಪಿ.ರಾಜರತ್ನಂ ಅವರ 'ಬೆಳೆಯುವ ಪೈರು', ಕುವೆಂಪು ಅವರ 'ಬೊಮ್ಮನಹಳ್ಳಿಯ ಕಿಂದರಿಜೋಗಿ' ಮತ್ತು 'ಮೋಡಣ್ಣನ ತಮ್ಮ' ಮಕ್ಕಳ ಮೆಚ್ಚಿನ ಕೃತಿಗಳಾಗಿವೆ. ಎ.ಆರ್.ಕೃಷ್ಣಶಾ

ಚಿಟಿಕೆ ಸುದ್ದಿ

ಎಡಕುಮೇರಿ: ರೈಲು ಸಂಚಾರ ಆರಂಭ

ಎಡಕುಮೇರಿಯಲ್ಲಿ ಕಾರ್ಯಾಚರಣೆ ನಡೆಸಿದ ಸಿಬ್ಬಂದಿ

ಸುಬ್ರಹ್ಮಣ್ಯ (ದಕ್ಷಿಣ ಕನ್ನಡ): ಮಂಗಳೂರು- ಬೆಂಗಳೂರು ರೈಲು ಮಾರ್ಗದ ಸುಬ್ರಹ್ಮಣ್ಯ ರೋಡ್ ಹಾಗೂ ಸಕಲೇಶಪುರ ನಿಲ್ದಾಣದ ನಡುವಿನ ಘಾಟಿ ಪ್ರದೇಶದಲ್ಲಿ ಮೂರು ಕಡೆ ಕುಸಿದಿದ್ದ ಮಣ್ಣು ತೆರವುಗೊಳಿಸಲಾಗಿದ್ದು ಭಾನುವಾರ ರೈಲು ಸಂಚಾರ ಆರಂಭಗೊಂಡಿದೆ.

ಸಿರಿಬಾಗಿಲು- ಎಡಕುಮೇರಿ ವಿಭಾಗ, ಎಡಕುಮೇರಿ- ಕಡಗರವಳ್ಳಿ ಮತ್ತು ಕಡಗರವಳ್ಳಿ- ದೋಣಿಗಲ್ ವಿಭಾಗಗಳ ನಡುವೆ ಮೂರು ಕಡೆ ಭೂಕುಸಿತ ಉಂಟಾಗಿತ್ತು.

ಕಡಗರವಳ್ಳಿ- ದೋಣಿಗಲ್, ಎಡಕುಮೇರಿ- ಕಡಗರವಳ್ಳಿ, ಸಿರಿಬಾಗಿಲು-ಎಡಕುಮೇರಿ ವಿಭಾಗಗಳಲ್ಲಿ ಸಾಮಾನ್ಯ ರೈಲು ಸೇವೆ ಮರು ಪ್ರಾರಂಭಿಸಲು ಅಧಿಕಾರಿಗಳು ಅನುಮತಿ ನೀಡಿದರು ಎಂದು ನೈರುತ್ಯ ರೈಲ್ವೆ ಮುಖ್ಯ ಸಾರ್ವಜನಿಕ ಸಂಪರ್ಕ ಅಧಿಕಾರಿ ಮಂಜುನಾಥ್ ಕನಮಡಿ ತಿಳಿಸಿದ್ದಾರೆ.

ಮಂಗಳೂರು ಸೆಂಟ್ರಲ್- ವಿಜಯಪುರ ವಿಶೇಷ ಎಕ್ಸ್‌ಪ್ರೆಸ್, ಮುರ್ಡೇಶ್ವರ-ಎಸ್‌ಎಂವಿಟಿ ಬೆಂಗಳೂರು ಎಕ್ಸ್‌ಪ್ರೆಸ್, ಕಣ್ಣೂರು-ಕೆಎಸ್‌ಆರ್ ಬೆಂಗಳೂರು ಎಕ್ಸ್‌ಪ್ರೆಸ್, ಕಾರವಾರ- ಕೆಎಸ್‌ಆರ್ ಬೆಂಗಳೂರು ಎಕ್ಸ್‌ಪ್ರೆಸ್ ಸೇರಿದಂತೆ ಗೂಡ್ಸ್ ರೈಲುಗಳು ಸಂಚಾರ ಆರಂಭಿಸಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮೃತ ಗವಿಸಿದ್ದಪ್ಪ ಮೇಲೂ ಎಫ್‌ಐಆರ್

ಕೊಪ್ಪಳ: ಮುಸ್ಲಿಂ ಯುವಕನಿಂದ ಹತ್ಯೆಗೀಡಾದ ಇಲ್ಲಿನ ಕುರುಬರ ಓಣಿಯ ಗವಿಸಿದ್ದಪ್ಪ ನಾಯಕ ಕೊಲೆ ಪ್ರಕರಣಕ್ಕೆ ಸಂಬಂಧಿಸಿ ಮೃತ ವ್ಯಕ್ತಿ ಹಾಗೂ ಅವರ ಕುಟುಂಬದವರ ವಿರುದ್ಧ ಇಲ್ಲಿನ ಮಹಿಳಾ ಠಾಣೆಯಲ್ಲಿ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ.

'ಗವಿಸಿದ್ದಪ್ಪನೇ ನನ್ನ ಮಗಳ ಮೇಲೆ ನಿರಂತರ ಅತ್ಯಾಚಾರ ಎಸಗಿದ್ದಾನೆ. ಇದಕ್ಕೆ ಅವರ ಕುಟುಂಬದವರು ಕುಮ್ಮಕ್ಕು ನೀಡಿದ್ದಾರೆ' ಎಂದು ಕಾನೂನು ಸಂಘರ್ಷಕ್ಕೆ ಒಳಗಾಗಿರುವ ಬಾಲಕಿಯ ತಾಯಿ ದೂರು ನೀಡಿದ್ದಾರೆ.

ಕೊಲೆ ಘಟನೆ ಖಂಡಿಸಿ ಪ್ರತಿಭಟಿಸಿದಾಗ ಗವಿಸಿದ್ದಪ್ಪನ ಕುಟುಂಬದವರು, 'ಪ್ರೀತಿಸಿದ ಬಾಲಕಿ ಕುಮ್ಮಕ್ಕಿನಿಂದಲೇ ಮಗನ ಕೊಲೆಯಾಗಿದೆ' ಎಂದು ಆರೋಪಿಸಿದ್ದರು. ನಗರ ಠಾಣೆಯಲ್ಲಿ ದಾಖಲಾಗಿದ್ದ ದೂರಿನಲ್ಲಿಯೂ ಗವಿಸಿದ್ದಪ್ಪನ ತಂದೆ ಬಾಲಕಿ ಹೆಸರನ್ನು ಉಲ್ಲೇಖಿಸಿದ್ದಕ್ಕೆ ಅವರ ತಾಯಿ ಆಕ್ಷೇಪ ವ್ಯಕ್ತಪಡಿಸಿದ್ದರು.

ನಿಧನ ವಾರ್ತೆ

ಕನ್ನಡಪರ ಹೋರಾಟಗಾರ ಸ.ರ. ಸುದರ್ಶನ

ಮೈಸೂರು: ಕನ್ನಡಪರ ಹೋರಾಟಗಾರ, ಕನ್ನಡ ಕ್ರಿಯಾ ಸಮಿತಿ ಪ್ರಧಾನ ಕಾರ್ಯದರ್ಶಿ ಹಾಗೂ ನಗರದ ನೃಪತುಂಗ ಕನ್ನಡ ಶಾಲೆಯ ಸ್ಥಾಪಕರಲ್ಲಿ ಒಬ್ಬರಾಗಿದ್ದ ಸ.ರ. ಸುದರ್ಶನ (73) ಭಾನುವಾರ ಹೃದಯಾಘಾತದಿಂದ ವಿಜಯನಗರದ ತಮ್ಮ ನಿವಾಸದಲ್ಲಿ ಮೃತಪಟ್ಟರು.

ಸ.ರ. ಸುದರ್ಶನ

ಅವರಿಗೆ ಪುತ್ರಿ ಎಂಜಿನಿಯರ್, ರಂಗ ಕಲಾವಿದೆ ನುಡಿ ಸುದರ್ಶನ್ ಇದ್ದಾರೆ. ಮೈಸೂರು ವಿಶ್ವವಿದ್ಯಾಲಯದ ಪ್ರಸಾರಾಂಗದ ಉಪ ನಿರ್ದೇಶಕರಾಗಿ 2014ರಲ್ಲಿ ನಿವೃತ್ತರಾಗಿದ್ದರು.

ದೇಹವನ್ನು ಆಸ್ತ್ರೆ ಶೈತ್ಯಾಗಾರದಲ್ಲಿ ಇಡಲಾಗಿದ್ದು, ಸೋಮವಾರ ನಗರದ ಫಾರೂಕ್ ವೈದ್ಯಕೀಯ ಶಿಕ್ಷಣ ಅಕಾಡೆಮಿಗೆ ನೀಡಲಾಗುವುದು ಎಂದು ಕುಟುಂಬದವರು ತಿಳಿಸಿದ್ದಾರೆ.

ಸುದರ್ಶನ್, ಐವತ್ತು ವರ್ಷಗಳಿಗೂ ಹಿಂದಿನಿಂದ ಕನ್ನಡ ಪರ ಚಳವಳಿಯಲ್ಲಿ ತೊಡಗಿದ್ದು, 80ರ ದಶಕದಲ್ಲಿ ಗೋಕಾಕ್ ಚಳವಳಿಯಲ್ಲಿ ಭಾಗವಹಿಸಿದ್ದರು. ಮೂರು ದಿನ ಬಂಧನಕ್ಕೂ ಒಳಗಾಗಿದ್ದರು. ಕನ್ನಡ ಪರ ಹಲವು ಧರಣಿ, ಪ್ರತಿಭಟನೆಗಳಲ್ಲಿ ಭಾಗಿಯಾಗಿದ್ದರು.

ಮೈಸೂರು ವಿ.ವಿಯಿಂದ ಎಂ.ಎಸ್ಸಿ. ಭೂ ವಿಜ್ಞಾನ ಪದವಿಯನ್ನು ಕನ್ನಡದಲ್ಲೇ ಬರೆದಿದ್ದು, 3ನೇ ರ‍್ಯಾಂಕ್ ಪಡೆದಿದ್ದರು. ಎಲ್‌ಎಲ್‌ಬಿ ಪದವಿಯನ್ನು ಕನ್ನಡದಲ್ಲಿ ಬರೆದಿದ್ದರು. ಕನ್ನಡದಲ್ಲಿ ವಿಜ್ಞಾನ ಕಲಿಕೆ ಉತ್ತೇಜಿಸಲು ಪಿಯು ಕಾಲೇಜು ಆರಂಭಿಸಿದ್ದರು.

ವಿಜ್ಞಾನ ಲೇಖಕ ಟಿ.ಆರ್. ಅನಂತ ರಾಮು ಅವರ ಜೊತೆಗೂಡಿ 'ಬದಲಾಗುತ್ತಿರುವ ಭೂಮಿ' ಕೃತಿ ಪ್ರಕಟಿಸಿದ್ದು, ಪ್ರೊ.ಬಿ.ವಿ.ಗೋವಿಂದರಾಜುಲು ಜೊತೆಗೂಡಿ 'ಭೂ ಸ್ವರೂಪ ವಿಜ್ಞಾನ' ಕೃತಿ ಅನುವಾದಿಸಿದ್ದರು. ವಿಶ್ವವಿದ್ಯಾಲಯದ 'ಭೂವಿಜ್ಞಾನ ವಿಷಯ ವಿಶ್ವಕೋಶ'ದ ಗೌರವ ಸಂಪಾದಕರಾಗಿದ್ದರು. ಮೈಸೂರು ವಿ.ವಿ ಪ್ರಸಾರಾಂಗದಿಂದ 'ಕಾನೂನು ಪದಕೋಶ' ತಂದಿದ್ದರು. 25ಸಾವಿರ ಪದಗಳ 'ಸಂಕ್ಷಿಪ್ತ ಇಂಗ್ಲಿಷ್ ಕನ್ನಡ ನಿಘಂಟು' ಅಚ್ಚಿನಲ್ಲಿದೆ.

'ಕುರಿಗಾಹಿಗೆ ನಿಂದನೆ: 5 ವರ್ಷ ಜೈಲು'

ಸಾಂಪ್ರದಾಯಿಕ ಕುರಿಗಾಹಿಗಳ ಮೇಲಿನ ದೌರ್ಜನ್ಯ ತಡೆ: ಮಸೂದೆಯ ಕರಡು ಸಿದ್ಧ

• ರಾಜೇಶ್ ರೈ ಚಟ್ಲ

ಮುಖ್ಯಾಂಶಗಳು

- ಉದ್ದೇಶಪೂರ್ವಕ-ವಾಗಿ ಅವಮಾನಿಸಿದರೆ ₹1ಲಕ್ಷದವರೆಗೆ ದಂಡ, ಗರಿಷ್ಠ 5 ವರ್ಷದವರೆಗೆ ಶಿಕ್ಷೆ
- ಕುರಿಗಾಹಿಯ ಜಾನುವಾರುಗಳಿಗೆ ಹಾನಿ ಮಾಡಿದರೆ 2 ವರ್ಷ ಶಿಕ್ಷೆ

ಬೆಂಗಳೂರು: ಸಾಂಪ್ರದಾಯಿಕ ಕುರಿಗಾಹಿಗಳ ಮೇಲಿನ ದೌರ್ಜನ್ಯ, ಶೋಷಣೆ, ಅವಹೇಳನ ತಡೆದು ಹಿತ ಕಾಪಾಡುವ ಜೊತೆಗೆ, ಆ ವರ್ಗಕ್ಕೆ 'ಕಲ್ಯಾಣ ಮಂಡಳಿ' ಸ್ಥಾಪಿಸಿ, ಯೋಜನೆಗಳನ್ನು ಜಾರಿಗೊಳಿಸಲು ಕಾನೂನು ಜಾರಿಗೆ ರಾಜ್ಯ ಸರ್ಕಾರ ಮುಂದಾಗಿದೆ.

ಈ ಉದ್ದೇಶದಿಂದ 'ಕರ್ನಾಟಕ ಸಾಂಪ್ರದಾಯಿಕ ವಲಸೆ ಕುರಿಗಾಹಿಗಳ (ಕಲ್ಯಾಣ ಕಾರ್ಯಕ್ರಮಗಳು ಮತ್ತು ದೌರ್ಜನ್ಯ ತಡೆ) ಮಸೂದೆ- 2025'ರ ಕರಡನ್ನು ಕಾನೂನು ಮತ್ತು ಸಂಸದೀಯ ಇಲಾಖೆ ಅಂತಿಮಗೊಳಿಸಿದೆ.

ಮಸೂದೆಯನ್ನು ಸಚಿವ ಸಂಪುಟ ಸಭೆಗೆ ಮಂಡಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಿರ್ದೇಶನ ನೀಡಿದ್ದಾರೆ. ಪಶು ಸಂಗೋಪನಾ ಇಲಾಖೆಯು ಮಸೂದೆಯನ್ನು ಮಂಡಿಸಲಿದೆ. ಸದ್ಯ ನಡೆಯುತ್ತಿರುವ ವಿಧಾನಮಂಡಲ ಅಧಿವೇಶನದಲ್ಲಿಯೇ ಮಸೂದೆಗೆ ಅನುಮೋದನೆ ಪಡೆಯಲು ಸರ್ಕಾರ ಉದ್ದೇಶಿಸಿದೆ ಎಂದು ಮೂಲಗಳು ತಿಳಿಸಿವೆ.

ಕುರಿಗಾಹಿಯನ್ನು ಉದ್ದೇಶ ಪೂರ್ವಕವಾಗಿ ಅವಮಾನಿಸಿದರೆ ಅಥವಾ ನಿಂದಿಸಿದರೆ, ಆರು ತಿಂಗಳಿನಿಂದ ಐದು ವರ್ಷಗಳ ವರೆಗೆ ವಿಸ್ತರಿಸಬಹುದಾದ ಜೈಲು ಶಿಕ್ಷೆ ಮತ್ತು ₹1 ಲಕ್ಷದವರೆಗೆ ದಂಡ, ಕುರಿಗಾಹಿಯ ಜಾನುವಾರುಗಳಿಗೆ ಹಾನಿ ಉಂಟು ಮಾಡಿದರೆ ಅಥವಾ ಕದ್ದೊಯ್ದರೆ ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಜೈಲು ಶಿಕ್ಷೆ ಮತ್ತು ₹50 ಸಾವಿರ ದಂಡ ಸೇರಿದಂತೆ ವಿವಿಧ ಅಪರಾಧಗಳಿಗೆ ವಿವಿಧ ಪ್ರಮಾಣದ ಜೈಲು ಶಿಕ್ಷೆ ಮತ್ತು ದಂಡ ವಿಧಿಸುವ ಪ್ರಸ್ತಾವ ಈ ಮಸೂದೆಯಲ್ಲಿದೆ.

ಕುರಿಗಾಹಿಗಳಿಗೆ ಸಂಬಂಧಿಸಿದಂತೆ ದೌರ್ಜನ್ಯ ತಡೆ ಕಾಯ್ದೆ ರೂಪಿಸಲಾಗುವುದು ಎಂದು 2024-25ನೇ ಸಾಲಿನ ಬಜೆಟ್‌ನಲ್ಲಿ ಸರ್ಕಾರ ಘೋಷಿಸಿತ್ತು. ಈ ಕಾಯ್ದೆಯನ್ನು ಜಾರಿಗೆ ತರಬೇಕು ಎಂದು ಆಗ್ರಹಿಸಿ ಸಾಂಪ್ರದಾಯಿಕ ಕುರಿಗಾಹಿಗಳ ಹಿತರಕ್ಷಣಾ ಕಾಯ್ದೆ ಹೋರಾಟ ಸಮಿತಿಯೂ ಸೇರಿದಂತೆ ವಿವಿಧ ಸಂಘಟನೆಗಳು ಆಗಸ್ಟ್ 19ರಂದು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ 'ಕುರಿಗಾಹಿಗಳ ನಡಿಗೆ, ವಿಧಾನಸೌಧದ ಕಡೆಗೆ' ಎಂಬ ಬೃಹತ್ ಪ್ರತಿಭಟನೆ ಹಮ್ಮಿಕೊಂಡಿವೆ.

ಕರಡು ಮಸೂದೆಯಲ್ಲಿ ಏನಿದೆ?: ಸಾಂಪ್ರದಾಯಿಕವಾಗಿ ವಲಸೆ ಹೋಗುವ ಕುರಿಗಾಹಿಗಳ ಮೇಲಿನ ದೌರ್ಜನ್ಯ ತಡೆಯುವ ಮತ್ತು ಆ ವರ್ಗ ಅಭಿವೃದ್ಧಿಗಾಗಿ ಯೋಜನೆಗಳನ್ನು ರೂಪಿಸುವ ಜೊತೆಗೆ, ದೌರ್ಜನ್ಯ, ಲೈಂಗಿಕ ಶೋಷಣೆ, ಅವಮಾನಿಸುವವರ ಮೇಲೆ ಕಠಿಣ ಕಾನೂನು ಕ್ರಮ ಕೈಗೊಳ್ಳಲು ಉದ್ದೇಶಿತ ಮಸೂದೆಯಲ್ಲಿ ಅವಕಾಶ ಕಲ್ಪಿಸಲಾಗಿದೆ.

ಸಾಂದರ್ಭಿಕ ಚಿತ್ರ

ಉದ್ದೇಶಿತ ಕಾಯ್ದೆಯಡಿ ಸೌಲಭ್ಯಗಳನ್ನು ಪಡೆಯಲು ಎಲ್ಲ ಕುರಿಗಾಹಿಗಳು ನೋಂದಣಿ ಮಾಡಿಕೊಳ್ಳುವುದು ಕಡ್ಡಾಯವಾಗಿದ್ದು, ಅವರಿಗೆ ಭಾವಚಿತ್ರ ಇರುವ ಗುರುತಿನಚೀಟಿಯನ್ನು ಸರ್ಕಾರ ನೀಡಬೇಕು. ರಾಜ್ಯ ಸರ್ಕಾರ ಕುರಿಗಾಹಿಗಳಿಗೆ ಯೋಜನೆಗಳನ್ನು ರೂಪಿಸಬೇಕು. ಸೂಕ್ತವಾದ ವಸತಿ ಯೋಜನೆ, ವಿಮೆ ಸೌಲಭ್ಯ, ಆರೋಗ್ಯ ಮತ್ತು ಶಿಕ್ಷಣ ಸವಲತ್ತುಗಳು, ಕೌಶಲ ಅಭಿವೃದ್ಧಿ, ಆಹಾರ ಭದ್ರತೆ, ಚುಚ್ಚುಮದ್ದು ಮತ್ತು ಸೂಕ್ತ ಚಿಕಿತ್ಸೆ ನೀಡಬೇಕು. ಜೊತೆಗೆ, ಕುರಿಗಾಹಿಗಳ ಉತ್ಪನ್ನಗಳಿಗೆ ಮಾರುಕಟ್ಟೆ ಬೆಂಬಲ ನೀಡಬೇಕು. ಜಾನುವಾರುಗಳಿಗೆ ಜೀವಹಾನಿಯಾದರೆ ನಷ್ಟ ಪರಿಹಾರ ನೀಡಬೇಕು ಎಂದು ಈ ಮಸೂದೆಯಲ್ಲಿದೆ.

ಸಾಂಪ್ರದಾಯಿಕ ವಲಸೆ ಕುರಿಗಾಹಿಗಳು ನೀಡುವ ದೂರು ದಾಖಲಿಸಿಕೊಂಡು, ಕ್ರಮ ತೆಗೆದುಕೊಳ್ಳಲು ನಿರಾಕರಿಸುವ ಪೊಲೀಸ್ ಅಧಿಕಾರಿಯ ವಿರುದ್ಧ ಕ್ರಮ ತೆಗೆದುಕೊಳ್ಳುವುದಕ್ಕೂ ಮಸೂದೆ ಅವಕಾಶ ಕಲ್ಪಿಸಿದೆ.

ಕುರಿಗಾಹಿಗಳಿಗಾಗಿ 'ಕಲ್ಯಾಣ ಮಂಡಳಿ'

ಕಾರ್ಮಿಕರ ಕಲ್ಯಾಣಕ್ಕಾಗಿ ಮಂಡಳಿ ಸ್ಥಾಪಿಸಿದ ಮಾದರಿಯಲ್ಲಿ ಕುರಿಗಾಹಿಗಳಿಗಾಗಿ 'ಕರ್ನಾಟಕ ಸಾಂಪ್ರದಾಯಿಕ ವಲಸೆ ಕುರಿಗಾಹಿಗಳಿಗಾಗಿ ಕಲ್ಯಾಣ ಮಂಡಳಿ ಸ್ಥಾಪಿಸಲು ರಾಜ್ಯ ಸರ್ಕಾರ ಉದ್ದೇಶಿಸಿದೆ. ಈ ಮಂಡಳಿಯು ಅಧ್ಯಕ್ಷರು ಮತ್ತು ಇತರ ಅಧಿಕಾರಿಗಳನ್ನು ಹೊಂದಿರಲಿದೆ. ಈ ಮಂಡಳಿಯು ಕಾರ್ಪೊರೇಟ್ ಸಂಸ್ಥೆಯಾಗಿ ಕೆಲಸ ಮಾಡಲಿದೆ ಎಂದೂ ಕರಡು ಮಸೂದೆಯಲ್ಲಿ ವಿವರಿಸಲಾಗಿದೆ.

ಯಾವ ಅಪರಾಧಕ್ಕೆ ಏನು ಶಿಕ್ಷೆ?

- ಯಾವುದೇ ಸಾರ್ವಜನಿಕ ಆಸ್ತಿ, ಸರ್ಕಾರಿ ಭೂಮಿ ಅಥವಾ ಅರಣ್ಯ ಭೂಮಿಗೆ (ಮೀಸಲು ಅರಣ್ಯ ಹೊರತುಪಡಿಸಿ) ಕುರಿಗಾಹಿ ಪ್ರವೇಶ ನಿರಾಕರಿಸಿದರೆ, ಒಂದು ವರ್ಷದವರೆಗೆ ವಿಸ್ತರಿಸ ಬಹುದಾದ ಜೈಲು ಶಿಕ್ಷೆ ಮತ್ತು ₹ 50 ಸಾವಿರ ದಂಡ
- ಸಾರ್ವಜನಿಕ ರೆಸಾರ್ಟ್ ಸ್ಥಳ ಬಳಸುವುದನ್ನು ಅಥವಾ ಮೇಯಿಸುವ ಸಾಂಪ್ರದಾಯಿಕ ಹಕ್ಕು ನಿರಾಕರಿಸಿದರೆ ಎರಡು ವರ್ಷಗಳವರೆಗೆ ವಿಸ್ತರಿಸ ಬಹುದಾದ ಜೈಲು ಶಿಕ್ಷೆ ಮತ್ತು ₹ 50 ಸಾವಿರ ದಂಡ
- ಸಾವು ಸಂಭವಿಸುವಂತೆ ದೈಹಿಕ ಗಾಯ ಉಂಟುಮಾಡಿದರೆ ಅಥವಾ ಸಾವಿಗೆ ಕಾರಣವಾದರೆ ಸದ್ಯಕ್ಕೆ ಜಾರಿಯಲ್ಲಿರುವ ಸಂಬಂಧಿತ ಅಪರಾಧಿಕ ಕಾನೂನಿನಂತೆ ಶಿಕ್ಷೆ
- ಲೈಂಗಿಕ ಕಿರುಕುಳ ನೀಡಿದರೂ ಸದ್ಯ ಜಾರಿಯಲ್ಲಿರುವ ಸಂಬಂಧಿತ ಅಪರಾಧಿಕ ಕಾನೂನುಗಳಡಿ ಶಿಕ್ಷೆ
- ಕುರಿಗಾಹಿ ತನ್ನ ವಿರುದ್ಧದ ಅಪರಾಧಗಳಿಗೆ ಸಂಬಂಧಿಸಿದಂತೆ ನ್ಯಾಯಾಂಗದಿಂದ ಸಹಾಯ ಪಡೆಯುವುದನ್ನು ತಡೆದರೆ ಎರಡು ವರ್ಷಗಳ-ವರೆಗೆ ವಿಸ್ತರಿಸಬಹುದಾದ ಜೈಲು ಶಿಕ್ಷೆ ಮತ್ತು ₹50 ಸಾವಿರ ದಂಡ
- ಕುರಿಗಾಹಿಯಿಂದ ಹಾನಿಯಾಗಿದೆ ಎಂದು ಸಕ್ಷಮ ಪ್ರಾಧಿಕಾರವನ್ನು ಸಂಪರ್ಕಿಸದೆ ಪರಿಹಾರ ಪಡೆಯಲು ಮುಂದಾದರೆ ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಜೈಲು ಶಿಕ್ಷೆ ಮತ್ತು ₹1 ಲಕ್ಷ ದಂಡ
- ಕುರಿಗಾಹಿಯ ಚರ ಅಥವಾ ಇತರ ಆಸ್ತಿಗೆ ಹಾನಿ ಉಂಟು ಮಾಡಿದರೆ ಅಥವಾ ಕಸಿದುಕೊಂಡರೆ ಎರಡು ವರ್ಷಗಳವರೆಗೆ ವಿಸ್ತರಿಸ ಬಹುದಾದ ಜೈಲು ಶಿಕ್ಷೆ ಮತ್ತು ಹಾನಿಗೊಳಗಾದ ಆಸ್ತಿಯ ಮೌಲ್ಯಕ್ಕೆ ಸಮಾನವಾದ ದಂಡ

18ರಂದು ಮೈಸೂರಿಗೆ ರಾಷ್ಟ್ರಪತಿ

ಪ್ರಜಾವಾಣಿ ವಾರ್ತೆ

ದ್ರೌಪದಿ ಮುರ್ಮು

ಮೈಸೂರು: ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸೆ.1ರಂದು ಮೈಸೂರಿಗೆ ಆಗಮಿಸಲಿದ್ದಾರೆ. ಮಾನಸಗಂಗೋತ್ರಿಯ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ (ಆಯಿಷ್)ಯ ವಜ್ರ ಮಹೋತ್ಸವ ಸಮಾರಂಭದಲ್ಲಿ ಅವರು ಪಾಲ್ಗೊಳ್ಳಲಿದ್ದಾರೆ.

'ರಾಷ್ಟ್ರಪತಿಯವರು ಆಗಮಿಸುವ ಬಗ್ಗೆ ಅಧಿಕೃತ ಮಾಹಿತಿ ಬಂದಿದೆ' ಎಂದು ಆಯಿಷ್ ನಿರ್ದೇಶಕಿ ಎಂ.ಪುಷ್ಪವತಿ 'ಪ್ರಜಾವಾಣಿ'ಗೆ ಖಚಿತಪಡಿಸಿದರು.

ಬೆಂಗಳೂರಿಗೆ ಆಗಮಿಸಿ ಅಲ್ಲಿಂದ ಮೈಸೂರು ವಿಮಾನ ನಿಲ್ದಾಣಕ್ಕೆ ವಿಶೇಷ ವಿಮಾನದಲ್ಲಿ ಬಂದಿಳಿಯಲಿದ್ದಾರೆ. ಅವರು ನಗರಕ್ಕೆ ಬರುತ್ತಿರುವುದು ಇದು 2ನೇ ಬಾರಿ. ಹಿಂದೆ 2022ರಲ್ಲಿ ನಾಡಹಬ್ಬ ದಸರಾ ಮಹೋತ್ಸವಕ್ಕೆ ಚಾಲನೆ ನೀಡಲು ಆಗಮಿಸಿದ್ದರು.

ಯತ್ನಾಳ ಹೇಳಿಕೆಗೆ ಆಕ್ರೋಶ ಮುಸ್ಲಿಂ ಮಹಿಳೆಯರ ಘೇರಾವ್

ಪ್ರಜಾವಾಣಿ ವಾರ್ತೆ

ವಿಜಯಪುರ: 'ಮುಸ್ಲಿಂ ಯುವತಿಯರ ಮದುವೆಯಾಗುವ ಹಿಂದೂ ಯುವಕರಿಗೆ ₹5 ಲಕ್ಷ ನಗದು ಪ್ರೋತ್ಸಾಹ ನೀಡುತ್ತೇನೆ' ಎಂಬ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರ ಹೇಳಿಕೆ ಖಂಡಿಸಿ ಜಿಲ್ಲೆಯ ಆಲಮೇಲ ಪಟ್ಟಣದಲ್ಲಿ ಭಾನುವಾರ ಯತ್ನಾಳಗೆ ಮುಸ್ಲಿಂ ಯುವಕರು ಕಪ್ಪು ಬಟ್ಟೆ ಪ್ರದರ್ಶಿಸಿದರು. ಮಹಿಳೆಯರು ಮುತ್ತಿಗೆ ಹಾಕಲು ಯತ್ನಿಸಿದರು.

ಕಾರ್ಯಕ್ರಮದಲ್ಲಿ ಭಾಗವಹಿಸಲು ಯತ್ನಾಳ ಅವರು ಪಟ್ಟಣದ ಅಂಬೇಡ್ಕರ್ ವೃತ್ತದ ಬಳಿ ಬರುತ್ತಿದ್ದಂತೆ ಕಾರು ಅಡ್ಡಗಟ್ಟಿದ ಯುವಕರ ಗುಂಪು ಕಪ್ಪು ಬಟ್ಟೆ ಪ್ರದರ್ಶಿಸಿ, ಘೋಷಣೆ ಕೂಗಿತು. ಸ್ಥಳದಲ್ಲಿದ್ದ ಪೊಲೀಸರು ಯುವಕರನ್ನು ವಶಕ್ಕೆ ಪಡೆದರು.

ಕಾರ್ಯಕ್ರಮ ಸ್ಥಳದಲ್ಲಿ ಮುಸ್ಲಿಂ ಮಹಿಳೆಯರು ಯತ್ನಾಳಗೆ ಮುತ್ತಿಗೆ ಹಾಕಲು ಯತ್ನಿಸಿದರು. ವೇದಿಕೆ ಏರಲು ಮುಂದಾಗಿದ್ದ ಮಹಿಳೆಯರನ್ನೂ ಪೊಲೀಸರು ವಶಕ್ಕೆ ಪಡೆದರು.

ನಂತರ ಪಟ್ಟಣದ ಮುಸ್ಲಿಂ ಸಮುದಾಯದವರು ಠಾಣೆಗೆ ಮುತ್ತಿಗೆ ಹಾಕಿ, 'ಮಹಿಳೆಯರನ್ನು ಬಿಡುಗಡೆ ಮಾಡಬೇಕು' ಎಂದು ಆಗ್ರಹಿಸಿದರು. ಈ ಕುರಿತು ಪ್ರಕರಣ ದಾಖಲಾಗಿಲ್ಲ.

ವಿಜಯಪುರ ವರದಿ: 'ಶಾಸಕ ಯತ್ನಾಳ ಅವರ ಮುಸ್ಲಿಂ ವಿರೋಧಿ ಹೇಳಿಕೆ, ಕೋಮು ಪ್ರಚೋದನಕಾರಿ ಭಾಷಣಗಳಿಂದ ಸಮಾಜದ ಸಹನೆಯ ಶಕ್ತಿ ಮೀರಿದೆ'. ಮುಂದೆ ಯತ್ನಾಳ ತಿರುಗಾಡುವುದು ಕಷ್ಟವಾಗಲಿದೆ' ಎಂದು ಮುಸ್ಲಿಂ ಮುಖಂಡರು ಇಲ್ಲಿ ಎಚ್ಚರಿಸಿದರು.

ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಕಾಂಗ್ರೆಸ್‌ನ ಅಬ್ದುಲ್ ಹಮೀದ್ ಮುಶ್ರೀಫ್, ಅಬ್ದುಲ್ ರಜಾಕ್ ಹೊರ್ತಿ ಮತ್ತು ಎಂ.ಸಿ.ಮುಲ್ಲಾ, 'ಯತ್ನಾಳ ಅವರ ವಿರುದ್ಧ ಪೊಲೀಸ್ ಇಲಾಖೆ ಸೂಕ್ತ ಕಾನೂನು ಕ್ರಮಕೈಗೊಳ್ಳ-ಬೇಕು' ಎಂದು ಆಗ್ರಹಿಸಿದರು.

'ಅಪಪ್ರಚಾರಕ್ಕೆ ರಾಜ್ಯ ಸರ್ಕಾರ ಕಡಿವಾಣ ಹಾಕಲಿ'

ಧರ್ಮಸ್ಥಳಕ್ಕೆ ಬಿ.ವೈ. ವಿಜಯೇಂದ್ರ ನೇತೃತ್ವದಲ್ಲಿ ಶಾಸಕರ ತಂಡ ಭೇಟಿ; ಕ್ಷಮೆ ಕೇಳಲು ಮುಖ್ಯಮಂತ್ರಿಗೆ ಒತ್ತಾಯ

ಪ್ರಜಾವಾರ್ತೆ ವಾರ್ತೆ

ಉಜಿರೆ (ದಕ್ಷಿಣ ಕನ್ನಡ): 'ಎಸ್.ಐ.ಟಿ ತನಿಖೆಯ ನೆಪದಲ್ಲಿ ಧರ್ಮಸ್ಥಳ ಕ್ಷೇತ್ರದ ಬಗ್ಗೆ ಸಾಮಾಜಿಕ ಮಾಧ್ಯಮ-ಗಳಲ್ಲಿ ಅಪಪ್ರಚಾರ ನಡೆಯುತ್ತಿದ್ದು, ಸರ್ಕಾರ ಕಡಿವಾಣ ಹಾಕಬೇಕು' ಎಂದು ಬಿ.ಜೆ.ಪಿ. ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಒತ್ತಾಯಿಸಿದರು.

ಶಾಸಕರ ತಂಡದೊಂದಿಗೆ ಧರ್ಮಸ್ಥಳಕ್ಕೆ ಭಾನುವಾರ ಭೇಟಿ ನೀಡಿದ್ದ ಅವರು, ಮಂಜುನಾಥ ಸ್ವಾಮಿ ದರ್ಶನ ಪಡೆದು, ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ಅವರನ್ನು ಭೇಟಿಯಾದರು.

ಬಳಿಕ ಸುದ್ದಿಗಾರರ ಜೊತೆ ಮಾತನಾಡುತ್ತಾ, 'ಹೆಗ್ಗಡೆಯವರ ಜೊತೆ ಚರ್ಚಿಸಿದ್ದೇವೆ. ಅವರು ಎಸ್‌ಐಟಿ ರಚನೆ ಸ್ವಾಗತಿಸಿದ್ದಾರೆ. ಆದರೆ, ಅಪಪ್ರಚಾರ-ದಿಂದ ನೊಂದಿದ್ದಾರೆ' ಎಂದರು.

'ಎಸ್‌ಐಟಿ ರಚನೆಯಲ್ಲಿ ನಾವೂ ಸ್ವಾಗತಿಸಿದ್ದೆವು. ಆದರೆ, ತನಿಖೆ ವೇಳೆ ಕ್ಷ

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ

ಸುಭಾಷಿತ

ನನ್ನ ದೇಶ ನನಗಾಗಿ ಏನು ಮಾಡಬಲ್ಲದು ಎಂದು ಕೇಳಬೇಡಿ. ನನ್ನ ದೇಶಕ್ಕಾಗಿ ನಾನು ಏನು ಮಾಡಬಲ್ಲೆ ಎಂದು ಕೇಳಿಕೊಳ್ಳಿ.

-ಜಾನ್ ಎಫ್. ಕೆನಡಿ

ಸಂಪಾದಕೀಯ

ತಗ್ಗುತ್ತಿರುವ ಹಣದುಬ್ಬರ ಪ್ರಮಾಣ ಬೆಳವಣಿಗೆಗೆ ವೇಗ ನೀಡಲು ಸಕಾಲ

ವರ್ಷಗಳಿಂದ ಏರುಗತಿಯಲ್ಲಿ ಇದ್ದ 'ಗ್ರಾಹಕ ಬೆಲೆ ಸೂಚ್ಯಂಕ' (ಸಿಪಿಐ) ಆಧಾರಿತ ಚಿಲ್ಲರೆ ಹಣದುಬ್ಬರ ದರವು ಈಗ ಕೆಲವು ತಿಂಗಳುಗಳಿಂದ ಇಳಿಮುಖವಾಗಿದೆ. ಚಿಲ್ಲರೆ ಹಣದುಬ್ಬರ ಪ್ರಮಾಣವು ಜುಲೈ ತಿಂಗಳಲ್ಲಿ ಎಂಟು ವರ್ಷಗಳ ಕನಿಷ್ಠ ಮಟ್ಟವಾದ ಶೇ 1.55ಕ್ಕೆ ತಗ್ಗಿದೆ. ತರಕಾರಿ ಹಾಗೂ ಧಾನ್ಯಗಳು ಸೇರಿದಂತೆ ವಿವಿಧ ಬಗೆಯ ಆಹಾರ ಉತ್ಪನ್ನಗಳ ಬೆಲೆಯಲ್ಲಿನ ಇಳಿಕೆಯು ಹಣದುಬ್ಬರ ಪ್ರಮಾಣ ತಗ್ಗಲು ಕಾರಣವಾಗಿದೆ. ಹಿಂದಿನ ವರ್ಷದ ಜುಲೈನಲ್ಲಿ ಹಣದುಬ್ಬರ ಪ್ರಮಾಣವು ಶೇ 3.6ರಷ್ಟು ಇತ್ತು. ಕಳೆದ ವರ್ಷದ ಜುಲೈಗೆ ಹೋಲಿಸಿದರೆ ಈ ವರ್ಷದ ಜುಲೈನಲ್ಲಿ ಆಹಾರ ವಸ್ತುಗಳ ಬೆಲೆಯು ಇಳಿಕೆ ಕಂಡಿದೆ. ಮುಂಗಾರು ಮಳೆಯು ಚೆನ್ನಾಗಿ ಆಗುತ್ತಿರುವ ಕಾರಣಕ್ಕೆ ಹಾಗೂ ಕೃಷಿ ಚಟುವಟಿಕೆಗಳು ಉತ್ತಮವಾಗಿ ನಡೆದಿರುವ ಪರಿಣಾಮವಾಗಿ ಆಹಾರ ವಸ್ತುಗಳ ಬೆಲೆಯು ಮುಂದಿನ ದಿನಗಳಲ್ಲಿಯೂ ತೀರಾ ಹೆಚ್ಚಾಗುವ ಸಾಧ್ಯತೆ ಇಲ್ಲ. ಜಲಾಶಯಗಳಲ್ಲಿ ನೀರಿನ ಸಂಗ್ರಹವು ಚೆನ್ನಾಗಿ ಇದೆ. ಮುಂಗಾರು ಬೆಳೆಯು ಚೆನ್ನಾಗಿ ಆಗುವ ಅಂದಾಜು ಇದೆ. ಇವೆಲ್ಲವೂ ಬೆಲೆಯ ಸ್ಥಿರತೆಗೆ ನೆರವಾಗಲಿವೆ.

ಆಹಾರ ವಸ್ತುಗಳು ಹಾಗೂ ಇಂಧನವನ್ನು ಹೊರತುಪಡಿಸಿ ಇತರ ಉತ್ಪನ್ನಗಳ ಹಣದುಬ್ಬರ ಪ್ರಮಾಣವು ಜುಲೈನಲ್ಲಿ ಶೇ 4.1ರಷ್ಟು ಆಗಿದೆ. ಇದು ಜೂನ್‌ನಲ್ಲಿ ಶೇ 4.4ರಷ್ಟಾಗಿತ್ತು. ಗ್ರಾಹಕ ಬಳಕೆಯ ಇತರ ಕೆಲವು ವರ್ಗಗಳಲ್ಲಿನ ಉತ್ಪನ್ನಗಳ ಬೆಲೆ ಏರಿಕೆಯು ಜೂನ್‌ನಲ್ಲಿದ್ದ ಪ್ರಮಾಣದಲ್ಲೇ ಉಳಿದಿದೆ. ತಂಬಾಕು ಮತ್ತು ತಂಬಾಕು ಉತ್ಪನ್ನಗಳ ಬೆಲೆ ಏರಿಕೆಯು ಶೇ 2.4ರಷ್ಟು ಆಗಿದೆ. ಬಟ್ಟೆ ಹಾಗೂ ಪಾದರಕ್ಷೆಗಳ ಬೆಲೆ ಏರಿಕೆ ಪ್ರಮಾಣವು ಜೂನ್‌ನಲ್ಲಿ ಇದ್ದ ಮಟ್ಟದಲ್ಲೇ ಮುಂದುವರಿದಿದೆ. ಇಂಧನ ಮತ್ತು ವಿದ್ಯುತ್ ಬೆಲೆ ಏರಿಕೆಯು ಶೇ 2.5ರಷ್ಟು ಇದ್ದಿದ್ದು ಶೇ 2.7ಕ್ಕೆ ಹೆಚ್ಚಾಗಿದೆ. ಆದರೂ ಒಟ್ಟಾರೆ ಚಿತ್ರಣವು ಬೆಲೆ ಸ್ಥಿರತೆಯನ್ನು ಹೇಳುತ್ತಿದೆ. ದಿನಬಳಕೆಯ ಯಾವುದೇ ಉತ್ಪನ್ನದ ಬೆಲೆಯು ತಕ್ಷಣಕ್ಕೆ ಸವಾಲಾಗಿ ಪರಿಣಮಿಸುವ ಸಾಧ್ಯತೆ ಇಲ್ಲ. ಹೀಗಿದ್ದರೂ ಪರಿಸ್ಥಿತಿಯು ಮಧ್ಯಮಾವಧಿಯಲ್ಲಿ ಇದೇ ರೀತಿ ಉಳಿದುಕೊಳ್ಳುವುದಿಲ್ಲ. 2026ರ ಜನವರಿಯಿಂದ ಹಣದುಬ್ಬರ ಪ್ರಮಾಣವು ಹೆಚ್ಚಳ ಕಾಣಲಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ ಅಂದಾಜು ಮಾಡಿದೆ. ಅಮೆರಿಕದ ಒತ್ತಡಕ್ಕೆ ಮಣಿದು ಭಾರತವು ರಷ್ಯಾದಿಂದ ಕಚ್ಚಾ ತೈಲ ಖರೀದಿ ಕೈಬಿಟ್ಟರೆ, ಅದು ಕೂಡ ಹಣದುಬ್ಬರ ಹೆಚ್ಚಿಸುವ ಸಾಧ್ಯತೆ ಇದೆ.

ಹಣದುಬ್ಬರ ಪ್ರಮಾಣವು ದಾಖಲೆ ಪ್ರಮಾಣದಲ್ಲಿ ಕಡಿಮೆಯಾಗಿದೆ. ಈ ಸಂದರ್ಭ, ಆರ್ಥಿಕ ಬೆಳವಣಿಗೆಗೆ ವೇಗ ನೀಡುವ ಅವಕಾಶವೊಂದನ್ನು ಸರ್ಕಾರಕ್ಕೆ ಕಲ್ಪಿಸಿದೆ.

ಹಣದುಬ್ಬರಕ್ಕೆ ಸಂಬಂಧಿಸಿದ ಅಂಕಿ-ಅಂಶಗಳು ಈಗಿನ ಸಂದರ್ಭದಲ್ಲಿ ಹೆಚ್ಚು ಕಳವಳ ಮೂಡಿಸುವಂತೆ ಇಲ್ಲ. ಆದರೆ ಅರ್ಥ ವ್ಯವಸ್ಥೆಯ ಬೆಳವಣಿಗೆ ಕುರಿತ ಅಂದಾಜುಗಳು ತೀರಾ ಸಮಾಧಾನಕರವಾಗಿ ಇಲ್ಲ. ಪ್ರಸಕ್ತ ಹಣಕಾಸು ವರ್ಷದಲ್ಲಿ ಜಿಡಿಪಿ ಬೆಳವಣಿಗೆ ದರವು ಶೇ 6.5ರಷ್ಟು ಇರುತ್ತದೆ ಎಂದು ಆರ್‌ಬಿಐ ಅಂದಾಜು ಮಾಡಿದೆ. ಜಾಗತಿಕ ಅನಿಶ್ಚಿತತೆಗಳು ಜಿಡಿಪಿ ಬೆಳವಣಿಗೆ ದರದ ಮೇಲೆ ಪರಿಣಾಮ ಬೀರಬಹುದು ಎಂದು ಕೂಡ ಅದು ಹೇಳಿದೆ. ಅಮೆರಿಕವು ಆರಂಭಿಸಿರುವ ಸುಂಕ ಸಮರವು ದೇಶದ ಕೆಲವು ವಲಯಗಳ ಮೇಲೆ ಪರಿಣಾಮ ಉಂಟುಮಾಡುವುದು ಖಚಿತ. ಕೈಗಾರಿಕಾ ಉತ್ಪಾದನೆಯ ಸೂಚ್ಯಂಕವು ಜುಲೈನಲ್ಲಿ 10 ತಿಂಗಳ ಕನಿಷ್ಠ ಮಟ್ಟದಲ್ಲಿತ್ತು. ಅರ್ಥ ವ್ಯವಸ್ಥೆಯ ಆರೋಗ್ಯವನ್ನು ಸೂಚಿಸುವ ತೆರಿಗೆ ಸಂಗ್ರಹವು ಬಹಳ ಧನಾತ್ಮಕವಾಗಿ ಇಲ್ಲ. ಹಣದುಬ್ಬರ ಪ್ರಮಾಣವು ತೀರಾ ಕಡಿಮೆ ಆಗಿರುವುದು, ಆರ್ಥಿಕ ಬೆಳವಣಿಗೆಗೆ ಇಂಬು ನೀಡಲು ಸರ್ಕಾರವು ಮುಂದಡಿ ಇರಿಸಬಹುದಾದ ಸಂದರ್ಭವೊಂದನ್ನು ಸೃಷ್ಟಿಸಿಕೊಟ್ಟಿದೆ. ಸರ್ಕಾರದ ಕಡೆಯಿಂದ ಆಗುವ ವೆಚ್ಚ, ಹೂಡಿಕೆಗಳನ್ನು ಮಾತ್ರ ಆಧರಿಸಿ ಭಾರತ ಬೆಳವಣಿಗೆ ಕಾಣಲು ಸಾಧ್ಯವಿಲ್ಲ. ಖಾಸಗಿ ವಲಯದಿಂದ ಹೂಡಿಕೆ ಹೆಚ್ಚಬೇಕು. ಬೇಡಿಕೆಯು ಚುರುಕುಗೊಳ್ಳಬೇಕು. ಬೆಳವಣಿಗೆಗೆ ವೇಗ ನೀಡಲು ಅಥವಾ ವಿಷಮ ಸನ್ನಿವೇಶ ಎದುರಾದರೆ ಈಗಿನ ಬೆಳವಣಿಗೆ ಪ್ರಮಾಣವನ್ನು ಉಳಿಸಿಕೊಳ್ಳಲು ಈ ವಿಚಾರಗಳ ಬಗ್ಗೆ ಸರ್ಕಾರವು ಗಮನಹರಿಸಬೇಕು.

ನುಡಿ-ನಡೆಗಳ ನಡುವೆ ಗೆರೆ?

ವಿಶ್ಲೇಷಣೆ

ರಘುನಂದನ

ಸಂಸದೆ ಪ್ರಿಯಾಂಕಾ ಗಾಂಧಿ ಅವರು ಪ್ಯಾಲೆಸ್ಟೀನ್ ಪರವಾಗಿ ದಿಟ್ಟ ನಿಲುವು ವ್ಯಕ್ತಪಡಿಸುತ್ತಿರುವ ಸಂದರ್ಭದಲ್ಲೇ, ಕರ್ನಾಟಕವೂ ಸೇರಿದಂತೆ ಕಾಂಗ್ರೆಸ್ ಸರ್ಕಾರ ಇರುವ ರಾಜ್ಯಗಳಲ್ಲಿ ಪಕ್ಷದ ನಡೆ-ನುಡಿ ವಿರೋಧಾಭಾಸಗಳಿಂದ ಕೂಡಿದೆ. ಆ ವಿರೋಧಾಭಾಸ ಸರಿಪಡಿಸುವುದು ಕಾಂಗ್ರೆಸ್ ನಾಯಕಿಯಾಗಿ ಪ್ರಿಯಾಂಕಾ ಅವರ ಹೊಣೆಗಾರಿಕೆ ಅಲ್ಲವೆ?

ಹಲವು ತಿಂಗಳ ಹಿಂದೆ, ಪ್ರಿಯಾಂಕಾ ಗಾಂಧಿಯವರು ಪ್ಯಾಲೆಸ್ಟೀನಿನ ಹೆಸರಿದ್ದ ಬೂಟೀಕ್ ಬಗಲಚೀಲ ಹೊತ್ತು ತೆಗೆಸಿಕೊಂಡ ಫೋಟೊ ಎಲ್ಲ ಕಡೆಯೂ ಬಿತ್ತರಗೊಂಡಿತು. ಅವರು ಸಂಸತ್ತಿಗೆ ಹಾಜರಾಗುವಾಗ ತೆಗೆಸಿಕೊಂಡ ಫೋಟೊ ಅದು.

ಅವರು ಇದೀಗ ಇಸ್ರೇಲ್ ದೇಶವು ಗಾಜಾ ಪ್ರದೇಶದಲ್ಲಿ ಮಾಡುತ್ತಿರುವುದು 'ನರಮೇಧ' ಅನ್ನುವುದನ್ನು ಈ ಹಿಂದೆ ಗುರುತಿಸಿದ್ದಕ್ಕಿಂತ ಹೆಚ್ಚು ಗಟ್ಟಿಯಾಗಿ ಗುರುತಿಸಿ, ಹೆಚ್ಚು ಗಟ್ಟಿಯಾಗಿ ಮಾತನಾಡುತ್ತಿದ್ದಾರೆ; ಮೋದಿ ಸರ್ಕಾರವು ಪ್ಯಾಲೆಸ್ಟೀನಿಯರನ್ನು ಕೇವಲ ಬಾಯುಪಚಾರದ ಮಾತಿನಲ್ಲಿ ಬೆಂಬಲಿಸುತ್ತ, ಇಸ್ರೇಲ್ ಜೊತೆ ದೃಢವಾಗಿ ನಿಂತಿರುವುದನ್ನು ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ಟೀಕಿಸುತ್ತಿದ್ದಾರೆ.

ಆದರೆ, ಈಗ ಕರ್ನಾಟಕದಲ್ಲಿ ಸರ್ಕಾರ ನಡೆಸುತ್ತಿರುವ ಕಾಂಗ್ರೆಸ್ ಪಕ್ಷವು ಪ್ರಿಯಾಂಕಾ ಗಾಂಧಿಯವರು ತಾಳಿರುವ ನಿಲುವಿಗೆ ತದ್ವಿರುದ್ಧವಾದದ್ದನ್ನು ಮಾಡುತ್ತಿದೆ. ರಾಜ್ಯದ ಎಲ್ಲಿಯೂ- ನಾಲ್ಕು ಗೋಡೆಗಳ ನಡುವೆಯೇ ಆಗಲಿ, ಬಯಲಿನಲ್ಲಿಯೇ ಆಗಲಿ- ಪ್ಯಾಲೆಸ್ಟೀನ್ ಪರವಹಿಸಿ ಸಭೆಗಳನ್ನು ಭಿಡೆಯಿಲ್ಲದೆ ನಡೆಸುವಂತಿಲ್ಲ. ಬೆಂಗಳೂರಿನಲ್ಲಿ ಯಾರ ಕಣ್ಣಿಗೂ ಬೀಳದ ಜಾಗವಾದ ಫ್ರೀಡಂ ಪಾರ್ಕಿನ ಹೊರಗಿರುವ ಮೂಲೆಯೊಂದನ್ನು ಬಿಟ್ಟರೆ ಊರಿನ ಬೇರೆಲ್ಲಿಯೂ ಪ್ಯಾಲೆಸ್ಟೀನ್ ಕುರಿತಾದದ್ದೂ ಸೇರಿದಂತೆ ಯಾವ ವಿಷಯದ ಬಗ್ಗೆಯೂ ಬಹಿರಂಗ ಸಭೆ ನಡೆಸುವಂತಿಲ್ಲ; ಪ್ಯಾಲೆಸ್ಟೀನಿನ ಬಾವುಟವನ್ನು ಪ್ರದರ್ಶಿಸುವಂತಿಲ್ಲ. ನಾಲ್ಕು ಗೋಡೆಗಳ ನಡುವೆ ಸಭೆ ನಡೆಸಲು ಹೊರಟು, ಅದಕ್ಕಾಗಿ ಪೊಲೀಸರಿಂದ ಅಧಿಕೃತ ಅನುಮತಿ ಪಡೆದ ಮೇಲೂ, ಸಭೆಗಾಗಿ ಜಾಗ ಕೊಟ್ಟವರನ್ನು ಅನಧಿಕೃತವಾಗಿ ಕಂಡು ಬೆದರಿಸಿ, ಕಿರುಕುಳ ಕೊಟ್ಟು ಅಲ್ಲಿ ಸಭೆ ನಡೆಯದಂತೆ ನೋಡಿಕೊಂಡಿದ್ದಾರೆ ಅವರು; ಬಹಿರಂಗ ಸಭೆ ನಡೆಸಿದ ಕೆಲವರ ಮೇಲೆ ಕೇಸು ಹಾಕಿದ್ದಾರೆ. ಪ್ಯಾಲೆಸ್ಟೀನನ್ನು ಬೆಂಬಲಿಸಿ ಇಸ್ರೇಲನ್ನು ಟೀಕಿಸಲು ಹೊರಟವರಿಗೆ ತಿರುತಿರುಗಿ ಆಗುತ್ತಿರುವ ಅನುಭವ ಇದು.

ಭಾರತವು ಸ್ವಾತಂತ್ರ್ಯಪೂರ್ವದಿಂದಲೂ ಪ್ಯಾಲೆಸ್ಟೀನಿಯರ ಹಕ್ಕುಗಳ ಪರವಾಗಿ ನಿಂತಿರುವ ದೇಶವಾಗಿದೆ. ಪ್ಯಾಲೆಸ್ಟೀನ್ ಲಿಬರೇಷನ್ ಆರ್ಗನೈಜೇಷನ್‌ನ ನಾಯಕ ಯಾಸರ್ ಅರಾಫತ್ ಅವರು ನಮ್ಮ ದೇಶದ ದೊಡ್ಡ ಸ್ನೇಹಿತರಾಗಿದ್ದರು. 1974ರಲ್ಲಿ, ಪ್ಯಾಲೆಸ್ಟೀನಿಯರ ಅಧಿಕೃತ, ಏಕೈಕ ಪ್ರತಿನಿಧಿ ಎಂದರೆ ಆ ಸಂಘಟನೆಯೇ ಎಂದು ನಮ್ಮ ದೇಶವು ಅದಕ್ಕೆ ಮನ್ನಣೆ ನೀಡಿತು. 1988ರಲ್ಲಿ, ತಮ್ಮದೊಂದು ಸ್ವತಂತ್ರ, ಸ್ವಾಯತ್ತ ದೇಶ ಎಂದು ಪ್ಯಾಲೆಸ್ಟೀನಿಯರು ಘೋಷಿಸಿಕೊಂಡರು. ಆಗ ಅದಕ್ಕೆ ಮನ್ನಣೆ ನೀಡಿದ ಮೊತ್ತಮೊದಲ, ಅರಬ್ ಅಲ್ಲದ, ದೇಶ ಭಾರತ. ಆಮೇಲಿನ ದಶಕಗಳಲ್ಲಿ, ಇಸ್ರೇಲ್ ಜೊತೆಗಿನ ನಮ್ಮ ಸಂಧಾನ ನಿಧಾನ ಹೆಚ್ಚುತ್ತ, ಪ್ಯಾಲೆಸ್ಟೀನ್ ಪರವಾದ ದನಿ ತಗ್ಗುತ್ತ ಬಂದಿದ್ದು, ಬಿಜೆಪಿ-ಮೋದಿ ಸರ್ಕಾರವು ಅಧಿಕಾರ ವಹಿಸಿಕೊಂಡ ಮೇಲೆಯಂತೂ ಕೇವಲ ಕಾಟಾಚಾರದ ದನಿಯಾಗಿದೆ. ಆದರೆ, ಈಗಲೂ ಅಧಿಕೃತ, ಘೋಷಿತ ನೆಲೆಯಲ್ಲಿ ಪ್ಯಾಲೆಸ್ಟೀನ್ ಕುರಿತ ನಮ್ಮ ನಿಲುವು ಬದಲಾಗಿಲ್ಲ, ಮತ್ತು ಬದಲಾಗಬಾರದು ಕೂಡ.

ಆ ನಿಲುವನ್ನು ರುಜುಗೊಳಿಸುವ ದಾರಿ ಈಗ ಇದೊಂದೇ: ಬಾಯ್‌ಕಾಟ್, ಡಿಸಿನ್ವೆಸ್ಟ್, ಸ್ಯಾಂಕ್ಷನ್ (ಬಿಡಿಎಸ್). ಅಂದರೆ, ಕ್ರಮವಾಗಿ, ಇಸ್ರೇಲ್‌ಗೆ ಸಂಪೂರ್ಣ ಬಹಿಷ್ಕಾರ ಹಾಕಿ ಆಮದು-ರಫ್ತು ಮತ್ತು ಸಾಂಸ್ಕೃತಿಕ, ವೈಜ್ಞಾನಿಕ, ಶೈಕ್ಷಣಿಕ ಕೊಡು-ಕೊಳೆ ಸೇರಿದಂತೆ ಅದರ ಜೊತೆಗಿನ ಎಲ್ಲ ಸಂಬಂಧವನ್ನೂ ಬಿಟ್ಟುಕೊಡುವುದು; ಅಲ್ಲಿ ಭಾರತದ ಕಂಪನಿಗಳು ಹೂಡಿರಬಹುದಾದ ಹಣವನ್ನು ವಾಪಸು ಪಡೆಯುವುದು; ಇಸ್ರೇಲ್‌ನೊಂದಿಗೆ ಸಂಬಂಧವಿರಿಸಿಕೊಂಡಿರುವ ವ್ಯಕ್ತಿ, ಸಂಸ್ಥೆ, ದೇಶಗಳ ಜೊತೆಗಿನ ನಮ್ಮ ವಹಿವಾಟನ್ನು ಸಂಪೂರ್ಣವಾಗಿ, ಇಲ್ಲವೆ ಸರಿಕಂಡ ಬೇರೆ ಬೇರೆ ಪ್ರಮಾಣದಲ್ಲಿ, ತಗ್ಗಿಸಿ, ಕಡಿದುಕೊಳ್ಳುವುದು.

ಬಹಳ ಕಡಿಮೆ ಜನರಿಗೆ ಗೊತ್ತಿರುವ ವಿಷಯ ಇದು: ಬೆಂಗಳೂರಿನಲ್ಲಿ, ಇಸ್ರೇಲ್‌ಗಾಗಿ ಶಸ್ತ್ರಾಸ್ತ್ರಗಳನ್ನೂ ಅವುಗಳ ಕೆಲವು ಭಾಗಗಳನ್ನೂ ತಯಾರು ಮಾಡಿ ಕೊಡುತ್ತಿರುವ ಒಂಬತ್ತು ಕಂಪನಿಗಳಿವೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಇಲ್ಲಿ ಕಳೆದ ವರ್ಷ ನಡೆದ ಇಂಡಿಯಾ-ಇಸ್ರೇಲ್ ವಾಣಿಜ್ಯ ಶೃಂಗ ಸಮಾವೇಶದಲ್ಲಿ ಅತ್ಯುತ್ಸಾಹದಿಂದ ಪಾಲ್ಗೊಂಡರು. ಬೆಂಗಳೂರಿನಲ್ಲಿರುವ ಇಸ್ರೇಲ್‌ನ ಕಾನ್ಸುಲೇಟ್ ಜನರಲ್ ಕಚೇರಿಯ ಮುಖ್ಯಸ್ಥೆ ಹಾಗೂ ಉಪಮುಖ್ಯಸ್ಥೆಯರು ಡಿ.ಕೆ. ಶಿವಕುಮಾರ್ ಅವರನ್ನು ಕಾಣಲು ಹೋದಾಗ, ಅವರು ಅವರಿಬ್ಬರನ್ನೂ ಅಧಿಕೃತ ಅಗತ್ಯದ ಹದ್ದನ್ನು ಮೀರಿದ ಆದರದಿಂದ ಬರಮಾಡಿಕೊಂಡು, ತೀರ ಹೆಚ್ಚೆನಿಸುವ ಸನ್ಮಾನ ಮಾಡಿ, ಅದೆಲ್ಲವುದರ ಫೋಟೊಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡು ಸಂಭ್ರಮಿಸಿದರು. ರಾಜ್ಯ ಸರ್ಕಾರದ ಈ ನೀತಿ, ನಡವಳಿಕೆಯನ್ನು ಬದಲಿಸುವುದು ಪ್ರಿಯಾಂಕಾ ಗಾಂಧಿ ಹಾಗೂ ಅವರ ಪಕ್ಷದ ನಾಯಕರ ಅತಿ ತುರ್ತಿನ ಗುರಿ ಆಗಬೇಕು.

ಪ್ಯಾಲೆಸ್ಟೀನ್ ಕುರಿತು ಪ್ರಿಯಾಂಕಾ ಗಾಂಧಿಯವರು ತಾಳಿರುವ ನಿಲುವಿನಲ್ಲಿ ಪ್ರಾಮಾಣಿಕತೆ ಇದೆ ಎಂದಾದರೆ ಅವರು ಮಾಡಬೇಕಾದ ಕೆಲವು ಕೆಲಸಗಳಿವೆ.

ಒಂದು, ತಮ್ಮ ಪಕ್ಷವು ಅಧಿಕಾರದಲ್ಲಿರುವ ಕರ್ನಾಟಕ, ತೆಲಂಗಾಣ ಹಾಗೂ ಹಿಮಾಚಲ ಪ್ರದೇಶಗಳಲ್ಲಿ ಪ್ಯಾಲೆಸ್ಟೀನನ್ನು ಬೆಂಬಲಿಸುವ ಸಾರ್ವಜನಿಕ ಸಭೆಗಳಿಗೆ ಯಾವ ಅಡೆತಡೆಯೂ ಇಲ್ಲದಂತೆ ಮಾಡಬೇಕು ಮತ್ತು ಆ ಸಭೆಗಳಿಗೆ ನೆರವು ನೀಡಬೇಕು ಎಂದು ಆಯಾ ರಾಜ್ಯದ ಸರ್ಕಾರಕ್ಕೆ ಬಹಿರಂಗವಾಗಿ ತಾಕೀತು ಮಾಡಬೇಕು. ಎರಡು, ಆ ರಾಜ್ಯಗಳಲ್ಲಿಯೂ ದೇಶದ ಉಳಿದೆಡೆಯೂ ಪ್ಯಾಲೆಸ್ಟೀನನ್ನು ಬೆಂಬಲಿಸಿ, ಮುಕ್ತವಾದ ಸಭೆಗಳನ್ನು ನಡೆಸಲು ತಮ್ಮ ಪಕ್ಷದವರಿಗೆ ಕರೆ ನೀಡಬೇಕು; ಕೆಲವು ಸಭೆಗಳಲ್ಲಿ ತಾವೂ ತಮ್ಮ ಪಕ್ಷದ ಬೇರೆ ಧುರೀಣರೊಡನೆ ಪಾಲ್ಗೊಳ್ಳಬೇಕು. ಮೂರು, ಮೇಲೆ ಹೇಳಿದ ಬಿಡಿಎಸ್ ಕ್ರಮಗಳನ್ನು ತುರ್ತಾಗಿ ಕೈಗೊಳ್ಳುವಂತೆ ಮೋದಿ ಸರ್ಕಾರದ ಮೇಲೆ ಒತ್ತಡ ತರಬೇಕು; ಅಗತ್ಯಬಿದ್ದರೆ, ಅದಕ್ಕಾಗಿ ದೇಶದಾದ್ಯಂತ ಬೀದಿ ಚಳವಳಿ ನಡೆಸುತ್ತ, ಅದರ ಮುಂದಾಳ್ತನವನ್ನು ತಾವೇ ವಹಿಸಿ, ಬೀದಿಗಿಳಿಯಲು ಸಿದ್ಧರಿರಬೇಕು. ನಾಲಕ್ಕು, ಅತ್ಯಂತ ತುರ್ತಾಗಿ ಮತ್ತು ಕಾರ್ಯಸಾಧ್ಯವಾದುದಾಗಿ, ಇಸ್ರೇಲ್‌ಗೆ ಶಸ್ತ್ರಾಸ್ತ್ರಗಳನ್ನು ಕಳಿಸುತ್ತಿರುವ ಕಂಪನಿಗಳಿಗೆ ಕರ್ನಾಟಕ ಮತ್ತು ತೆಲಂಗಾಣ ಸರ್ಕಾರಗಳು ತಾವು ನೀಡಿರುವ ಸವಲತ್ತುಗಳನ್ನು ವಾಪಸು ಪಡೆದುಕೊಳ್ಳುವಂತೆ ಮಾಡಿ, ಈ ಎರಡು ರಾಜ್ಯಗಳಿಂದ ಆ ಕಂಪನಿಗಳ ಎತ್ತಂಗಡಿ ಆಗುವಂತೆ ಮಾಡಬೇಕು. ಐದು, ಈ ಎಲ್ಲವನ್ನೂ, ಈ ವಿಷಯದಲ್ಲಿ ಸರಿಯಾದ ನಿಲುವು ಮತ್ತು ನಡೆಯನ್ನು ಹೇಗೂ ತೋರುತ್ತಲೆ ಬಂದಿರುವ ಎಡಪಕ್ಷಗಳೊಂದಿಗೆ ಸೇರಿ ಮಾಡುತ್ತ, ತಮ್ಮಿಬ್ಬರ ಜೊತೆ ಸೇರಲು 'ಇಂಡಿಯಾ' ಮೈತ್ರಿಕೂಟದ ಬೇರೆ ಪಕ್ಷಗಳನ್ನೂ ಒಪ್ಪಿಸುವ ಪ್ರಯತ್ನ ಮಾಡಬೇಕು; ಹಾಗೂ ಲೋಕಹಿತಕ್ಕಾಗಿ ಕೆಲಸ ಮಾಡುತ್ತಿರುವ ಬೇರೆಲ್ಲ ಸಂಘಟನೆ, ಚಳವಳಿ, ಸಂಸ್ಥೆಗಳನ್ನು ತಮ್ಮೊಡನೆ ಕರೆದೊಯ್ಯಬೇಕು.

ಇಲ್ಲದಿದ್ದಲ್ಲಿ, ಈ ವಿಷಯದಲ್ಲಿನ ಅವರ ನಡೆ ನುಡಿಗಳೆರಡೂ ಯುರೋಪಿನ ದೇಶಗಳ ಅಧ್ಯಕ್ಷರು, ಪ್ರಧಾನಿಗಳು ಹಾಗೂ ಅರಬ್ ದೇಶಗಳ ಮಾಲೀಕರು ಹಾಗೂ ಅಮೀರರ ನಡೆ ನುಡಿಗಳಿಗೆ ಸಮನಾದುವಾಗುತ್ತವೆ. ಇಸ್ರೇಲ್ ಕಳೆದ ಎಪ್ಪತ್ತೇಳು ವರ್ಷಗಳಿಂದ ಪ್ಯಾಲೆಸ್ಟೀನಿಯರ ನೆಲವನ್ನು ಕಿತ್ತುಕೊಳ್ಳುತ್ತ, ಅವರ ಮೇಲೆ ನಡೆಸುತ್ತ ಬಂದಿರುವ ಹಿಂಸಾಚಾರವನ್ನು ವಿರೋಧಿಸದಿದ್ದ ಆ ದೇಶಗಳು, ಆ ದೇಶವು ಕಳೆದ ಎರಡು ವರ್ಷಗಳುದ್ದಕ್ಕೂ ನಿರಂತರ ಬಾಂಬ್ ಮತ್ತು ಗುಂಡಿನ ದಾಳಿ ನಡೆಸಿ, ಆಸ್ಪತ್ರೆ, ಶಾಲೆ, ನೀರು ಸರಬರಾಜಿನ ವ್ಯವಸ್ಥೆ, ಒಳಚರಂಡಿ ವ್ಯವಸ್ಥೆ ಮುಂತಾಗಿ ಅಲ್ಲಿನ ಜನರ ಸರ್ವಸ್ವವನ್ನೂ ನೆಲಸಮ ಮಾಡಿ, ಕಡೆಗೆ ಅವರಿಗೆ ಅನ್ನ, ನೀರು ಕೂಡ ಸಿಗದಂತೆ ನೋಡಿಕೊಂಡು, ಹಸಿವಿನಿಂದ ಕಂಗೆಟ್ಟು ಮೂಳೆಚಕ್ಕಳವಾದ ಆ ಜನರಿಗೆ 'ಅನ್ನ ನೀರಿನ ದಾನ ಮಾಡುತ್ತೇವೆ ಬನ್ನಿ' ಎಂದು ಕರೆದು, ಅದಕ್ಕಾಗಿ ಬಂದವರನ್ನು, ಹೆಂಗಸರು, ಮಕ್ಕಳು, ಮುದುಕರು ಎನ್ನದೆ ಗುಂಡಿಟ್ಟು ಕೊಲ್ಲುತ್ತಿರುವ ಈ ಹೊತ್ತು, ಹಸು ಮಕ್ಕಳನ್ನು ಹಸಿವು, ನೀರಡಿಕೆಗಳಿಗೆ ಈಡು ಮಾಡಿ ಕೊಲ್ಲುತ್ತಿರುವ ಈ ಹೊತ್ತು, ಈಜಿಪ್ತಿನ ಗಡಿಯಲ್ಲಿ ಗಾಜಾದೊಳಕ್ಕೆ ಪ್ರವೇಶ ಮಾಡಲು ಆರು ಸಾವಿರ ಟ್ರಕ್‌ಗಳು ಒಂದು ಲಕ್ಷದ ಎಪ್ಪತ್ತು ಸಾವಿರ ಮೆಟ್ರಿಕ್ ಟನ್ ಆಹಾರ ಹೊತ್ತು ಇಸ್ರೇಲ್‌ನ ಪರವಾನಗಿಗಾಗಿ ವಾರಗಟ್ಟಲೆ ಕಾದು ನಿಂತಿರುವ ಈ ಹೊತ್ತು, ಮತ್ತು, ಒಂದು ವೇಳೆ ಈಗ ಗಾಜಾದ ಜನರಿಗೆ ಅನ್ನಾಹಾರ ಸಿಕ್ಕರೂ, ಅವರು ಈಗ ಏನನ್ನು ತಿಂದರೂ, ಇಷ್ಟು ದಿನಗಳ ಉಪವಾಸದಿಂದಾಗಿ ಒಡಲು ಬತ್ತಿಹೋಗಿ, ಮತ್ತೆ ಚೇತರಿಸಿಕೊಳ್ಳಲು ಸಾಧ್ಯವಾಗದಷ್ಟು ಮುರುಟಿಹೋದ ಒಳ-ಅಂಗಾಂಗಗಳ ಜೀವಚ್ಛವಗಳಾಗಿ ಬಿಟ್ಟಿರುವ ಈ ಹೊತ್ತು, ಇದೀಗ, ಎಲ್ಲ ಆಗಿಹೋದ ಮೇಲೆ, ಪ್ಯಾಲೆಸ್ಟೀನಿಯರಿಗೆ ಕೊಂಚ ಸಹಾನುಭೂತಿ ತೋರುತ್ತ, ಇಸ್ರೇಲ್‌ಗೆ ಕೆಲವು ರೀತಿಯ ಚಿಕ್ಕ ಕಡಿವಾಣ ಮತ್ತು ದಿಗ್ಬಂಧನ ಹಾಕುವ ಮಾತನ್ನು ಮ

ಸರ್ಕಾರಿ ಶಾಲೆಗಳ ಸಾಧ್ಯತೆ-ಸಮಸ್ಯೆ; ಇಂಗ್ಲಿಷ್ ಕಲಿಕೆ, ಶಿಕ್ಷಕರ ಪರಿಣತಿ, ಮೂಲಸೌಕರ್ಯಕ್ಕೆ ಬೇಕಿದೆ ಒತ್ತು

ಚಾಮರಾಜನಗರ ಜಿಲ್ಲೆ ಶತಮಾನ ಕಂಡ 35 ಶಾಲೆಗಳು

ಕರ್ನಾಟಕದಲ್ಲಿ ಶತಮಾನ ಕಂಡ 3,200ಕ್ಕೂ ಹೆಚ್ಚು ಸರ್ಕಾರಿ ಶಾಲೆಗಳಿವೆ. ಕೆಲವು ಶಾಲೆಗಳಲ್ಲಿ ಹೆಚ್ಚು ವಿದ್ಯಾರ್ಥಿಗಳಿದ್ದು, ಊರಿನ ಜನರ ಸಹಕಾರದಿಂದ ಚೆನ್ನಾಗಿ ನಡೆಯುತ್ತಿವೆ. ಹಲವು ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇರುವ ಕಾರಣಕ್ಕೆ ಮುಚ್ಚುವ ಭೀತಿ ಎದುರಿಸುತ್ತಿವೆ. ಶೈಕ್ಷಣಿಕವಾಗಿ ಈಗಷ್ಟೇ ಮುಂದುವರಿಯುತ್ತಿರುವ ಗಡಿ ಜಿಲ್ಲೆ ಚಾಮರಾಜನಗರದಲ್ಲಿ ಇಂತಹ 35 ಶಾಲೆಗಳಿವೆ. ಆ ಶಾಲೆಗಳ ಸ್ಥಿತಿಗತಿ, ಅಲ್ಲಿರುವ ಬೋಧನಾ ವ್ಯವಸ್ಥೆ ಹಾಗೂ ಇನ್ನಿತರ ವಿಚಾರಗಳನ್ನು ಶಿಕ್ಷಣ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವ ಇಬ್ಬರು ಹಿರಿಯರು ಈ ಲೇಖನದಲ್ಲಿ ವಿವರಿಸಿದ್ದಾರೆ

ಚಾಮರಾಜನಗರದ ಹೃದಯ ಭಾಗದಲ್ಲಿರುವ ಸರ್ಕಾರಿ ಪೇಟೆ ಹಿರಿಯ ಪ್ರಾಥಮಿಕ ಶಾಲೆಯ ನೋಟ

ಹೇಗಿದೆ ಬಿಸಿಯೂಟದ ನಿರ್ವಹಣೆ?

ಸರ್ಕಾರಿ ಶಾಲೆಯಲ್ಲಿ 200, 300 ಮಕ್ಕಳಿದ್ದಲ್ಲಿ ನಿಜಕ್ಕೂ ಬಿಸಿಯೂಟದ್ದು ಸಮಸ್ಯೆ. ಅದರ ಕೆಲಸ ಅಧಿಕ. ತರಗತಿಯಲ್ಲಿ ಪಾಠದ ಹೊತ್ತಿನಲ್ಲಿ ಎಷ್ಟು ಮಕ್ಕಳು ಇಂದು ಮೊಟ್ಟೆ ತೆಗೆದುಕೊಳ್ಳುತ್ತಾರೆ, ಮತ್ತೆಷ್ಟು ಮಕ್ಕಳು ಬಾಳೆಹಣ್ಣು ಕೇಳುತ್ತಾರೆ ಎಂಬುದರ ನಿಖರ ಮಾಹಿತಿ ಸಂಗ್ರಹಿಸಬೇಕು. ಯಾಕೆಂದರೆ ಮನೆಯಲ್ಲಿ ಹೇಳಿಕೊಟ್ಟಂತೆ ಅವು, 'ಈ ದಿನ ಮನೆ ದೇವರ ವಾರ ಮೊಟ್ಟೆ ತಿನ್ನುವುದಿಲ್ಲ' ಎನ್ನುತ್ತವೆ. ಮೊಟ್ಟೆ ಬದಲು ಬಾಳೆಹಣ್ಣು ತರಬೇಕು. ಈ ಸಂಬಂಧ ಮೇಲಧಿಕಾರಿಗಳಿಗೆ ತರಗತಿಯಲ್ಲಿ ಮಕ್ಕಳಿಂದಲೇ ಸಮಜಾಯಿಷಿ ಕೊಡಿಸಬೇಕು ಎನ್ನುತ್ತಾರೆ ಶಿಕ್ಷಕರು. ವಾರಕ್ಕೆರಡು ದಿನ ಸರ್ಕಾರ ಮೊಟ್ಟೆ ಕೊಡಲು ಹೇಳಿದ್ದರೆ, ಅಜೀಂ ಪ್ರೇಮ್‌ಜಿ ಸಂಸ್ಥೆಯವರು ನಾಲ್ಕು ದಿನ ಕೊಡುತ್ತಿದ್ದಾರೆ. ಆದರೆ, ಮೊಟ್ಟೆಯ ಬೆಲೆ ಏರುಪೇರು ಆದಲ್ಲಿ ಆ ಹಣವನ್ನು ಯಾವುದರಿಂದ ಭರಿಸಬೇಕು? ಇಷ್ಟಾಗಿಯೂ ಬಹುತೇಕ ಎಲ್ಲಾ ಶಾಲೆಗಳೂ ಬಿಸಿಯೂಟದ ಕಾರ್ಯಕ್ರಮವನ್ನು ಚೆನ್ನಾಗಿಯೇ ನಿರ್ವಹಿಸುತ್ತಿವೆ. ರಾಮಾಪುರದ ಶಾಲೆಯಲ್ಲಿ ಬಿಸಿಯೂಟ ತಯಾರಿಕೆಯ ಸ್ಥಳಕ್ಕೆ ಭದ್ರತೆ ಇದ್ದಂತಿಲ್ಲ.

ಅಡುಗೆ ಮಾಡುವಲ್ಲಿ ದಲಿತ ಹೆಣ್ಣುಮಕ್ಕಳು ಭಾಗವಹಿಸುವರೇ ಎನ್ನುವಲ್ಲಿ ಅಧ್ಯಾಪಕರು, 'ಅಂಥ ವೇಳೆ ಮೊದಲು ನಾವೇ ಊಟ ಮಾಡುತ್ತೇವೆ' ಎಂದರು. ಇದು ಮೆಚ್ಚಬೇಕಾದದ್ದು. ರಮ್ಯ ಪ್ರಕೃತಿಯ ನಡುವೆ ಇರುವ ಬಾಚಳ್ಳಿ ಶಾಲೆಯಲ್ಲಿ ಬಿಸಿಯೂಟಕ್ಕೆ ಹಕ್ಕಿಪಕ್ಷಿಗಳೂ ಬಂದಿದ್ದವು. ಅಲ್ಲಿಯ ಮಕ್ಕಳು ಸಂಜೆ ಮೂರೂವರೆಯಲ್ಲಿ ಊಟ ಮಾಡುತ್ತಿರಲು, ಇಷ್ಟು ತಡವಾಗಿ ಯಾಕೆ ಎಂದು ಕೇಳಿದ್ದಕ್ಕೆ, 'ಮಧ್ಯಾಹ್ನದ ಅನ್ನ ಉಳಿದಿತ್ತು, ಈಗ ಎರಡನೇ ಸರ್ತಿ, ಮನೆಯಲ್ಲಿ ರಾತ್ರಿ ಊಟ ಮಾಡುವುದಿಲ್ಲ' ಅಂದರು. ನಿಜಕ್ಕೂ ಈ ಬಿಸಿಯೂಟ ಮತ್ತು ಜಿಲ್ಲಾ ಪಂಚಾಯತಿಗೆ ಸೇರುವ ಕೂಸಿನ ಮನೆ ಯೋಜನೆ ದೊಡ್ಡದು. ಆದರೆ ಹಣವಿರುವವರಿಗೆ ಈ ಊಟ, ಬಡವರ ಮಕ್ಕಳ ಶಾಲೆಯ ಅಗತ್ಯವೇ ಇಲ್ಲ.

ಊರ ಹೆಮ್ಮೆಯ ಗುರುತಾಗಿ ಉಳಿಸಿ

ಶತಮಾನದ ಶಾಲೆಯ ಕಟ್ಟಡಗಳನ್ನು ಕೆಲವು ಕಡೆ ಉರುಳಿಸಿರುವುದನ್ನು ಬಿಟ್ಟರೆ ಇದೀಗ ಇರುವಂಥವನ್ನು ಊರ ಹೆಮ್ಮೆಯ ಗುರುತಾಗಿ ಉಳಿಸಿಕೊಳ್ಳಬಹುದು. ಕೆಲವು ಕಡೆ ಇವು ರಿಪೇರಿಯಾಗಿ ಚೆನ್ನಾಗಿಯೇ ನಡೆಯುತ್ತಿವೆ. ಈ ಶಾಲೆಗಳು, ಅಲ್ಲೇ ಬೃಹತ್ತಾಗಿ ಬೆಳೆದು ನಿಂತಿರುವ ಅರಳಿ ಮರಗಳೊಡನೆ ಎಷ್ಟೋ ಜರುಗಿ ಹೋದ ಕಥೆಗಳನ್ನು ಒಡಲಲ್ಲಿಟ್ಟುಕೊಂಡು ನಿಂತಿವೆ. ನೂರು ವರ್ಷಗಳಲ್ಲಿ ಈ ಶಾಲೆಗಳಲ್ಲಿ ಅಕ್ಷರಾಭ್ಯಾಸಗೈದು ಪ್ರಪಂಚವೆಲ್ಲ ಹರಡಿಹೋದವರ ಲೆಕ್ಕ ಇಡಲು ಸಾಧ್ಯವೇ? ಅಂಥ ಕೆಲವರ ಸಹಾಯ ಹಸ್ತವೂ ಇದೆ. ಚಾಮರಾಜನಗರದ ಪೇಟೆ ಪ್ರೈಮರಿ ಶಾಲೆಯಲ್ಲಿ ಕನ್ನಡದ ಲೇಖಕ ಕುವೆಂಪು ಅವರ ಪ್ರಿಯ ಶಿಷ್ಯ ಡಾ. ಪ್ರಭುಶಂಕರ, ಹಿಂದೆ ಶಿಕ್ಷಣ ಮಂತ್ರಿಗಳಾಗಿದ್ದ ಪ್ರೊ.ಬಿ.ಕೆ.ಚಂದ್ರಶೇಖರ್ ಮತ್ತು ಗೃಹಮಂತ್ರಿಗಳಾಗಿದ್ದ ಬಿ.ರಾಚಯ್ಯನವರು ಓದಿದ್ದರಂತೆ. ಸರ್ ಮಿರ್ಜಾ ಇಸ್ಮಾಯಿಲ್ ಈ ಶಾಲೆಗೆ ಭೇಟಿ ಕೊಟ್ಟಿದ್ದರು. ತೀರಾ ಸಣ್ಣ ಸಣ್ಣ ಹಳ್ಳಿಗಳಲ್ಲಿರುವ ಶಾಲೆಗಳ ಉದ್ಘಾಟನೆಗಾಗಿ ಕಳೆದ ದಶಕಗಳಲ್ಲಿ ಶಿಕ್ಷಣ ಮಂತ್ರಿಗಳಾಗಿದ್ದ ಆರ್. ಬದರೀನಾರಾಯಣ, ಎಸ್.ಆರ್.ಕಂಠಿ, ಲೋಕೋಪಯೋಗಿ ಸಚಿವರಾಗಿದ್ದ ಎಚ್.ಎಂ.ಚೆನ್ನಬಸಪ್ಪ ಮತ್ತು ಕೆ.ಸಿ.ರೆಡ್ಡಿ, ಬ್ರಿಟಿಷ್ ದೊರೆಗಳು ಆಗಮಿಸಿದ್ದರ ಶಿಲಾ ಫಲಕಗಳು, ಜತೆಗೆ ಶಾಲಾ ಕಟ್ಟಡಕ್ಕೆ ಸ್ಥಳ ದಾನ ಮಾಡಿದ ಮಹನೀಯರ ದಾಖಲೆಗಳೂ ಇವೆ. ಕಬ್ಬಳ್ಳಿಯಲ್ಲಿ ಶತಮಾನದ ಹಿಂದೆಯೇ ಶಿಕ್ಷಕರಿಗೆ ಶಾಲೆಯ ಎದುರೇ ವಸತಿಗೃಹಗಳನ್ನು ನಿರ್ಮಿಸಿ ಕೊಡಲಾಗಿದೆ!

• ಪ್ರೊ.ಜಿ.ಎಸ್.ಜಯದೇವ, ಪ್ರೊ.ಕೃಷ್ಣಮೂರ್ತಿ ಹನೂರು

ಚಾಮರಾಜನಗರ ಪಟ್ಟಣದ ನಡುಭಾಗದಲ್ಲಿ 1905ರಲ್ಲಿ ಆರಂಭವಾಗಿ ನೂರಿಪ್ಪತ್ತು ವರ್ಷ ಕಳೆದಿರುವ ಸರ್ಕಾರಿ ಉನ್ನತ ಪ್ರಾಥಮಿಕ ಶಾಲೆಯ ಅಧ್ಯಾಪಕಿಯರು ಅಲ್ಲಿಯ ಪುಟ್ಟ ಹೆಣ್ಣುಮಗಳನ್ನು ತೋರಿಸಿ, 'ಇವಳು ತುಂಬಾ ಚಟುವಟಿಕೆಯವಳು, ಕಚೇರಿಯಿಂದ ಕೀಲಿ ಕೊಂಡು ಹೋಗಿ ಎಲ್ಲಾ ತರಗತಿಗಳ ಬಾಗಿಲು ತೆರೆಯುವಳು' ಎಂದರು. ಆಕೆಯ ನೋಟ್ ಬುಕ್ ನೋಡಿದರೆ ಹಾಳೆಯ ತುಂಬ ಪೆನ್ಸಿಲಿನಲ್ಲಿ ತಪ್ಪಿಲ್ಲದಂತೆ ಪದ-ವಾಕ್ಯಗಳನ್ನು ಬರೆದಿದ್ದಳು. ಆಕೆಗೆ ತಂದೆ ತಾಯಿ ಇಲ್ಲ, ಇರುವುದು ಅಜ್ಜಿ, ಅಣ್ಣ ಮಾತ್ರ. ಅದೇ ಚಾಮರಾಜನಗರ ಜಿಲ್ಲೆಯ ಮುಕ್ಕಡಹಳ್ಳಿ ಶತಮಾನ ಶಾಲೆಯಲ್ಲೂ ಏಳೆಂಟು ವರ್ಷದ ಹೆಣ್ಣುಮಗಳು ಮಾತು ಬರದೇ ಸಂಜ್ಞಾ ಭಾಷೆಯವಳಾಗಿದ್ದಳು. ಮೇಷ್ಟ್ರು, ಆಕೆ ಎಲ್ಲದರಲ್ಲೂ ಮುಂದಿದ್ದಾಳೆ ಎಂದರು. ಗುಂಡ್ಲುಪೇಟೆಯ ಮಾಡ್ರಳ್ಳಿ ಶತಮಾನ ಶಾಲೆಗೆ ಒಂದು ಗೃಹಾಧಾರಿತ ಮಗು ಸೇರಿದೆ. ಅದಕ್ಕೆ ಮನೆಗೇ ಬಿಸಿಯೂಟ ಕಳಿಸಬೇಕು. ದೇಮಳ್ಳಿಯಲ್ಲೂ ಮೂರನೇ ತರಗತಿಯಲ್ಲಿ ಒಂದೇ ಒಂದು ವಿಶೇಷ ಅಗತ್ಯವುಳ್ಳ ಮಗು ಇದೆ. ಮಿಕ್ಕಂತೆ ಆ ತರಗತಿಗೆ ಮಕ್ಕಳೇ ಇಲ್ಲ.

ಸರ್ಕಾರಿ ಶತಮಾನ ಶಾಲೆಯ ಹೆಣ್ಣುಮಕ್ಕಳ ವಿಚಾರವನ್ನೇ ಇಲ್ಲಿ ಆರಂಭಕ್ಕೆ ಯಾಕೆ ಪ್ರಸ್ತಾಪಿಸಬೇಕೆಂದರೆ, ಜಿಲ್ಲೆಯ ಎಲ್ಲಾ ಶಾಲೆ ಅಥವಾ ಇತರೆ ಸರ್ಕಾರಿ ಸಂಸ್ಥೆಗಳಲ್ಲಿ ಪ್ರಾಥಮಿಕ ಶಿಕ್ಷಣ ಪಡೆಯುತ್ತಿರುವ ಬಹುತೇಕ ಹೆಣ್ಣುಮಕ್ಕಳ ಸ್ಥಿತಿಗತಿ ಸಮಾನ ಥರದ್ದೇ ಆಗಿರುತ್ತದೆ. ಕಾಸುಳ್ಳವರು ಅಲ್ಲಲ್ಲೇ ಇರುವ ಆಕ್ಸ್‌ಫರ್ಡ್, ಇಂಟರ್‌ನ್ಯಾಷನಲ್, ಮಿಲೇನಿಯಂ ಮತ್ತು ಮಠಗಳು, ರಾಜಕಾರಣಿಗಳು ಸ್ಥಾಪಿಸಿದ ಶಾಲೆಗೆ ತಮ್ಮ ಮಕ್ಕಳನ್ನು ಸೇರಿಸುತ್ತಿರುವುದೇನೋ ಸರಿ; ಬಡವರೂ ಸಾಧ್ಯವಾದಷ್ಟು ಮಟ್ಟಿಗೆ ಗಂಡುಮಕ್ಕಳನ್ನು ಖಾಸಗಿ ಶಾಲೆಗೂ, ಹೆಣ್ಣುಮಕ್ಕಳನ್ನು ಸರ್ಕಾರಿ ಶಾಲೆಗೂ ಸೇರಿಸುವುದಿದೆ. ಇಷ್ಟಾಗಿ ಒಬ್ಬ ಶಿಕ್ಷಕಿ, ಈಗ ಹೆಣ್ಣುಮಕ್ಕಳಿಗೆ ಪ್ರಜ್ಞಾಪೂರ್ವಕವಾಗಿಯೋ, ಅಪ್ರಜ್ಞಾಪೂರ್ವಕವಾಗಿಯೋ ಓದಬೇಕೆಂಬ ತಹತಹ ಇದೆಯೆಂದರು. ಹುತ್ತೂರು, ಲೊಕ್ಕನಹಳ್ಳಿ ಶಾಲೆಯ ಕಡತಗಳಲ್ಲಿ 1945ರಲ್ಲಿ ಸೋಲಿಗ ಬುಡಕಟ್ಟು ಮತ್ತು ಊರ ಹೆಣ್ಣುಮಕ್ಕಳು ಶಾಲೆಗೆ ಸೇರಿದ ದಾಖಲೆಯಿದೆ.

ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನ ಮಧುವನಹಳ್ಳಿಯ ಶತಮಾನ ಕಂಡ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ

ಇದರ ಕುರುಹಾಗಿಯೋ ಏನೋ ಎಲ್ಲಾ ಶಾಲೆಗಳಲ್ಲೂ ಸಾವಿತ್ರಿಬಾ ಫುಲೆಯ ಚಿತ್ರಪಟವಿದೆ.

ಸರ್ಕಾರಿ ಶಾಲೆಗಳಲ್ಲೂ ಇತ್ತೀಚೆಗೆ ಹಂತ ಹಂತವಾಗಿ ಕನ್ನಡದೊಂದಿಗೆ ಇಂಗ್ಲಿಷ್ ಮಾಧ್ಯಮವನ್ನು ಚಾಲ್ತಿಗೆ ತರುತ್ತಿರುವುದುಂಟು. ಆದರೆ, ಇಂಗ್ಲಿಷ್ ಪಠ್ಯ ಬೋಧಿಸುವ ಶಿಕ್ಷಕರಿಗೆ ಆ ಭಾಷೆಯ ಪರಿಣತಿ ಎಷ್ಟಿರಬಹುದು ಎಂಬುದೇ ಅನುಮಾನ. ಇಂಗ್ಲಿಷ್ ಮಾಧ್ಯಮವೆಂದು ಹೇಳಿಕೊಳ್ಳುವ ಕಾನ್ವೆಂಟ್ ಶಾಲೆಗಳಲ್ಲೂ ಆ ಭಾಷೆಯ ವ್ಯಾಕರಣ ಬಲ್ಲವರು ಎಷ್ಟು ಶಿಕ್ಷಕರು ಇರುತ್ತಾರೋ? ಅದೂ ಸಂದೇಹವೆ. ಒಟ್ಟಿನಲ್ಲಿ ಸರ್ಕಾರಿ ಶಾಲೆಯ ಅಧ್ಯಾಪಕರೆಲ್ಲ ಹೇಳುವಂತೆ, ಎಲ್ಲಾ ಆಧುನಿಕತೆಯೊಂದಿಗೆ ಮಾಧ್ಯಮ ಸಂಗತಿಯೂ ತಂದೆ ತಾಯಂದಿರ ಹೊಸ ಭ್ರಮೆ! ಇಂಗ್ಲಿಷ್ ಮಾಧ್ಯಮದ ಕೆಲವು ಶಾಲೆಗಳಲ್ಲಿ ಬಡವರಿಂದ ಆರಂಭಕ್ಕೆ ಇದ್ದಷ್ಟು ಡೊನೇಷನ್ ಕಟ್ಟಿಸಿಕೊಂಡು ಉಳಿದದ್ದನ್ನು ಆಮೇಲೆ ಕಟ್ಟಿ ಅಂದು, ತಂದೆತಾಯಂದಿರು ತಮಗಿರುವ ಕಷ್ಟದಿಂದಾಗಿ ಉಳಿದ ಹಣ ಕಟ್ಟದೇ ಹೋದರೆ ಮಗುವಿನ ಟಿ.ಸಿ ತೆಗೆದುಕೊಂಡು ಹೋಗಿ ಎನ್ನುವುದುಂಟು. ಮಗುವಿನ ಓದಿನ ಕ್ರಮ ಸರಿಯಿಲ್ಲದಿದ್ದರೆ ಟಿ.ಸಿ ಕೊಟ್ಟು ಕಳಿಸುವುದು ಇದ್ದೇ ಇರುತ್ತದೆ. ಅಂಥ ಮಕ್ಕಳು ಸರ್ಕಾರಿ ಶಾಲೆಗೆ ಬಂದು ಶಿಕ್ಷಣ ಮುಂದುವರಿಸಿರುವುದುಂಟು. ಉಮ್ಮತ್ತೂರು ಶಾಲೆಯ ಶಿಕ್ಷಕಿ ಸುಪ್ರಿಯ, 'ಸರ್ಕಾರಿ ಶಾಲೆಯಲ್ಲಿ ಶಿಕ್ಷಕಿಯಾಗಿ ನನ್ನ ಮಗನನ್ನು ಕಾನ್ವೆಂಟ್‌ಗೆ ಸೇರಿಸಿಲ್ಲ. ನಾನಿರುವ ಈ ಶಾಲೆಗೇ ಕನ್ನಡ ಮಾಧ್ಯಮಕ್ಕೇ ಸೇರಿಸಿದ್ದೇನೆ' ಎಂದರು.

ಉಮ್ಮತ್ತೂರು ಶಾಲೆಗೆ ಶತಮಾನೋತ್ಸವದ ವಿಶೇಷ ಅನುದಾನ ನೀಡಲಾಗಿದೆ. ಆದರೆ, ಇಲ್ಲಿ ಶತಮಾನದ ಕಟ್ಟಡವೇ ಇಲ್ಲ. ಇದೊಂದೇ ಅಲ್ಲ ಕೊತ್ತಲವಾಡಿ, ದೊಡ್ಡಿಂದುವಾಡಿ, ಕುಣಗಳ್ಳಿ, ಮಧುವನಹಳ್ಳಿ, ಹೊಸಮಾಲಂಗಿ, ಕೊಳ್ಳೇಗಾಲ ಇಲ್ಲೆಲ್ಲ ಬೋರ್ಡಿನಲ್ಲಿ ಶತಮಾನ ಶಾಲೆ ಎಂದಿದ್ದು, ಕಟ್ಟಡಗಳನ್ನು ಕೆಡವಲಾಗಿದೆ. ಹಳೆಯದಾಗಿತ್ತು, ಬೀಳುವ ಸ್ಥಿತಿಯಲ್ಲಿತ್ತು, ಮಕ್ಕಳನ್ನು ಕೂರಿಸಲು ಭಯವಾಗುತ್ತಿತ್ತು ಎಂಬುದು ಇದಕ್ಕೆ ಕಾರಣ. ಇದರೊಂದಿಗೆ ಹರವೆ, ಹರದನಹಳ್ಳಿ, ಹುತ್ತೂರು, ಗುಂಡೇಗಾಲ, ಹುಂಡೀಪುರ, ಆಲಳ್ಳಿ ಈ ಗ್ರಾಮಗಳಲ್ಲಿ ಶತಮಾನದ ಕಟ್ಟಡಗಳು ಉಪಯೋಗಿಸಲಾಗದೆ ಕಸ ತುಂಬಿಕೊಂಡಿವೆ. ಹರವೆ ಶಾಲೆಯ ಚಾವಣಿಯಲ್ಲಿ ಆಲ, ಬೇವಿನ ಗಿಡ ಬೆಳೆದು ಅದರ ಬೇರು ಗೋಡೆಗಳಲ್ಲಿ ಇಳಿದಿದೆ. ಇಂಥ ಸ್ಥಳಗಳಲ್ಲಿ ರಾತ್ರಿ ಅನೈತಿಕ ಚಟುವಟಿಕೆ ನಡೆದು ಪೊಲೀಸ್ ಕಂಪ್ಲೇಂಟ್ ಕೊಟ್ಟಿರುವುದೂ ಇದೆ. ಕತ್ತಲಾದಲ್ಲಿ ಬಿಸಿಯೂಟದ ಅಡುಗೆ ಮನೆಗೆ ನುಗ್ಗಿ ಮೊಟ್ಟೆ ಬೇಯಿಸಿ, ಪಾನಗೋಷ್ಠಿ ನಡೆಸುವುದಿದೆ. ಮಧುವನಹಳ್ಳಿ ಶಾಲೆಯಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾ ಕಿತ್ತು ಹಾಕಲಾಗಿದೆ. ಆದರೆ, ಹಳ್ಳಿಗಳಲ್ಲಿ ಗುಡಿ ಗೋಪುರದ ದೇವರುಗಳು ನಾನಾ ಬಣ್ಣಗಳೊಡನೆ ಎದ್ದು ಕಾಣುತ್ತಾ, ಒಂದೆರಡು ಕಡೆ ದೇವಸ್ಥಾನಗಳಿಂದಲೇ ಶಾಲಾ ಮೈದಾನದ ಒತ್ತುವರಿ ಆಗಿದೆ. ಇದು ಪ್ರತ್ಯೇಕ ಪುಟಗಳ ವಿವರವಾಗುತ್ತದೆ.

ಚಂದಕವಾಡಿ, ಹಂಗಳ, ಕಬ್ಬಳ್ಳಿ, ದೊಡ್ಡಿಂದುವಾಡಿ, ಮುಡಿಗುಂಡ, ಮಧುವನಹಳ್ಳಿ, ರಾಮಾಪುರ, ಕುಣಗಳ್ಳಿ, ಗುಂಡ್ಲುಪೇಟೆ ಈ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯೂ ಹೆಚ್ಚಿದ್ದು, ಕೆಲವೆಡೆ ಇಂಗ್ಲಿಷ್- ಕನ್ನಡ ಮಾಧ್ಯಮ ಎರಡೂ ಇದ್ದು ಈ ಶಾಲೆಗಳು ಚೆನ್ನಾಗಿಯೇ ನಡೆಯುತ್ತಿವೆ. ಹಂಗಳ ಶಾಲೆಯ ಮುಖ್ಯ ಶಿಕ್ಷಕಿ, '2012ರಲ್ಲಿ ಇದೇ ಗ್ರಾಮದಲ್ಲಿ ಒಂದು ಖಾಸಗಿ ಶಾಲೆಯಿತ್ತು. ಆಗ ನಮ್ಮ ಸರ್ಕಾರಿ ಶಾಲೆಯಲ್ಲಿದ್ದ ಮುಖ್ಯೋಪಾಧ್ಯಾಯ ರವಿಕುಮಾರ್ ಅವರ ಶಿಸ್ತು, ಶ್ರಮ, ಮತ್ತಿತರ ಸಹಶಿಕ್ಷಕರ ಸಹಕಾರದಿಂದ ಶಾಲೆಗೆ ಹೆಚ್ಚು ಮಕ್ಕಳು ಸೇರ್ಪಡೆಯಾಗಿ, ಪಾಠ ಚೆನ್ನಾಗಿ ನಡೆದು ಆ ಖಾಸಗಿ ಶಾಲೆ ಮುಚ್ಚಿಹೋಯಿತು. ಈಗಲೂ ಅದೇ ಶಿಸ್ತಿನಲ್ಲಿ ಶಾಲೆ ಹೆಚ್ಚು ಸಂಖ್ಯೆಯ ಮಕ್ಕಳೊಡನೆ ನಡೆಯುತ್ತಿದೆ' ಎಂದರು.

'ಮಕ್ಕಳು ಪ್ರಾಥಮಿಕ ಹಂತದಲ್ಲಿಯೇ ಇಂಗ್ಲಿಷ್ ಕಲಿತಾಕ್ಷಣ ಬುದ್ಧಿವಂತರಾಗಿಬಿಡುವುದಿಲ್ಲ, ಅದಕ್ಕೆ ಸಾಕಷ್ಟು ಕಾಲ ಬೇಕು, ಅದನ್ನು ನಾವು ಮಕ್ಕಳ ಕಲಿಕಾ ಕ್ರಮವನ್ನು ಕಂಡೇ ಗ್ರಹಿಸಿದ್ದೇವೆ' ಎನ್ನುತ್ತಾರೆ ಶಿಕ್ಷಕರು. 'ಇಂಗ್ಲಿಷ್ ಮಾಧ್ಯಮದಲ್ಲಿ ಓದಿದ್ದೇವೆ ಅಂದಾಕ್ಷಣ ಎಷ್ಟು ಜನಕ್ಕೆ ಉದ್ಯೋಗ ಸಿಗುವ ಸಾಧ್ಯತೆ ಇದೆ? ಯಾವ ಮಾಧ್ಯಮದಲ್ಲಿ ಓದಿದರೂ ಉದ್ಯೋಗಾವಕಾಶ ಅವರವರ ಬುದ್ಧಿವಂತಿಕೆ, ಆಲೋಚನಾಶಕ್ತಿ, ಗ್ರಹಿಕೆ, ಕೌಶಲಕ್ಕೆ ಸಂಬಂಧಿಸಿದ್ದು' ಎಂಬುದು ಅವರ ವಿವರಣೆ.

ಚಂದಕವಾಡಿ ಶಾಲೆಯಲ್ಲಿ ಅಧ್ಯಾಪಕರ ಕೊರತೆ ಇದ್ದರೂ ಇರುವ ಶಿಕ್ಷಕರು ಸಂಜೆಯ ಹೊತ್ತು ತಂದೆ ತಾಯಂದಿರಿಗೆ ದೂರವಾಣಿ ಮಾಡಿ ಮನೆಯಲ್ಲಿ ಮಕ್ಕಳ ಓದನ್ನು ವಿಚಾರಿಸುವ ಪರಿಪಾಟ ಇಟ್ಟುಕೊಂಡಿದ್ದಾರೆ. ಒಬ್ಬೊಬ್ಬ ಶಿಕ್ಷಕರಿಗೆ ಆಯಾ ದಿನ ಇಷ್ಟು ಮಕ್ಕಳ ವಿಚಾರಣೆ ಎಂದು ಹಂಚಿಕೊಂಡಿರುವುದುಂಟು. ಗುಂಡ್ಲುಪೇಟೆ ಶಾಲೆಯಲ್ಲಿ ವಿದ್ಯಾರ್ಥಿಯೊಬ್ಬ ಬಂದು, 'ಈಗ ನಮ್ಮ ತರಗತಿಗೆ ಯಾರೂ ಮೇಷ್ಟ್ರು ಬಂದಿಲ್ಲ ಸಾರ್' ಎಂದ. 'ಹೀಗೆ ಏನಿದ್ದರೂ ಬಂದು ವಿವರ ತಿಳಿಸಬೇಕೆಂದು ಮಕ್ಕಳಿಗೆ ಹೇಳಿಕೊಟ್ಟಿದ್ದೇವೆ' ಎಂದರು ಶಿಕ್ಷಕರು. ಅಲ್ಲಿಯ ದೈಹಿಕ ಶಿಕ್ಷಣ ಶಿಕ್ಷಕ ಸಿದ್ಧಶೆಟ್ಟರು ಬೆಳಿಗ್ಗೆ ಎಂಟು ಗಂಟೆಗೆ ಶಾಲೆಗೆ ಬಂದರೆ ಅವರು ಮನೆಗೆ ವಾಪಸ್ಸಾಗುವುದು ಸಂಜೆ ಆರು ಗಂಟೆಗೆ. ಮಿಕ್ಕಂತೆ ಶಾಲೆಯಲ್ಲಿ ಅವರ ಕಾಯಕಸೇವೆ ಇಡೀ ದಿನ ಇರುತ್ತದೆ. ಅವರು ಬಂದ ಮೇಲೆ ಶಾಲಾ ಕಾಂಪೌಂಡ್‌ನಲ್ಲಿ ಬಾಟಲಿಗಳು ಬೀಳುವುದು ಕಡಿಮೆಯಾಗಿದೆಯಂತೆ. ಆದರೆ, ಕಡಿಮೆ ಸಂಖ್ಯೆಯ ಮಕ್ಕಳಿರುವಲ್ಲಿ ದೈಹಿಕ ಶಿಕ್ಷಣ ಶಿಕ್ಷಕರಿರುವುದಿಲ್ಲ. ಬಹುತೇಕ ಶಾಲೆಗಳಲ್ಲಿ ಸ್ನಾತಕೋತ್ತರ ಪದವೀಧರರಿದ್ದಾರೆ. ಮಕ್ಕಳ ಸಂಖ್ಯೆ ಹೆಚ್ಚಿರುವ ಶಾಲೆಗಳಲ್ಲಿ ಅಧ್ಯಾಪಕರ ಶಿಸ್ತು, ಶ್ರಮ ಮತ್ತು ಊರವರ, 'ನನ್ನ ಶಾಲೆ-ನನ್ನ ಕೊಡುಗೆ'ಯ ಸಹಕಾರ ಇರುವುದು ಎದ್ದು ಕಾಣುತ್ತದೆ. ಇಂಥ ಕಡೆ ಶಾಲಾ ವಾರ್ಷಿಕೋತ್ಸವ, ಸ್ವಾತಂತ್ರ್ಯೋತ್ಸವ ಕಾರ್ಯಕ್ರಮಗಳಿಗಾಗಿ ಊರವರೆಲ್ಲ ಸೇರಿ ಲಕ್ಷಾಂತರ ಹಣ ಖರ್ಚು ಮಾಡುವುದಿದೆ.

ದೊಡ್ಡಿಂದುವಾಡಿ ಶಾಲೆಯಲ್ಲಿ ಶಾಲಾ ಆರಂಭದ ದಿನ ಅಲಂಕರಿಸಿದ ವ್ಯಾನಿನಲ್ಲಿ ಮಕ್ಕಳನ್ನು ಅವರ ತಂದೆತಾಯಿಗಳೊಡನೆ ಸಂಭ್ರಮದಿಂದ ಕರೆತರುವುದಿದೆ. ಲೊಕ್ಕನಹಳ್ಳಿ ಶಾಲೆಯಲ್ಲಿ ತಂದೆ-ತಾಯಿಗಳೊಡನೆ ಮಕ್ಕಳನ್ನು ಕೂರಿಸಿ ಹೂವಿಟ್ಟ ಅಕ್ಕಿ ತಟ್ಟೆಯಲ್ಲಿ ಅಕ್ಷರ ತಿದ್ದಿಸುವುದುಂಟು. ಕೆಲವು ಕಡೆ ಶಾಲೆಗೆ ಮಕ್ಕಳನ್ನು ಸೇರಿಸಲು ಬರುವ ತಂದೆ ತಾಯಿ, ಮಕ್ಕಳ ನಾಮಧೇಯವೇ ಆದಿಯಾಗಿ ಅವರ ವಾಸ್ತವ್ಯ, ಉದ್ಯೋಗ ಮಾಹಿತಿಯನ್ನೆಲ್ಲ ಅಧ್ಯಾಪಕರೇ ತುಂಬಬೇಕು. ಚಂದಕವಾಡಿಯ ಮುಖೋಪಾಧ್ಯಾಯರು ಆ ಕಾಯಕವನ್ನು ಸಂತೋಷದಿಂದಲೇ ಮಾಡುತ್ತಿದ್ದರು. 2024ರ ಸಾಲಿನಲ್ಲಿ ಚಾಮರಾಜನಗರದ ಶತಮಾನ ಕಂಡ ನಾಲ್ಕು ಶಾಲೆಗಳಿಗೆ ಹೆಚ್ಚುವರ

ಅಡುಗೆ ಎಣ್ಣೆಯಿಂದ ವಿಮಾನ ಇಂಧನ: ಇಂಡಿಯನ್ ಆಯಿಲ್

ನವದೆಹಲಿ (ಪಿಟಿಐ): ಬಳಸಿದ ಅಡುಗೆ ಎಣ್ಣೆಯನ್ನು ವಿಮಾನದ ಇಂಧನವನ್ನಾಗಿ ಪರಿವರ್ತಿಸುವ ಕಾರ್ಯವನ್ನು ವರ್ಷಾಂತ್ಯದ ವೇಳೆಗೆ ಇಂಡಿಯನ್ ಆಯಿಲ್ ಕಂಪನಿ ಆರಂಭಿಸಲಿದೆ.

ಬಳಸಿದ ಅಡುಗೆ ಎಣ್ಣೆಯಿಂದ ಸುಸ್ಥಿರ ವಿಮಾನ ಇಂಧನ (ಎಸ್‌ಎಎಫ್) ಉತ್ಪಾದಿಸುವ ಪ್ರಮಾಣ ಪತ್ರವನ್ನು ಇಂಡಿಯನ್ ಆಯಿಲ್‌ನ ಹರಿಯಾಣದ ಪಾಣಿಪತ್ ಸಂಸ್ಕರಣಾ ಘಟಕವು ಪಡೆದಿದೆ. ಈ ರೀತಿ ಅಂತರ-ರಾಷ್ಟ್ರೀಯ ಪ್ರಮಾಣಪತ್ರ ಪಡೆದ ದೇಶದ ಮೊದಲ ಕಂಪನಿ ಇಂಡಿಯನ್ ಆಯಿಲ್ ಎಂದು ಕಂಪನಿಯ ಅಧ್ಯಕ್ಷ ಅರವಿಂದರ್ ಸಿಂಗ್ ಸಾಹ್ನಿ ಹೇಳಿದ್ದಾರೆ.

ಎಸ್‌ಎಎಫ್ ಪರ್ಯಾಯ ಇಂಧನ ವಾಗಿದೆ. ಇದು ವಿಮಾನಗಳ ಮಾಲಿನ್ಯ ಹೊರಸೂಸುವಿಕೆಯನ್ನು ಕಡಿಮೆ ಮಾಡುತ್ತದೆ. ಇದನ್ನು ಸಾಂಪ್ರದಾಯಿಕ ವಿಮಾನ ಇಂಧನದ ಜೊತೆ ಶೇ 50ರಷ್ಟು ಮಿಶ್ರಣ ಮಾಡಬಹುದಾಗಿದೆ. 2027ರ

ವೇಳೆಗೆ ಭಾರತವು ಅಂತರರಾಷ್ಟ್ರೀಯ ವಿಮಾನಗಳಿಗೆ ಒದಗಿಸುವ ಇಂಧನದಲ್ಲಿ ಶೇ 1ರಷ್ಟು ಎಸ್‌ಎಎಫ್ ಮಿಶ್ರಣ ಮಾಡುವುದನ್ನು ಕಡ್ಡಾಯ ಮಾಡಿದೆ. ಈ ವರ್ಷದ ಅಂತ್ಯದಿಂದ ಘಟಕವು ವಾರ್ಷಿಕ 35 ಸಾವಿರ ಟನ್ ಎಸ್‌ಎಎಫ್ ಉತ್ಪಾದನೆ ಆರಂಭಿಸಲಿದೆ. ಇದು ಶೇ 1ರಷ್ಟು ಮಿಶ್ರಣವನ್ನು ಪೂರೈಸಲು ಸಾಕಾಗುತ್ತದೆ ಎಂದು ಹೇಳಿದ್ದಾರೆ.

ಎಣ್ಣೆ ಸಂಗ್ರಹ ಹೇಗೆ: ದೊಡ್ಡ ಹೋಟೆಲ್‌ಗಳು, ರೆಸ್ಟೋರೆಂಟ್‌ಗಳು, ಕುರುಕಲು ಮತ್ತು ಸಿಹಿ ತಿಂಡಿ ತಯಾರಿಸುವ ಹಲ್ದಿರಾಮ್ಸ್ ಸೇರಿದಂತೆ ಅತಿಹೆಚ್ಚು ಎಣ್ಣೆ ಬಳಸುವ ಬಳಕೆದಾರರಿಂದ ಐಜೆನ್ಸಿಗಳು ಬಳಸಿದ ಎಣ್ಣೆಯನ್ನು ಸಂಗ್ರಹಿಸುತ್ತವೆ. ಇದನ್ನು ಪಾಣಿಪತ್‌ನಲ್ಲಿನ ಸಂಸ್ಕರಣಾ ಘಟಕಕ್ಕೆ ಪೂರೈಕೆ ಮಾಡಲಾಗುತ್ತದೆ. ಘಟಕವು ಎಣ್ಣೆಯನ್ನು ಬಳಸಿ ಸುಸ್ಥಿರ ವಿಮಾನ ಇಂಧನ ತಯಾರಿಸಲಿದೆ ಎಂದು ಹೇಳಿದ್ದಾರೆ.

ದೊಡ್ಡ ಹೋಟೆಲ್‌ಗಳು ಮತ್ತು ರೆಸ್ಟೋರೆಂಟ್‌ಗಳು ಸಹಜವಾಗಿ ಒಮ್ಮೆ ಬಳಸಿದ ಎಣ್ಣೆಯನ್ನು ಮತ್ತೆ ಬಳಸುವುದಿಲ್ಲ. ಪ್ರಸ್ತುತ ಈ ಎಣ್ಣೆಯನ್ನು ಐಜೆನ್ಸಿಗಳು ಸಂಗ್ರಹಿಸಿ, ರಫ್ತು ಮಾಡುತ್ತಿವೆ.

ಬಳಸಿದ ಅಡುಗೆ ಎಣ್ಣೆಯು ದೇಶದಲ್ಲಿ ದೊಡ್ಡ ಪ್ರಮಾಣದಲ್ಲಿ ಲಭ್ಯವಿದೆ. ಆದರೆ, ಸಂಗ್ರಹ ಮಾಡುವುದೇ ಸವಾಲಾಗಿದೆ. ದೊಡ್ಡ ಹೋಟೆಲ್‌ಗಳಿಂದ ಸಂಗ್ರಹಿಸುವುದು ಸುಲಭ. ಆದರೆ ಮನೆಗಳು ಸೇರಿದಂತೆ ಸಣ್ಣ ಪ್ರಮಾಣದ ಬಳಕೆದಾರರಿಂದ ಸಂಗ್ರಹಿಸಲು ಸೂಕ್ತ ಮಾರ್ಗ ಅಗತ್ಯ ಎಂದು ಹೇಳಿದ್ದಾರೆ.

ಭಾರತದಲ್ಲಿ ಲ್ಯಾಪ್‌ಟಾಪ್ ತಯಾರಿಕೆ ಆರಂಭಿಸಿದ ಸ್ಯಾಮ್ಸಂಗ್

ನವದೆಹಲಿ (ಪಿಟಿಐ): ಎಲೆಕ್ಟ್ರಾನಿಕ್ಸ್ ಉಪಕರಣಗಳನ್ನು ತಯಾರಿಸುವ ಕೊರಿಯಾದ ಕಂಪನಿ ಸ್ಯಾಮ್ಸಂಗ್, ಗ್ರೇಟರ್ ನೊಯಿಡಾದಲ್ಲಿನ ತನ್ನ ಘಟಕದಲ್ಲಿ ಲ್ಯಾಪ್‌ಟಾಪ್ ತಯಾರಿಕೆಯನ್ನು ಆರಂಭಿಸಿದೆ ಎಂದು ಮೂಲಗಳು ತಿಳಿಸಿವೆ.

ಈ ಘಟಕದಲ್ಲಿ ಕಂಪನಿಯು ಫೀಚರ್ ಫೋನ್‌ಗಳು, ಸ್ಮಾರ್ಟ್‌ಫೋನ್‌ಗಳು, ಧರಿಸಬಹುದಾದ ಎಲೆಕ್ಟ್ರಾನಿಕ್ಸ್ ಉಪಕರಣಗಳು ಮತ್ತು ಟ್ಯಾಬ್ಲೆಟ್‌ಗಳನ್ನು ತಯಾರಿಸುತ್ತದೆ.

ಈ ಕುರಿತು ಕಂಪನಿಗೆ ಕಳಿಸಿದ ಇ-ಮೇಲ್‌ಗೆ ಪ್ರತಿಕ್ರಿಯೆ ಬಂದಿಲ್ಲ. ಭಾರತದಲ್ಲಿ ಸ್ಯಾಮ್ಸಂಗ್ ಕಂಪನಿಯು ತನ್ನ ತಯಾರಿಕಾ ಘಟಕವನ್ನು 1996ರಲ್ಲಿ ಸ್ಥಾಪನೆ ಮಾಡಿದೆ.

ಅಮೆರಿಕ ತಂಡದ ಭೇಟಿ ಮುಂದಕ್ಕೆ?



ನವದೆಹಲಿ (ಪಿಟಿಐ): ಭಾರತ ಮತ್ತು ಅಮೆರಿಕ ನಡುವಿನ ದ್ವಿಪಕ್ಷೀಯ ವ್ಯಾಪಾರ ಒಪ್ಪಂದದ ಬಗ್ಗೆ ಮಾತುಕತೆ ನಡೆಸಲು ಭಾರತಕ್ಕೆ ಆಗಸ್ಟ್ 25ರಂದು ಭೇಟಿ ನೀಡಬೇಕಿದ್ದ ಅಮೆರಿಕದ ತಂಡವು ಭೇಟಿಯನ್ನು ಮುಂದೂಡುವ ಸಾಧ್ಯತೆ ಇದೆ.

ಪ್ರಸ್ತಾವಿತ ದ್ವಿಪಕ್ಷೀಯ ವ್ಯಾಪಾರ ಒಪ್ಪಂದಕ್ಕೆ ಸಂಬಂಧಿಸಿದಂತೆ ಇದುವರೆಗೆ ಐದು ಸುತ್ತುಗಳ ಮಾತುಕತೆ ನಡೆದಿದೆ. ಆರನೆಯ ಸುತ್ತಿನ ಮಾತುಕತೆಗೆ ಅಮೆರಿಕದ ತಂಡವು ಭೇಟಿ ನೀಡಬೇಕಿದೆ. ಈ ಮೊದಲಿನ ವೇಳಾಪಟ್ಟಿ ಪ್ರಕಾರ ಮಾತುಕತೆಯು ಆಗಸ್ಟ್ 25ರಿಂದ 29ರವರೆಗೆ ನಡೆಯಬೇಕಿತ್ತು.

'ಈ ಭೇಟಿಯು ದಿನಾಂಕವು ಮರುನಿಗದಿ ಆಗುವ ಸಾಧ್ಯತೆ ಇದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಭಾರತದಿಂದ ಆಮದಾಗುವ ಸರಕುಗಳ ಮೇಲೆ ಅಮೆರಿಕವು ಶೇಕಡ 50ರಷ್ಟು ಸುಂಕ ವಿಧಿಸಿರುವ ಹಿನ್ನೆಲೆಯಲ್ಲಿ, ಸಭೆಯು ಮುಂದಕ್ಕೆ ಹೋಗಿರುವುದು ಮಹತ್ವ ಪಡೆದಿದೆ.

ಭಾರತದ ಕೃಷಿ ಉತ್ಪನ್ನಗಳ ಮಾರುಕಟ್ಟೆ ಹಾಗೂ ಹೈನು ಉತ್ಪನ್ನಗಳ ಮಾರುಕಟ್ಟೆಯನ್ನು ತನಗೆ ಮುಕ್ತವಾಗಿಸಬೇಕು ಎಂದು ಅಮೆರಿಕವು ಒತ್ತಾಯಿಸುತ್ತಿದೆ. ಆದರೆ ಇದಕ್ಕೆ ಕೇಂದ್ರ ಸರ್ಕಾರ ಒಪ್ಪಿಗೆ ನೀಡುತ್ತಿಲ್ಲ.

ದ್ವಿಪಕ್ಷೀಯ ವ್ಯಾಪಾರ ಒಪ್ಪಂದದ ಮೊದಲ ಹಂತವನ್ನು ಸೆಪ್ಟೆಂಬರ್-ಅಕ್ಟೋಬರ್ ವೇಳೆಗೆ ಅಂತಿಮಗೊಳಿಸುವ ಘೋಷಣೆಯನ್ನು ಎರಡೂ ದೇಶಗಳು ಮಾಡಿವೆ.

ಮಕ್ಕಳ ಶಿಕ್ಷಣಕ್ಕಾಗಿ ಹೂಡಿಕೆ ಹೇಗೆ?

ಹಣಕಾಸು ಸಾಕ್ಷರತೆ

ರಾಜೇಶ್ ಕುಮಾರ್ ಟಿ.ಆರ್
ಚಾರ್ಟರ್ಡ್ ಅಕೌಂಟೆಂಟ್

ಶಿಕ್ಷಣ ಕ್ಷೇತ್ರದಲ್ಲಿ ಬೆಲೆ ಏರಿಕೆ ಬೇರೆಲ್ಲ ಕ್ಷೇತ್ರಗಳಿಗಿಂತಲೂ ಹೆಚ್ಚಿದೆ. ಹಣದುಬ್ಬರ ಪ್ರಮಾಣವು ವಾರ್ಷಿಕ ಶೇ 4ರಿಂದ ಶೇ 8ರ ಆಸುಪಾಸಿನಲ್ಲಿದ್ದರೆ, ಶಿಕ್ಷಣ ಕ್ಷೇತ್ರದ ಹಣದುಬ್ಬರ ಮಾತ್ರ ಶೇ 10ರಿಂದ ಶೇ 12ರ ಆಸುಪಾಸಿಗೆ ತಲುಪಿದೆ. 2012ರಿಂದ 2020ರ ವರೆಗಿನ ಅಂಕಿ-ಅಂಶ ನೋಡಿದಾಗ ಆಹಾರ ಹಣದುಬ್ಬರ ಪ್ರಮಾಣ ವಾರ್ಷಿಕ ಶೇ 9.62ರಷ್ಟಿದ್ದರೆ, ಆರೋಗ್ಯ ಕ್ಷೇತ್ರದ ಹಣದುಬ್ಬರ ಶೇ 8ರಷ್ಟು ಮತ್ತು ಶಿಕ್ಷಣ ಕ್ಷೇತ್ರದ ಹಣದುಬ್ಬರ ಶೇ 10ರಷ್ಟು ಇರುವುದು ಗೊತ್ತಾಗುತ್ತದೆ. 2021ರಲ್ಲಿ ಐಐಟಿ (ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ) ಪದವಿ ಶಿಕ್ಷಣದ ಶುಲ್ಕ ಸಹ ದುಪ್ಪಟ್ಟಾಗಿದ್ದು, ₹90 ಸಾವಿರ ಇದ್ದಿದ್ದು ಸುಮಾರು ₹2 ಲಕ್ಷಕ್ಕೆ ಏರಿಕೆಯಾಗಿದೆ.

ಸರ್ಕಾರದ ದತ್ತಾಂಶದ ಪ್ರಕಾರ 20ರಿಂದ 24 ವರ್ಷ ವಯಸ್ಸಿನ ವಿದ್ಯಾರ್ಥಿಗಳ ಪೈಕಿ ಕೇವಲ 10 ಮಂದಿ ಪೈಕಿ 4 ಮಂದಿ ಹಣದ ಕೊರತೆಯ ಕಾರಣಕ್ಕೆ ಶಿಕ್ಷಣ ಮೊಟಕುಗೊಳಿಸುತ್ತಿದ್ದಾರೆ. ಪ್ರತಿ ಪೋಷಕರಿಗೂ ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಬೇಕು ಎಂಬ ಹಂಬಲವಿದ್ದರೂ ಕೆಲವರು ಮಾತ್ರ ಅದಕ್ಕೆ ಸರಿಯಾದ ಹಣಕಾಸಿನ ಯೋಜನೆ ರೂಪಿಸುತ್ತಿದ್ದಾರೆ.

ಉತ್ತಮ ಹೂಡಿಕೆಗಳು

- **ಸುಕನ್ಯಾ ಸಮೃದ್ಧಿ ಯೋಜನೆ (ಎಸ್‌ಎಸ್‌ವೈ):** ಇದು ಕೇಂದ್ರ ಸರ್ಕಾರದ ಮಹಾತ್ವಾಕಾಂಕ್ಷೆಯ ಸಣ್ಣ ಉಳಿತಾಯ ಯೋಜನೆ. ಹೆಣ್ಣು ಮಗುವಿನ ಭವಿಷ್ಯಕ್ಕೆ ಹಣಕಾಸಿನ ಭದ್ರತೆ ಒದಗಿಸುವುದು ಇದರ ಪ್ರಮುಖ ಉದ್ದೇಶ. 2015ರಲ್ಲಿ ಕೇಂದ್ರ ಸರ್ಕಾರ ಜಾರಿಗೆ ತಂದ ಈ ಯೋಜನೆಯ ಅಡಿಯಲ್ಲಿ ಈವರೆಗೆ 4.1 ಕೋಟಿಗೂ ಹೆಚ್ಚಿನ ಖಾತೆಗಳನ್ನು 10 ವರ್ಷಕ್ಕಿಂತ ಕಡಿಮೆ ವಯಸ್ಸಿನ ಹೆಣ್ಣುಮಕ್ಕಳ ಹೆಸರಿನಲ್ಲಿ ತೆರೆಯಲಾಗಿದೆ. ಈ ಯೋಜನೆಯ ಬಡ್ಡಿ ದರ ಶೇ 8.2ರಷ್ಟಿದ್ದು ಪ್ರತಿ ವರ್ಷ ಕನಿಷ್ಠ ₹250 ಮತ್ತು ಗರಿಷ್ಠ ₹1.5 ಲಕ್ಷ ಹೂಡಿಕೆ ಮಾಡಬಹುದು. 15 ವರ್ಷಗಳ ಕಾಲ ಈ ಯೋಜನೆಯಲ್ಲಿ ಹೂಡಿಕೆ ಮಾಡುವ ಅವಕಾಶವಿದ್ದು, ಹೂಡಿಕೆ ಆರಂಭಿಸಿ 21 ವರ್ಷ ತುಂಬಿದಾಗ ಯೋಜನೆ ಮೆಚ್ಯೂರಿಟಿಗೆ ಬರುತ್ತದೆ. ಉದಾಹರಣೆಗೆ, ನಿಮ್ಮ ಮಗಳಿಗೆ 2 ವರ್ಷವಿದ್ದಾಗ ಯೋಜನೆ ಆರಂಭಿಸಿದ್ದರೆ ಆಕೆಗೆ 22 ವರ್ಷ ತುಂಬುವ ಹೊತ್ತಿಗೆ ಹಣ ಸಿಗುತ್ತದೆ. ಯಾವುದೇ ಅಂಚೆ ಕಚೇರಿಯಲ್ಲಿ ಅಥವಾ ಸೂಚಿತ ಬ್ಯಾಂಕ್ ಶಾಖೆಗಳಲ್ಲಿ ಸುಕನ್ಯಾ ಸಮೃದ್ಧಿ ಖಾತೆ ತೆರೆಯಬಹುದು. ಈ ಯೋಜನೆಯಲ್ಲಿನ ₹1.5 ಲಕ್ಷದವರೆಗಿನ ಹೂಡಿಕೆಗೆ ಆದಾಯ ತೆರಿಗೆಯ ಸೆಕ್ಷನ್ 80 ಸಿ ಅಡಿಯಲ್ಲಿ ತೆರಿಗೆ ವಿನಾಯಿತಿ ಸಿಗುತ್ತದೆ. ಹೂಡಿಕೆ ಮೇಲಿನ ಬಡ್ಡಿ ಮತ್ತು ಮೆಚ್ಯೂರಿಟಿ ಮೊತ್ತಕ್ಕೆ ತೆರಿಗೆ ಇಲ್ಲ.

ಉದಾಹರಣೆಗೆ, ಪ್ರಸ್ತುತ ಬಡ್ಡಿ ದರದ ಪ್ರಕಾರ ಸುಕನ್ಯಾ ಸಮೃದ್ಧಿ ಯೋಜನೆಯಲ್ಲಿ ಮುಂದಿನ 15 ವರ್ಷದವರೆಗೆ ಪ್ರತಿ ತಿಂಗಳು ₹6 ಸಾವಿರ ತೊಡಗಿಸಿದರೆ ಒಟ್ಟು ₹10.8 ಲಕ್ಷ ಹೂಡಿಕೆಯಾಗಿರುತ್ತದೆ. 15 ವರ್ಷಗಳ ಬಳಿಕ ಬಡ್ಡಿ ಸೇರಿ ಒಟ್ಟು ₹34.47 ಲಕ್ಷ ಲಭಿಸುತ್ತದೆ. ಈ ಹೂಡಿಕೆಯಲ್ಲಿ ಚಕ್ರಬಡ್ಡಿಯ ಲಾಭ ದೊರೆಯುತ್ತದೆ.

- **ಸಾರ್ವಜನಿಕ ಭವಿಷ್ಯ ನಿಧಿ (ಪಿಪಿಎಫ್):** ಹೆಣ್ಣು ಮಗುವಿಗಾಗಿ ಹೂಡಿಕೆ ಮಾಡುತ್ತಿದ್ದರೆ ಸುಕನ್ಯಾ ಸಮೃದ್ಧಿ ಅತ್ಯುತ್ತಮ. ಆದರೆ ಗಂಡು ಮಗುವಿನ ಶಿಕ್ಷಣಕ್ಕಾಗಿ ಹೂಡಿಕೆ ಮಾಡುವುದಿದ್ದರೆ ಪಿಪಿಎಫ್ ಉತ್ತಮ ಆಯ್ಕೆ. ಪಿಪಿಎಫ್ ಅನ್ನು ನಿವೃತ್ತಿ ಉದ್ದೇಶಕ್ಕೇ ಬಳಸಬೇಕು ಅಂತೇನಿಲ್ಲ, ಮಕ್ಕಳ ಶಿಕ್ಷಣದ ಉದ್ದೇಶಕ್ಕೂ ಇದು ಅನುಕೂಲಕರ. ಮಗುವಿನ ಹೆಸರಿನಲ್ಲಿ ಪಿಪಿಎಫ್ ಖಾತೆ ಆರಂಭಿಸಲು ಸಾಧ್ಯವಿದೆ.

ಪಿಪಿಎಫ್ ಹೂಡಿಕೆ ಮೊತ್ತಕ್ಕೆ ಕೇಂದ್ರ ಸರ್ಕಾರದ ಖಾತರಿ ಇದೆ. ಬಡ್ಡಿ ಗಳಿಕೆ ಕಡಿಮೆ ಇದ್ದರೂ ಪರವಾಗಿಲ್ಲ, ಹಣಕ್ಕೆ ಖಾತರಿ ಇರಬೇಕು, ತೆರಿಗೆ ಭಾರ ಇರಬಾರದು ಎನ್ನುವವರಿಗೆ ಪಿಪಿಎಫ್ ಉತ್ತಮ ಆಯ್ಕೆ. ಪಿಪಿಎಫ್‌ನಲ್ಲಿ ವಾರ್ಷಿಕ ಕನಿಷ್ಠ ₹500 ಮತ್ತು ಗರಿಷ್ಠ ₹1.5 ಲಕ್ಷದವರೆಗೆ ಹೂಡಿಕೆ ಮಾಡಬಹುದು.

ಅಂಚೆ ಕಚೇರಿ ಮತ್ತು ಆಯ್ದ ಬ್ಯಾಂಕ್ ಶಾಖೆಗಳಲ್ಲಿ ಈ ಯೋಜನೆ ಲಭ್ಯ. ಈ ಯೋಜನೆಯಲ್ಲಿನ ₹1.5 ಲಕ್ಷದವರೆಗಿನ ಹೂಡಿಕೆಗೆ ಆದಾಯ ತೆರಿಗೆಯ ಸೆಕ್ಷನ್ 80ಸಿ ಅಡಿಯಲ್ಲಿ ತೆರಿಗೆ ವಿನಾಯಿತಿ ಸಿಗುತ್ತದೆ. ಹೂಡಿಕೆ ಮೇಲಿನ ಬಡ್ಡಿ ಗಳಿಕೆಗೆ ತೆರಿಗೆ ಅನ್ವಯಿಸುವುದಿಲ್ಲ. ಪಿಪಿಎಫ್‌ನಲ್ಲಿ ಹೂಡಿಕೆ ಮಾಡಿದ ಮೊತ್ತವನ್ನು ಐದು ವರ್ಷಗಳ ನಂತರ ಭಾಗಶಃ ಹಿಂಪಡೆಯಬಹುದು. ಆದರೆ ಪೂರ್ತಿ ಹಣ ವಾಪಸ್ ಪಡೆಯಬೇಕಾದರೆ 15 ವರ್ಷ ಕಾಯಬೇಕು. ಪಿಪಿಎಫ್ ಬಡ್ಡಿ ದರ ವಾರ್ಷಿಕ ಶೇ 7.1ರಷ್ಟಿದೆ. ಇದು ಅಷ್ಟು ಆಕರ್ಷಕ ಅನಿಸದೇ ಇರಬಹುದು. ಆದರೆ ಶೇ 30ರ ತೆರಿಗೆ ಹಂತದಲ್ಲಿ ಬರುವವರಿಗೆ ಇದು ಉತ್ತಮ ಯೋಜನೆಯಾಗುತ್ತದೆ. ಶೇ 30ರಷ್ಟು ತೆರಿಗೆ ಮಿತಿಗೆ ಬರುವವರು ಪಿಪಿಎಫ್‌ನ ಬಡ್ಡಿ ಲಾಭವನ್ನು ನಿಶ್ಚಿತ ಠೇವಣಿಯಲ್ಲಿ ಪಡೆಯಬೇಕಾದರೆ ಅದು ಶೇ 10ರಷ್ಟು ಗಳಿಕೆ ಕೊಡಬೇಕು. ಪಿಪಿಎಫ್‌ನಲ್ಲಿ ಪ್ರತಿ ವರ್ಷ ₹1.5 ಲಕ್ಷ ತೊಡಗಿಸಿದರೆ ಒಟ್ಟು ₹22.5 ಲಕ್ಷ ಹೂಡಿಕೆಯಾಗಿರುತ್ತದೆ. ಹೂಡಿಕೆ ಮತ್ತು ಬಡ್ಡಿ ಸೇರಿ 15 ವರ್ಷಗಳ ಬಳಿಕ ₹40.68 ಲಕ್ಷ ಸಿಗುತ್ತದೆ. ಬಡ್ಡಿ ಲೆಕ್ಕಾಚಾರಕ್ಕೆ ಪ್ರಸ್ತುತ ದರ ಪರಿಗಣಿಸಲಾಗಿದೆ.

ಕಿವಿಮಾತು: ಮಕ್ಕಳ ಶಿಕ್ಷಣಕ್ಕಾಗಿ ಎಷ್ಟು ಬೇಗ ಹೂಡಿಕೆ ಮಾಡುತ್ತಿರೋ ಅಷ್ಟು ಹೆಚ್ಚು ಲಾಭ. ಬೇಗ ಹಣ ತೊಡಗಿಸಿದಾಗ ಮಾತ್ರ ಹೂಡಿಕೆಗಳಿಂದ ನಿಮಗೆ ಚಕ್ರಬಡ್ಡಿಯ ಗಳಿಕೆ ಹೆಚ್ಚು ಸಿಗುತ್ತದೆ.

ಮ್ಯೂಚುವಲ್ ಫಂಡ್ ಆಯ್ಕೆಯೂ ಒಳಿತು

ಮಕ್ಕಳ ವಿದ್ಯಾಭ್ಯಾಸಕ್ಕೆ ಹೂಡಿಕೆ ಮಾಡುವಾಗ ಸಾಂಪ್ರದಾಯಿಕ ಯೋಜನೆಗಳನ್ನಷ್ಟೇ ನೆಚ್ಚಿಕೊಳ್ಳುವುದು ಸರಿಯಲ್ಲ. ಹಣದುಬ್ಬರ ವೇಗವಾಗಿ ಮುನ್ನುಗ್ಗುತ್ತಿರುವುದರಿಂದ ಪ್ರತಿ 6ರಿಂದ 7 ವರ್ಷಗಳಿಗೊಮ್ಮೆ ಶಿಕ್ಷಣ ವೆಚ್ಚಗಳು ದುಪ್ಪಟ್ಟಾಗುತ್ತಿವೆ. ಈ ಕಾರಣದಿಂದಾಗಿ ಮ್ಯೂಚುವಲ್ ಫಂಡ್‌ಗಳನ್ನೂ ಪರಿಗಣಿಸುವುದು ಒಳಿತು. ಮಕ್ಕಳನ್ನು ಕೇಂದ್ರೀಕರಿಸಿಕೊಂಡ ಮ್ಯೂಚುವಲ್ ಫಂಡ್ ಅಥವಾ ಈಕ್ವಿಟಿ ಮ್ಯೂಚುವಲ್ ಫಂಡ್‌ಗಳನ್ನು ಇದಕ್ಕೆ ಆಯ್ಕೆ ಮಾಡಿಕೊಳ್ಳಬಹುದು. ಭಾರತದಲ್ಲಿ ಮಕ್ಕಳನ್ನು ಕೇಂದ್ರೀಕರಿಸಿಕೊಂಡ ಮ್ಯೂಚುವಲ್ ಫಂಡ್ ಯೋಜನೆಗಳ ಸಂಖ್ಯೆ 10ಕ್ಕೂ ಹೆಚ್ಚು. ಈ ಯೋಜನೆಗಳನ್ನು ಶಿಕ್ಷಣ ಅಥವಾ ಮದುವೆಯ ಉದ್ದೇಶಕ್ಕೆ ಬಳಸಿಕೊಳ್ಳಬಹುದು.

ಸಾಮಾನ್ಯವಾಗಿ ಇಂತಹ ಮ್ಯೂಚುವಲ್ ಫಂಡ್ ಹೂಡಿಕೆಗಳು 5 ವರ್ಷದ ಲಾಕ್-ಇನ್ ಅವಧಿ ಹೊಂದಿರುತ್ತವೆ. ಇಂಥವು ನಿಮಗೆ ಸರಿಹೊಂದದಿದ್ದರೆ ಈಕ್ವಿಟಿ ಮ್ಯೂಚುವಲ್ ಫಂಡ್ ಮತ್ತು ಹೈಬ್ರೀಡ್ ಮ್ಯೂಚುವಲ್ ಫಂಡ್‌ಗಳನ್ನು ಪರಿಗಣಿಸಿ. ಈಕ್ವಿಟಿ ಮ್ಯೂಚುವಲ್ ಫಂಡ್‌ಗಳಲ್ಲಿ ದೀರ್ಘಾವಧಿಯಲ್ಲಿ ವಾರ್ಷಿಕ ಶೇ 12ರವರೆಗೆ ಗಳಿಕೆ ನಿರೀಕ್ಷಿಸಬಹುದು. ನೀವು ಯಾವ ಮ್ಯೂಚುವಲ್ ಫಂಡ್ ಪರಿಗಣಿಸಬೇಕು ಎನ್ನುವುದು ನೀವು ಎಷ್ಟು ರಿಸ್ಕ್ ತೆಗೆದುಕೊಳ್ಳಲು ತಯಾರಿದ್ದೀರಿ ಮತ್ತು ಹೂಡಿಕೆಗೆ ಎಷ್ಟು ಸಮಯ ಕೊಡುತ್ತೀರಿ ಎನ್ನುವುದರ ಮೇಲೆ ನಿಂತಿದೆ.

ವಾಹನಗಳಿಗೆ ಕಡಿಮೆ ಮಟ್ಟದ ತೆರಿಗೆ?

ಜಿಎಸ್‌ಟಿ ವ್ಯವಸ್ಥೆಯಲ್ಲಿ ಬದಲಾವಣೆ • ಆದೀತೇ ವಾಹನಗಳ ಬೆಲೆ ಇಳಿಕೆ?

ನವದೆಹಲಿ (ಪಿಟಿಐ): ವಾಹನಗಳ ವರ್ಗೀಕರಣದಿಂದ ಉಂಟಾಗುವ ವ್ಯಾಜ್ಯಗಳನ್ನು ಪರಿಹರಿಸಲು ಅನುಕೂಲ ಆಗುವ ರೀತಿಯಲ್ಲಿ ಜಿಎಸ್‌ಟಿ ವ್ಯವಸ್ಥೆಯ ಅಡಿ ವಾಹನಗಳ ತೆರಿಗೆ ಹಂತವನ್ನು ನಿರ್ಧಾರ ಮಾಡಲಾಗುತ್ತದೆ ಎಂದು ಮೂಲಗಳು ಹೇಳಿವೆ.

ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆಯಲ್ಲಿ ಹಲವು ಸುಧಾರಣೆಗಳನ್ನು ತರುವ ಪ್ರಸ್ತಾವವನ್ನು ಕೇಂದ್ರ ಸರ್ಕಾರವು ಸಿದ್ಧಪಡಿಸಿದೆ.

ವಾಹನಗಳ ಎಂಜಿನ್ ಸಾಮರ್ಥ್ಯ ಹಾಗೂ ವಾಹನಗಳ ಗಾತ್ರವನ್ನು ಆಧರಿಸಿ ಅವುಗಳನ್ನು ವರ್ಗೀಕರಿಸಲಾಗುತ್ತಿದೆ. ಈಗಿರುವ ವ್ಯವಸ್ಥೆಯಲ್ಲಿ ವಾಹನಗಳಿಗೆ ಶೇಕಡ 28ರಷ್ಟು ತೆರಿಗೆ ವಿಧಿಸಲಾಗುತ್ತಿದೆ. ಇದು ಜಿಎಸ್‌ಟಿ ವ್ಯವಸ್ಥೆಯಲ್ಲಿ ಗರಿಷ್ಠ ಮಟ್ಟದ ತೆರಿಗೆ.

ತೆರಿಗೆ ಮಾತ್ರವೇ ಅಲ್ಲದೆ, ವಾಹನಗಳ ಮೇಲೆ ಶೇ 1ರಿಂದ ಶೇ 22ರವರೆಗೆ ಪರಿಹಾರ ಸೆಸ್ ವಿಧಿಸಲಾಗುತ್ತಿದೆ. ಇದು ವಾಹನ ಯಾವ ಬಗೆಯದ್ದು ಎಂಬುದನ್ನು ಆಧರಿಸಿ ತೀರ್ಮಾನವಾಗುತ್ತದೆ.

ವಾಹನಗಳ ಎಂಜಿನ್ ಸಾಮರ್ಥ್ಯ ಹಾಗೂ ವಾಹನಗಳ ಉದ್ದವನ್ನು ಆಧರಿಸಿ ಒಟ್ಟು ತೆರಿಗೆ ಪ್ರಮಾಣವು ಶೇ 29ರಿಂದ ಶೇ 50ರವರೆಗೆ ಇರುತ್ತದೆ. ಪೆಟ್ರೋಲ್ ಚಾಲಿತ ಸಣ್ಣ ಕಾರುಗಳಿಗೆ ಶೇ 29ರಷ್ಟು ತೆರಿಗೆ ಪಾವತಿಸಬೇಕಾಗುತ್ತದೆ. ಎಸ್‌ಯುವಿಗಳಿಗೆ ಶೇ 50ರಷ್ಟು ತೆರಿಗೆ ಇರುತ್ತದೆ. ವಿದ್ಯುತ್ ಚಾಲಿತ ವಾಹನಗಳಿಗೆ ಶೇ 5ರಷ್ಟು ತೆರಿಗೆ ನಿಗದಿ ಮಾಡಲಾಗಿದೆ.

ಜಿಎಸ್‌ಟಿ ವ್ಯವಸ್ಥೆಯ ಅಡಿಯಲ್ಲಿ ಎರಡು ಹಂತಗಳ ತೆರಿಗೆಯನ್ನು ಮಾತ್ರ ಉಳಿಸಿಕೊಳ್ಳುವ ಪ್ರಸ್ತಾವವನ್ನು ಈಗ ಕೇಂದ್ರ ಸರ್ಕಾರವು ಸಿದ್ಧಪಡಿಸಿದೆ. ಎಂಜಿನ್ ಸಾಮರ್ಥ್ಯ ಹಾಗೂ ವಾಹನದ ಉದ್ದವನ್ನು ಆಧರಿಸಿ ವರ್ಗೀಕರಣ ಮಾಡುವುದರಿಂದ ಉಂಟಾಗುವ ವ್ಯಾಜ್ಯಗಳನ್ನು ಕೊನೆಗಾಣಿಸುವ ಗುರಿಯೊಂದಿಗೆ ವಾಹನಗಳನ್ನು ನಿರ್ದಿಷ್ಟ ತೆರಿಗೆ ಹಂತವೊಂದರಲ್ಲಿ ತರಲಾಗುತ್ತದೆ ಎಂದು ಮೂಲಗಳು ವಿವರಿಸಿವೆ.

ತೆರಿಗೆ ಪ್ರಮಾಣವನ್ನು ಕಡಿಮೆ ಮಾಡುವುದರಿಂದ, ಕಾರುಗಳ ಬೆಲೆ ಇಳಿಕೆ ಆಗಿ ಅವು ಇನ್ನಷ್ಟು ಕೈಗೆಟುಕುವಂತೆ ಆಗುತ್ತವ

ವಿಕ್ರಂ ರವಿಚಂದ್ರನ್

‘ಪ್ರೇಕ್ಷಕರನ್ನು ಖುಷಿಪಡಿಸುವುದೇ ಸವಾಲು’

ವಿಕ್ರಂ ರವಿಚಂದ್ರನ್ ನಟನೆಯ ‘ಮುಧೋಳ್’ ಚಿತ್ರಕ್ಕೆ ಮತ್ತೆ ಮರುಜೀವ ಸಿಕ್ಕಿದೆ. ಜತೆಗೆ ಇನ್ನೊಂದಷ್ಟು ಸಿನಿಮಾಗಳನ್ನು ಎದುರು ನೋಡುತ್ತಿರುವ ಅವರು ಚಿತ್ರರಂಗದಲ್ಲಿ ತಮ್ಮ ಭವಿಷ್ಯದ ಕನಸುಗಳ ಕುರಿತು ಮಾತನಾಡಿದ್ದಾರೆ.

‘ಚಿತ್ರದ್ವೇಷದ ಕುರಿತ ಕಥೆ ಹೊಂದಿದೆ. ‘ಮುಧೋಳ್’ ಎಂಬುದು ಒಂದು ಊರಿನ ಹೆಸರು. ಕರ್ನಾಟಕದ ತಳಿ ಕೂಡ. ನಾವು ತಳಿಯ ಮೇಲೆ ಹೋಗಿದ್ದೇವೆ. ಒಂದು ಪಾತ್ರವನ್ನು ಆ ತಳಿ ಆಧಾರಿತವಾಗಿ ವಿನ್ಯಾಸಗೊಳಿಸಿದ್ದೇವೆ. ನಾಯಕ ದ್ವೇಷ ತೀರಿಸಿಕೊಳ್ಳುವ ರೀತಿ, ನಿಯತ್ತು ಮುಂತಾದ ಅಂಶಗಳು ಪಾತ್ರದಲ್ಲಿವೆ. ಹೀಗಾಗಿ ಈ ಶೀರ್ಷಿಕೆ ಇಟ್ಟಿದ್ದೇವೆ’ ಎಂದು ಮಾತು ಪ್ರಾರಂಭಿಸಿದರು ವಿಕ್ರಂ.

‘ನನ್ನ ಪಾತ್ರದ ಹೆಸರು ಶಶಿ. ಈಗಾಗಲೇ ಚಿತ್ರದ ಟೀಸರ್ ಬಿಡುಗಡೆಗೊಂಡಿದ್ದು, ಅದರಲ್ಲಿ ಪಾತ್ರದ ಕುರಿತು ಸಾಕಷ್ಟು ವಿವರ ಸಿಗುತ್ತದೆ. ದ್ವೇಷದ ಜತೆಗೆ ಸಾಕಷ್ಟು ಭಾವನಾತ್ಮಕ ಅಂಶಗಳೂ ಇವೆ. ಹದಿನೈದು ದಿನಗಳ ಚಿತ್ರೀಕರಣ ಬಾಕಿಯಿದೆ. ಎರಡು ಹಾಡುಗಳು ಬಾಕಿ ಇವೆ. 8 ದಿನಗಳ ಮಾತಿನ ಭಾಗದ ಚಿತ್ರೀಕರಣ ಬಾಕಿಯಿದೆ. ಈ ವರ್ಷವೇ ತೆರೆಗೆ ತರಲು ಆಲೋಚಿಸಿದ್ದೇವೆ. ಅಕ್ಟೋಬರ್ ಅಂತ್ಯಕ್ಕೆ ಸಿನಿಮಾ ಸಿದ್ಧವಾಗುತ್ತದೆ’ ಎಂದರು.

‘ಸೂಕ್ತವಾದ ಸಹಭಾಗಿತ್ವಕ್ಕೆ ಕಾಯುತ್ತಿದ್ದೆವು. ನಮ್ಮಂಥ ಯುವಕರಿಗೆ ಬೆಂಬಲ ಬೇಕು. ಅಮೃತ ಸಿನಿಕ್ರಾಫ್ಟ್ಸ್ ಆ ಸಹಭಾಗಿತ್ವ ನೀಡಿದೆ. ಸಿನಿಮಾ ನನ್ನ ಪ್ರಕಾರ ತಡವಾಗಿಲ್ಲ. ನಮ್ಮಂಥ ಯುವಕರು ಸರಿಯಾದ ಸಮಯದಲ್ಲಿ ಸಿನಿಮಾ ತೆರೆಗೆ ತರಬೇಕು. ನಮ್ಮ ಕೆಲ ಹಳೆಯ ಸಿನಿಮಾಗಳು ಸರಿಯಾದ ಸಮಯದಲ್ಲಿ ಬರಲಿಲ್ಲ. ಸರಿಯಾದ ಸಮಯ, ಸರಿಯಾದ ವ್ಯಕ್ತಿಗಳೊಂದಿಗೆ ಬಂದಾಗ ಸಿನಿಮಾ ಚೆನ್ನಾಗಿ ಆಗಬಹುದೆಂಬ ಆಸೆ. ಒಂದು ಸಿನಿಮಾ ತೆರೆಕಂಡ ನಂತರ ಮತ್ತೊಂದು ಸಿನಿಮಾಕ್ಕೆ ಮೂರು ವರ್ಷಗಳನ್ನು ತೆಗೆದುಕೊಳ್ಳಬಾರದು. ‘ಮುಧೋಳ್’ ಬಿಡುಗಡೆ ಬಳಿಕ ನನ್ನದು ವರ್ಷಕ್ಕೆ ಎರಡು ಸಿನಿಮಾ ಬರಬೇಕು. ಇಲ್ಲಿಂದ ನನ್ನ ಪಯಣ ಭಿನ್ನ. ನಾನು ಯಾವುದೇ ಸಿನಿಮಾ ಮಾಡಿದರೂ, ಅದು ನನ್ನ ಹಿಂದಿನ ಸಿನಿಮಾಕ್ಕಿಂತ ದೊಡ್ಡದಾಗಿರುತ್ತದೆ. ನಾವು ಈ ಸಿನಿಮಾ ಪ್ರಾರಂಭಿಸಿದ ಸ್ಥಿತಿಗೆ ಹೋಲಿಸಿಕೊಂಡರೆ, ಈಗ ಸಂಪೂರ್ಣ ಚಿತ್ರಣ ಬದಲಾಗಿದೆ. ಮಾರುಕಟ್ಟೆ ಬದಲಾಯಿತು. ಸಿನಿಮಾ ಹಕ್ಕುಗಳ ಖರೀದಿ ನಿಂತಿತು. ನಾವು ಸಿನಿಮಾ ಶುರು ಮಾಡಿದಾಗ ಹಕ್ಕುಗಳು ಹೋಗುತ್ತಿತ್ತು. ಹೀಗಾಗಿ ಈ ನಾವು ಸಿನಿಮಾವನ್ನು ಪ್ರಸ್ತುತಪಡಿಸುವ ರೀತಿ ಬದಲಾಗಬೇಕು. ಅದಕ್ಕೆ ಸಮಯ ತೆಗೆದುಕೊಂಡೆವು’ ಎಂದು ಸಿನಿಮಾ ವಿಳಂಬವಾಗಿರುವುದಕ್ಕೆ ಸಮಜಾಯಿಷಿ ನೀಡಿದರು.

‘ವರ್ಷಕ್ಕೆ 5-10 ಸಿನಿಮಾ ಮಾಡಬೇಕೆಂಬ ಆಸೆಯಿದೆ. ಆದರೆ ಇಲ್ಲಿ ಅದಕ್ಕೆ ಬೇಕಾದ ಮನಸ್ಥಿತಿ ಇಲ್ಲ. 2-3 ಸಿನಿಮಾ ಜನಕ್ಕೆ ತಕ್ಕಂತೆ ಮಾಡಬೇಕು. ಒಮ್ಮೆ ಯಶಸ್ಸಾದರೆ ಮಾತ್ರ ಅವಕಾಶಗಳು ಹೆಚ್ಚುತ್ತವೆ’ ಎನ್ನುತ್ತಾರೆ ವಿಕ್ರಂ.

‘ಬೇರೆ ಕೆಲವಷ್ಟು ಸಿನಿಮಾಗಳ ಮಾತುಕತೆ ನಡೆದಿದೆ. ಎಲ್ಲವೂ ಹೊಸಬರ ಜತೆ. ನಾನು ಹೆಚ್ಚಾಗಿ ನಾನು ಹೊಸಬರ ಜತೆಯೇ ಕೆಲಸ ಮಾಡಲು ಬಯಸುತ್ತೇನೆ. ನನಗೆ ಉತ್ತಮ ಕಂಟೆಂಟ್ ಇರಬೇಕು. ಮನರಂಜನೀಯ ಸಿನಿಮಾಗಳನ್ನೇ ಮಾಡುತ್ತೇನೆ’ ಎಂದು ಮಾತಿಗೆ ವಿರಾಮವಿತ್ತರು.

ನೆಪೋಟಿಸಂ ಅಸ್ತಿತ್ವದಲ್ಲಿಲ್ಲ.

‘ನಾನು ಸ್ಟಾರ್ ಮಗನಾಗಿದ್ದರೂ ನೆಪೋಟಿಸಂ ಅಸ್ತಿತ್ವದಲ್ಲಿಲ್ಲ. ತುಂಬ ನಾಯಕರ ಮಕ್ಕಳು ಬಂದು ವಿಫಲರಾಗಿರುವುದೇ ಹೆಚ್ಚು. ಅಪ್ಪನ ಹೆಸರು ಕಾಪಾಡಿಕೊಂಡವರು ಕಡಿಮೆ. ಪರದೆಯಲ್ಲಿ ನೆಪೋಟಿಸಂ ಕೆಲಸ ಮಾಡುವುದಿಲ್ಲ. ಪರದೆಯಲ್ಲಿ ನಾವು ಚೆನ್ನಾಗಿ ಮಾಡಿದಾಗ ಮಾತ್ರ ಜನ ಒಪ್ಪಿಕೊಳ್ಳುತ್ತಾರೆ. ₹200 ಕೊಟ್ಟು ಟಿಕೆಟ್ ಖರೀದಿಸಿದ ಪ್ರೇಕ್ಷಕರನ್ನು ಮನರಂಜಿಸುವುದೇ ನಿಜವಾದ ಸವಾಲು. ಯಾವ ಜಾನರ್‌ನ ಸಿನಿಮಾಗಳನ್ನು ಬೇಕಾದರೂ ಮಾಡಿ, ಆದರೆ ಪ್ರೇಕ್ಷಕರನ್ನು ಮನರಂಜಿಸಬೇಕು’ ಎಂಬುದು ಅವರ ಅಭಿಮತ.

ಪ್ರಿಯಾ ಆಚಾರ್, ರಾಣಾ

ಸೆ.5ಕ್ಕೆ ಏಳುಮಲೆ ತೆರೆಗೆ

ತರುಣ್ ಸುಧೀರ್ ನಿರ್ಮಾಣದ ‘ಏಳುಮಲೆ’ ಚಿತ್ರ ಸೆ.5ರಂದು ತೆರೆಗೆ ಬರಲಿದೆ. ವಿಭಿನ್ನ ಪ್ರೇಮ ಕಥೆಯನ್ನು ಹೊಂದಿರುವ ಚಿತ್ರಕ್ಕೆ ಪುನೀತ್ ರಂಗಸ್ವಾಮಿ ಆ್ಯಕ್ಷನ್ ಕಟ್ ಹೇಳಿದ್ದಾರೆ. ಕನ್ನಡ, ತಮಿಳು ಹಾಗೂ ತೆಲುಗು ಭಾಷೆಗಳಲ್ಲಿ ಚಿತ್ರ ತೆರೆ ಕಾಣಲಿದೆ.

‘ಕರ್ನಾಟಕ-ತಮಿಳುನಾಡು ನಡುವಿನ ಗಡಿಭಾಗದ ಪ್ರೇಮಕಥೆಯಲ್ಲಿ ನಟ ರಕ್ಷಿತಾ ಸಹೋದರ ರಾಣಾ ಕನ್ನಡದ ಹುಡುಗ ‘ಹರೀಶ್’ ಆಗಿ ನಟಿಸುತ್ತಿದ್ದಾರೆ. ರಿಯಾಲಿಟಿ ಶೋ ಮೂಲಕ ಜನಪ್ರಿಯ ಮೈಸೂರಿನ ಹುಡುಗಿ ಪ್ರಿಯಾ ಆಚಾರ್ ತಮಿಳು ಹುಡುಗಿಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಜಗಪತಿ ಬಾಬು, ನಾಗಾಭರಣ, ಕಿಶೋರ್ ಕುಮಾರ್, ಸರ್ದಾರ್ ಸತ್ಯ, ಜಗಪ್ಪ ತಾರಾಬಳಗದಲ್ಲಿದ್ದಾರೆ’ ಎಂದಿದೆ ಚಿತ್ರತಂಡ.

‘ನೈಜ ಘಟನೆಯನ್ನು ಆಧರಿಸಿದ ಚಿತ್ರ. ಭಾವನಾತ್ಮಕವಾದ ಕಥೆಯನ್ನು ಒಳಗೊಂಡಿದೆ. ಚಾಮರಾಜನಗರ, ಸೇಲಂ, ಈರೋಡ್ ಸೇರಿದಂತೆ ಕರ್ನಾಟಕ-ತಮಿಳುನಾಡು ಗಡಿ ಭಾಗದ ಸ್ಥಳಗಳಲ್ಲಿ ಚಿತ್ರೀಕರಣ ನಡೆಸಲಾಗಿದೆ’ ಎಂದಿದ್ದಾರೆ ನಿರ್ದೇಶಕರು.

ಡಿ.ಇಮ್ಮಾನ್ ಸಂಗೀತ, ಅದ್ವೈತ್ ಗುರುಮೂರ್ತಿ ಛಾಯಾಚಿತ್ರಗ್ರಹಣ, ಕೆ.ಎಂ. ಪ್ರಕಾಶ್ ಸಂಕಲನ, ನಾಗಾರ್ಜುನ್ ಶರ್ಮಾ ಹಾಗೂ ಪುನೀತ್ ರಂಗಸ್ವಾಮಿ ಸಂಭಾಷಣೆ ಚಿತ್ರಕ್ಕಿದೆ.

ಯುವ ಮನಸ್ಸುಗಳ ಪ್ರೇಮಕಥೆ


ವೃಜ್ವಲಿ ಸುವರ್ಣ

ಯುವ ಸಮುದಾಯದ ಪ್ರೇಮಕಥೆಗಳನ್ನು ಹೊಂದಿರುವ ಚಿತ್ರಗಳು ಇತ್ತೀಚೆಗೆ ಹೆಚ್ಚು ಟ್ರೆಂಡ್ ಆಗುತ್ತಿವೆ. ಅದೇ ಜಾನರ್‌ನ ‘31 DAYS’ ಚಿತ್ರದ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ರಾಜ ರವಿಕುಮಾರ್ ನಿರ್ದೇಶನದ ಚಿತ್ರವಿದು. ಜತೆಗೆ ಖ್ಯಾತ ಸಂಗೀತ ನಿರ್ದೇಶಕ ವಿ.ಮನೋಹರ್ ಸಂಗೀತ ನೀಡಿರುವ 150ನೇ ಚಿತ್ರ.

ಕಾರ್ಮಿಕ ಸಚಿವ ಸಂತೋಷ್ ಲಾಡ್ ಚಿತ್ರದ ಟೀಸರ್ ಬಿಡುಗಡೆಗೊಳಿಸಿ ತಂಡಕ್ಕೆ ಶುಭ ಹಾರೈಸಿದರು. ‘ಜಾಲಿಡೇಸ್’ ಖ್ಯಾತಿಯ ನಿರಂಜನ್ ಶೆಟ್ಟಿ ನಾಯಕನಾಗಿದ್ದು, ಯುವ ನಟಿ ಪ್ರಜ್ವಲಿ ಸುವರ್ಣ ನಾಯಕಿ. ಯುವ ಮನಸ್ಸುಗಳ ಪ್ರೇಮ ಕಥೆಯನ್ನು ಹೊಂದಿರುವ ಚಿತ್ರ ಸೆ.5ರಂದು ತೆರೆಗೆ ಬರಲಿದೆ.

ನಾಗವೇಣಿ ಎನ್. ಶೆಟ್ಟಿ ಬಂಡವಾಳ ಹೂಡಿದ್ದಾರೆ. ವಿನುತ್.ಕೆ ಛಾಯಾಚಿತ್ರಗ್ರಹಣ, ನಿಖಿತ್ ಪೂಜಾರಿ ಸಂಕಲನ ಈ ಚಿತ್ರಕ್ಕಿದೆ.

ಡೆವಿಲ್ ಪೋಸ್ಟರ್

ದರ್ಶನ್ ಅಭಿನಯದ ಡೆವಿಲ್ ಚಿತ್ರದ ಹೊಸ ಪೋಸ್ಟರ್ ಅನ್ನು ಅವರ ಪತ್ನಿವಿಜಯಲಕ್ಷ್ಮಿ ತಮ್ಮ ಹಾಗೂ ದರ್ಶನ್ ಅವರ ಸಾಮಾಜಿಕ ಮಾಧ್ಯಮ ಖಾತೆಗಳಲ್ಲಿ ಹಂಚಿಕೊಂಡಿದ್ದಾರೆ.

‘ನಿಮ್ಮ ಚಾಲೆಂಜಿಂಗ್ ಸ್ಟಾರ್ ದರ್ಶನ್ ಹೃದಯದಲ್ಲಿ ನೀವೆಲ್ಲರೂ ಇದ್ದೀರಿ. ಅವರು ಮರಳಿ ಬಂದು ನೇರವಾಗಿ ನಿಮ್ಮನ್ನು ಸಂಪರ್ಕಿಸುವ ತನಕ ನಾನು ಅವರ ಸಾಮಾಜಿಕ ಮಾಧ್ಯಮ ಖಾತೆಗಳನ್ನು ನಿರ್ವಹಿಸುತ್ತೇನೆ. ಅವರ ಪರವಾಗಿ ಅಪ್‌ಡೇಟ್ ನೀಡುತ್ತೇನೆ ಮತ್ತು ಸಿನಿಮಾ ಪ್ರಚಾರ ಮಾಡುತ್ತೇನೆ’ ಎಂದು ವಿಜಯಲಕ್ಷ್ಮಿ ದರ್ಶನ್ ಅವರು ಪೋಸ್ಟ್ ಮಾಡಿದ್ದಾರೆ.

‘ಮಿಲನ’ ಪ್ರಕಾಶ್ ನಿರ್ದೇಶಿಸಿ, ನಿರ್ಮಿಸಿರುವ ಚಿತ್ರ ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ. ಇದೀಗ ವಿಜಯಲಕ್ಷ್ಮಿ ಹೊಸ ಪೋಸ್ಟರ್ ಹಂಚಿಕೊಳ್ಳುವ ಮೂಲಕ ಚಿತ್ರ ಪ್ರಚಾರ ಆರಂಭದ ಮುನ್ಸೂಚನೆ ನೀಡಿದ್ದಾರೆ.

ಚಿಟಿಕೆ ಸುದ್ದಿ

ಎಲ್ವಿಶ್ ಯಾದವ್ ಮನೆಯ ಹೊರಗೆ ಗುಂಡಿನ ದಾಳಿ

ಗುರುಗ್ರಾಮ (ಪಿಟಿಐ): ಗುರುಗ್ರಾಮದ ಸೆಕ್ಟರ್ 57ರಲ್ಲಿರುವ ಯೂಟ್ಯೂಬರ್ ಎಲ್ವಿಶ್ ಯಾದವ್ ಅವರ ಮನೆಯ ಹೊರಗೆ ಭಾನುವಾರ ಗುಂಡಿನ ದಾಳಿ ನಡೆದಿದೆ. ಬೈಕ್‌ನಲ್ಲಿ ಬಂದ ಮೂವರು ದಾಳಿಕೋರರು ಸುಮಾರು ಎರಡು ಡಜನ್‌ಗೂ ಹೆಚ್ಚು ಸುತ್ತು ಗುಂಡು ಹಾರಿಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಮುಂಜಾನೆ 5.30ರ ವೇಳೆಗೆ ಘಟನೆ ನಡೆದಿದ್ದು, ಈ ವೇಳೆ ಎಲ್ವಿಶ್ ಮನೆಯಲ್ಲಿ ಇರಲಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ. ದಾಳಿಯ ವೇಳೆ ಅವರ ಕುಟುಂಬದ ಕೆಲವು ಸದಸ್ಯರು ಮನೆಯಲ್ಲಿ ಇದ್ದರಾದರೂ, ಯಾರಿಗೂ ಗಾಯಗಳಾಗಿಲ್ಲ.

ತಾಯಿ ಮೇಲೆ ಅತ್ಯಾಚಾರ ಆರೋಪ: ಬಂಧನ

ನವದೆಹಲಿ (ಪಿಟಿಐ): ತಾಯಿಯ ಮೇಲೆ ವ್ಯಕ್ತಿಯೊಬ್ಬ ಎರಡು ಸಲ ಅತ್ಯಾಚಾರ ಎಸಗಿರುವ ಆರೋಪ ಕೇಳಿಬಂದಿದ್ದು, ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಶನಿವಾರ ತಿಳಿಸಿದರು.

ಹೌಜ್ ಕಾಜಿ ಪೊಲೀಸ್ ಠಾಣೆಗೆ ತನ್ನ 25 ವರ್ಷದ ಮಗಳೊಟ್ಟಿಗೆ ತೆರಳಿ 65 ವರ್ಷದ ಮಹಿಳೆಯು, ಪುತ್ರ ಅತ್ಯಾಚಾರ ನಡೆಸಿದ್ದಾನೆಂದು ದೂರು ನೀಡಿದ್ದಾರೆ.

ಮೊಹಮ್ಮದ್ ಫಿರೋಜ್ ಅಲಿಯಾಸ್ ಸುಹೇಲ್ ಆರೋಪಿ. ತಾನು ಬಾಲ್ಯಾವಸ್ಥೆಯಲ್ಲಿದ್ದಾಗ ತಾಯಿಯು ಅಕ್ರಮ ಸಂಬಂಧ ಹೊಂದಿದ್ದರು. ಇದರಿಂದಾಗಿ ತನ್ನ ಬಾಲ್ಯವೇ ನಾಶವಾಯಿತು ಎಂದು ಆರೋಪಿಸಿ, ಅದಕ್ಕೆ ಶಿಕ್ಷೆಯ ರೂಪದಲ್ಲಿ ಅತ್ಯಾಚಾರ ಎಸಗಿದ್ದಾಗಿ ತಿಳಿಸಿದನೆಂದು ದೂರು ದಾಖಲಿಸಲಾಗಿದೆ.

ಕಠುವಾದಲ್ಲಿ ಮೇಘಸ್ಫೋಟ, ಭೂಕುಸಿತ

ನಾಲ್ಕು ಕುಟುಂಬಗಳ ಐದು ಮಕ್ಕಳು ಸೇರಿ ಏಳು ಮಂದಿ ಸಾವು
• ಮೃತರ ಕುಟುಂಬಗಳಿಗೆ ₹2 ಲಕ್ಷ ಪರಿಹಾರ ಘೋಷಣೆ

ಜಮ್ಮು (ಪಿಟಿಐ): ಇಲ್ಲಿನ ಕಠುವಾ ಜಿಲ್ಲೆಯಲ್ಲಿ ಭಾನುವಾರ ಸಂಭವಿಸಿದ ಮೇಘಸ್ಫೋಟ ಹಾಗೂ ಭೂಕುಸಿತದಿಂದ ಪ್ರತ್ಯೇಕ ಪ್ರಕರಣಗಳಲ್ಲಿ ನಾಲ್ಕು ಕುಟುಂಬಗಳ ಐದು ಮಂದಿ ಮಕ್ಕಳು ಸೇರಿದಂತೆ ಏಳು ಮಂದಿ ಮೃತಪಟ್ಟಿದ್ದಾರೆ.

ಜಿಲ್ಲೆಯಲ್ಲಿ ಶನಿವಾರ ರಾತ್ರಿಯಿಂದಲೂ ನಿರಂತರ ಸುರಿದ ಮಳೆಯಿಂದ ರಾಜಭಾಗ್‌ನ ಜೋಧ್ ಘಾಟ್ ಪ್ರದೇಶ ಹಾಗೂ ಜಾಂಗ್ಲೋಟ್‌ನ ಬರ್ಗಾ ಗ್ರಾಮದಲ್ಲಿ ವಿಪತ್ತು ಸಂಭವಿಸಿದೆ. ನದಿ ನೀರಿನ ಮಟ್ಟವು ತೀವ್ರವಾಗಿ ಏರಿಕೆಯಾಗಿದ್ದು, ತಗ್ಗುಪ್ರದೇಶಗಳು ನೀರಿನಲ್ಲಿ ಮುಳುಗಡೆಯಾಗಿವೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಜಿಲ್ಲೆಯ ಚಿಸೌತಿ ಗ್ರಾಮದಲ್ಲಿ ಆ.14ರಂದು ಸಂಭವಿಸಿದ ಭೂಕುಸಿತದಿಂದ 60 ಮಂದಿ ಮೃತಪಟ್ಟಿದ್ದು, 100ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದರು.

ಜೋಧ್ ಘಾಟ್‌ನಲ್ಲಿ ಸುರ್ಮು ದಿನ್ (32), ಅವರ ಮಕ್ಕಳಾದ ಪನು(6), ಶಿಡು(5), ಜುಲ್ಫನ್(15) ತಹು (2) ಮೃತಪಟ್ಟಿದ್ದು, ಜಾಂಗ್ಲೋಟ್‌ನಲ್ಲಿ ರೇಣುದೇವಿ (39) ಮಗಳು ರಾಧಿಕಾ (9) ಮೃತಪಟ್ಟಿದ್ದಾರೆ. ಜೋಧ್ ಘಾಟ್‌ನಲ್ಲಿ ಗಾಯಗೊಂಡಿದ್ದ ಆರು ಮಂದಿಯನ್ನು ಸೇನಾ ಸಿಬ್ಬಂದಿಯು ಆಸ್ಪತ್ರೆಗೆ ದಾಖಲಿಸಿದ್ದಾರೆ.

‘ಭಾರತೀಯ ಸೇನೆಯು ಕಠುವಾದಲ್ಲಿ ರಕ್ಷಣಾ ಕಾರ್ಯಾಚರಣೆಯಲ್ಲಿ ತೊಡಗಿಸಿಕೊಂಡಿದ್ದು, ಸಂಕಷ್ಟಕ್ಕೆ ಸಿಲುಕಿರುವ ಜನರನ್ನು ರಕ್ಷಿಸಿ, ಭರವಸೆ ತುಂಬುತ್ತಿದೆ. ಆಹಾರ ಪೂರೈಕೆ ಜೊತೆಗೆ ಕಾಳಜಿ ವಹಿಸಲಾಗುತ್ತಿದೆ’ ಎಂದು ‘ರೈಸಿಂಗ್ ಸ್ಟಾರ್ ಕೋರ್’ ‘ಎಕ್ಸ್’ನಲ್ಲಿ ಚಿತ್ರ ಸಮೇತ ಪೋಸ್ಟ್ ಮಾಡಿದೆ.

ಕಠುವಾ ಪೊಲೀಸ್ ಠಾಣಾ ವ್ಯಾಪ್ತಿಯ ಛಂಗ್ಡಾ ಗ್ರಾಮ, ಲಖನ್‌ಪುರ ಪೊಲೀಸ್ ಠಾಣಾ ವ್ಯಾಪ್ತಿಯ ದಿಲ್ವಾನ್ ಹಟ್ಟಿಯಲ್ಲಿ ಭೂಕುಸಿತ ಸಂಭವಿಸಿದೆ. ದೊಡ್ಡ ಪ್ರಮಾಣದ ಹಾನಿ ಸಂಭವಿಸಿಲ್ಲ.

ನದಿ ನೀರಿನ ಮಟ್ಟ ಏರಿಕೆ: ಭಾರಿ ಮಳೆಯಿಂದ ಉಜ್ ನದಿಯು ಅಪಾಯದ ಮಟ್ಟ ಮೀರಿ ಹರಿಯುತ್ತಿದ್ದು, ತಗ್ಗು ಪ್ರದೇಶಗಳಿಗೆ ನೀರು ನುಗ್ಗಿದೆ. ಇದರಿಂದ ಅಂಗಡಿ, ಮನೆಗಳು ಮುಳುಗಿವೆ. ಜಿಲ್ಲಾಡಳಿತವು ಪರಿಸ್ಥಿತಿ ಮೇಲೆ ನಿಗಾ ವಹಿಸಿದೆ. ಬೆಟ್ಟದ ಮೇಲೆ ವಾಸಿಸುತ್ತಿರುವ ಜನರಿಗೆ ಮನೆಯಲ್ಲಿ ಇರುವಂತೆ ಸೂಚಿಸಿದ್ದು, ನದಿಪಾತ್ರಗಳಿಗೆ ತೆರಳದಂತೆ ಸೂಚಿಸಿದೆ.

ರೈಲು ಸಂಚಾರ ವ್ಯತ್ಯಯ: ಭೂಕುಸಿತದಿಂದ ಜಮ್ಮು- ಪಠಾಣ್‌ಕೋಟ್ ನಡುವಿನ ರೈಲು ಸಂಚಾರ ವ್ಯತ್ಯಯಗೊಂಡಿದೆ. ಹಲವು ಸ್ಥಳೀಯ ರೈಲುಗಳ ಸಂಚಾರವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಜಮ್ಮು ಮತ್ತು ಕಾಶ್ಮೀರ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಹಾಗೂ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಅವರ ಜೊತೆಗೆ ದೂರವಾಣಿಯಲ್ಲಿ ಮಾತನಾಡಿ, ಅಗತ್ಯ ನೆರವು ಒದಗಿಸುವ ಭರವಸೆ ನೀಡಿದರು.

ನೆರವು ಘೋಷಣೆ: ‘ದುರಂತದಲ್ಲಿ ಮೃತಪಟ್ಟ ಕುಟುಂಬಗಳ ಸದಸ್ಯರಿಗೆ ತಲಾ ₹2 ಲಕ್ಷ, ಗಂಭೀರವಾಗಿ ಗಾಯಗೊಂಡವರಿಗೆ ತಲಾ ₹1 ಲಕ್ಷ ಹಾಗೂ ಸಣ್ಣ ಪುಟ್ಟ ಗಾಯಗಳಾದವರಿಗೆ ₹50 ಸಾವಿರ ನೆರವು ನೀಡಲಾಗುವುದು’ ಎಂದು ಮುಖ್ಯಮಂತ್ರಿ ತಿಳಿಸಿದ್ದಾರೆ.

ಸಂಪೂರ್ಣವಾಗಿ ಮನೆ ಕಳೆದುಕೊಂಡವರಿಗೆ ₹1 ಲಕ್ಷ, ಗರಿಷ್ಠ ಹಾನಿಯಾದ ಮನೆಗಳಿಗೆ ₹50 ಸಾವಿರ ಹಾಗೂ ಸಣ್ಣ ಪ್ರಮಾಣದಲ್ಲಿ ಹಾನಿಯಾದ ಮನೆಗಳಿಗೆ ತಲಾ ₹25 ಸಾವಿರ ನೆರವು ಪ್ರಕಟಿಸಲಾಗಿದೆ.

ಮುಖ್ಯಾಂಶಗಳು
- ಜಮ್ಮು, ರಿಯಾಸಿ, ಉದಮ್‌ಪುರ, ರಜೌರಿ ಜಿಲ್ಲೆಗಳಲ್ಲಿ ಭಾರಿ ಮಳೆ ನಿರೀಕ್ಷೆ
- ರಕ್ಷಣಾ ಕಾರ್ಯಾಚರಣೆಗೆ ಧ್ರುವ್ ಹೆಲಿಕಾಪ್ಟರ್ ಬಳಕೆ
- ಗಾಯಗೊಂಡಿದ್ದ 15 ಮಂದಿ ಪಠಾಣ್‌ಕೋಟ್ ಆಸ್ಪತ್ರೆಗೆ

ಮುಂಬೈ: ಕೋಡಿ ಬಿದ್ದ ತುಳಸಿ ಕೆರೆ

ಮುಂಬೈ (ಪಿಟಿಐ): ಮುಂಬೈನ ಸಂಜಯಗಾಂಧಿ ರಾಷ್ಟ್ರೀಯ ಉದ್ಯಾನ ಪ್ರದೇಶದಲ್ಲಿರುವ ತುಳಸಿ ಕೆರೆಯು ಕೋಡಿ ಬಿದ್ದಿದೆ. ನಗರದಲ್ಲಿ ಕುಡಿಯುವ ನೀರು ಪೂರೈಸಲು ಇರುವ ಏಳು ಕೆರೆಗಳು ಶೇ 90ರಷ್ಟು ಭರ್ತಿಯಾಗಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಠುವಾ ಜಿಲ್ಲೆಯಲ್ಲಿ ಸಂಭವಿಸಿದ ಮೇಘಸ್ಫೋಟದಿಂದ ರಸ್ತೆಯು ಹಾಳಾಗಿದೆ —ಪಿಟಿಐ ಚಿತ್ರ

ಕಿಶ್ತವಾಡ: ಮೃತರ ಸಂಖ್ಯೆ 61ಕ್ಕೆ ಏರಿಕೆ; ರಕ್ಷಣಾ ಕಾರ್ಯ ಚುರುಕು

ಚಿಸೌತಿ (ಜಮ್ಮು ಮತ್ತು ಕಾಶ್ಮೀರ): ಜಮ್ಮು ಮತ್ತು ಕಾಶ್ಮೀರದ ಕಿಶ್ತವಾಡ ಜಿಲ್ಲೆಯಲ್ಲಿ ನಡೆದ ಮೇಘಸ್ಫೋಟದಲ್ಲಿ ಮೃತಪಟ್ಟವರ ಸಂಖ್ಯೆ ಭಾನುವಾರ 61ಕ್ಕೆ ಏರಿದೆ. ರಕ್ಷಣಾ ಕಾರ್ಯ ನಾಲ್ಕನೇ ದಿನವೂ ಮುಂದುವರಿದಿದೆ. ದುರಂತ ನಡೆದ ಪ್ರದೇಶದ ಸುತ್ತ ಮೂರು ಸ್ಫೋಟಗಳನ್ನು ನಡೆಸಿದೊಡ್ಡ ಕಲ್ಲುಗಳನ್ನು ತೆರವುಗೊಳಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಚಿಸೌತಿ ಮತ್ತು ಮಚೈಲ್ ಮಾತಾ ದೇವಾಲಯಕ್ಕೆ ಸಂಪರ್ಕ ಪುನರ್‌ಸ್ಥಾಪಿಸಲು ಮತ್ತು ರಕ್ಷಣಾ ಕಾರ್ಯವನ್ನು ಮತ್ತಷ್ಟು ತೀವ್ರಗೊಳಿಸಲು ಸೇನಾ ಎಂಜಿನಿಯರ್‌ಗಳು ಕಬ್ಬಿಣದ ಸೇತುವೆಯ ಕೆಲಸ ಪ್ರಾರಂಭಿಸಿದ್ದಾರೆ. ಜುಲೈ 25ರಿಂದ ಪ್ರಾರಂಭವಾಗಿ ಸೆಪ್ಟೆಂಬರ್ 5ರಂದು ಕೊನೆಗೊಳ್ಳಬೇಕಿದ್ದ ವಾರ್ಷಿಕ ಮಚೈಲ್ ಮಾತಾ ಯಾತ್ರೆಯನ್ನು ಭಾನುವಾರವೂ ಸ್ಥಗಿತಗೊಳಿಸಲಾಯಿ

ಚೇತನ್ ಅಬ್ಬರ: ಬ್ಲಾಸ್ಟರ್ಸ್‌ಗೆ ಜಯ

ಮಹಾರಾಜ ಟ್ರೋಫಿ: ಬೆಂಗಳೂರಿಗೆ ಮಣಿದ ಮಂಗಳೂರು ಡ್ರ್ಯಾಗನ್ಸ್

• ಮೋಹನ್‌ಕುಮಾರ ಸಿ.

ಮೈಸೂರು: ತವರಿನ ಅಂಗಳದಲ್ಲಿ ಸೊಬಗಿನ ಅರ್ಧಶತಕ ಸಿಡಿಸಿದ ಎಲ್.ಆರ್.ಚೇತನ್ (74; 46 ಎಸೆತ, 4x3, 6x6) ಬ್ಯಾಟಿಂಗ್ ಬಲದಿಂದ ಬೆಂಗಳೂರು ಬ್ಲಾಸ್ಟರ್ಸ್ 3 ವಿಕೆಟ್‌ಗಳಿಂದ ಮಂಗಳೂರು ಡ್ರ್ಯಾಗನ್ಸ್ ವಿರುದ್ಧ ರೋಚಕ ಜಯ ಸಾಧಿಸಿತು.

ಮಾನಸಗಂಗೋತ್ರಿಯ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಮಹಾರಾಜ ಟ್ರೋಫಿ ಟಿ-20 ಕ್ರಿಕೆಟ್ ಟೂರ್ನಿಯ ಭಾನುವಾರದ ಪಂದ್ಯದಲ್ಲಿ, ಚೇತನ್ ಅವರು ಮಳೆ ಬಿಡುವಿನಲ್ಲಿ ರನ್ ಹೊಳೆ ಹರಿಸಿದರು. ಟಾಸ್ ಗೆದ್ದ ಬೆಂಗಳೂರು ನಾಯಕ ಮಯಂಕ್ ಅಗರವಾಲ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಮಳೆ ಕಾಡಿದ್ದರಿಂದ ವಿಜಿಡಿ (ವಿ.ಜಯದೇವನ್) ನಿಯಮದಂತೆ 19 ಓವರ್‌ಗಳಿಗೆ ಪಂದ್ಯವನ್ನು ನಿಗದಿ ಮಾಡಲಾಯಿತು.

ಮಂಗಳೂರು ತಂಡದ ಆರಂಭಿಕ ಬ್ಯಾಟರ್‌ಗಳಾದ ಲೋಚನ್ ಗೌಡ (49; 32 ಎಸೆತ, 4x7, 6x2) ಹಾಗೂ ಬಿ.ಆರ್.ಶರತ್ (45, 22 ಎಸೆತ, 4x6, 6x2) ಸುಂದರ ಇನ್ನಿಂಗ್ಸ್ ಕಟ್ಟಿದ್ದರು. 7 ಓವರ್‌ಗಳಲ್ಲಿ 90 ರನ್ ಹರಿದು ಬಂದವು. ಈ ವೇಳೆ ಇಬ್ಬರಿಗೂ ಬೆಂಗಳೂರಿನ ಮೊಹಸಿನ್ ಖಾನ್ ಪೆವಿಲಿಯನ್ ದಾರಿ ತೋರಿಸಿದರು. ಅಲ್ಲಿಂದ ಡ್ರ್ಯಾಗನ್ಸ್‌ನ ರನ್ ವೇಗ ಕಡಿಮೆಯಾಯಿತು. ಕೊನೆಯಲ್ಲಿ ಎಸ್.ಶಿವರಾಜ್ (33 ರನ್, 15 ಎಸೆತ, 4x2, 6x3) ಅವರ ಬಿರುಸಿನ ಆಟದ ನೆರವಿನಿಂದ ಮಂಗಳೂರು 6 ವಿಕೆಟ್‌ಗಳಿಗೆ 174 ರನ್‌ಗಳ ಸವಾಲಿನ ಗುರಿ ನೀಡಿತು.

ಇಂದಿನ ಪಂದ್ಯಗಳು

• ಮೈಸೂರು ವಾರಿಯರ್ಸ್-ಬೆಂಗಳೂರು ಬ್ಲಾಸ್ಟರ್ಸ್, ಮಧ್ಯಾಹ್ನ 3.15

• ಗುಲ್ಬರ್ಗ ಮಿಸ್ಟಿಕ್ಸ್- ಹುಬ್ಬಳ್ಳಿ ಟೈಗರ್ಸ್, ಸಂಜೆ 7.15

ಚೇತನ್ ಅಬ್ಬರ: ಆರಂಭದಲ್ಲಿ ಬಿರುಸಿನ ಆಟವಾಡಿದ ಚೇತನ್ ನಂತರ ರಕ್ಷಣಾತ್ಮಕವಾಗಿ ಆಡಿದರು. ರೋಹನ್ ಪಾಟೀಲ (26), ಮಯಂಕ್ ಅಗರವಾಲ್ (20), ವೈಭವ್ ಶರ್ಮ (14), ಸೂರಜ್ ಅಹುಜಾ (21) ಅವರೊಂದಿಗೆ ಸುಂದರ ಇನ್ನಿಂಗ್ಸ್ ಕಟ್ಟಿದರು. ಕಡೆವರೆಗೂ ಪಂದ್ಯವು ಎದುರಾಳಿ ತಂಡದತ್ತ ವಾಲದಂತೆ ನೋಡಿಕೊಂಡರು. ಕೊನೆಯ 3 ಓವರ್‌ಗಳಲ್ಲಿ ಕ್ರಾಂತಿಕುಮಾರ್ (28ಕ್ಕೆ 2 ವಿಕೆಟ್) ಮೊನಚಿನ ದಾಳಿಗೆ ತಂಡವು ನಲುಗಿತ್ತು. ಆಗ ವಿದ್ಯಾಧರ ಪಾಟೀಲ ಬೌಂಡರಿ ಬಾರಿಸಿ ಮೂರು ಎಸೆತ ಬಾಕಿ ಇರುವಂತೆ ತಂಡವನ್ನು ಗೆಲುವಿನ ದಡ ಸೇರಿಸಿದರು.

ಸಂಕ್ಷಿಪ್ತ ಸ್ಕೋರ್: ಮಂಗಳೂರು ಡ್ರ್ಯಾಗನ್ಸ್: 19 ಓವರ್‌ಗಳಲ್ಲಿ 6 ವಿಕೆಟ್‌ಗೆ 174 (ಲೋಚನ್ ಗೌಡ 49, ಬಿ.ಆರ್.ಶರತ್ 45, ಎಸ್.ಶಿವರಾಜ್ 33. ಮೊಹಸಿನ್ ಖಾನ್ 26ಕ್ಕೆ 2, ಪ್ರತೀಕ್ ಜೈನ್ 45ಕ್ಕೆ 2). **ಬೆಂಗಳೂರು ಬ್ಲಾಸ್ಟರ್ಸ್:** 18.3 ಓವರ್‌ಗಳಲ್ಲಿ 7 ವಿಕೆಟ್‌ಗೆ 175 (ಎಲ್.ಆರ್.ಚೇತನ್ 74, ರೋಹನ್ ಪಾಟೀಲ 26, ಸೂರಜ್ ಅಹುಜಾ 21. ಕ್ರಾಂತಿಕುಮಾರ್ 28ಕ್ಕೆ 2)

ಪಂದ್ಯದ ಆಟಗಾರ: ಎಲ್.ಆರ್.ಚೇತನ್.

ಆಕರ್ಷಕ ಅರ್ಧಶತಕ ಸಿಡಿಸಿದ ಬೆಂಗಳೂರು ಬ್ಲಾಸ್ಟರ್ಸ್ ತಂಡದ ಎಲ್.ಆರ್.ಚೇತನ್ ಬ್ಯಾಟಿಂಗ್ ವೈಖರಿ
ಚಿತ್ರ: ಆನೂಪ್‌ರಾಘ ಟಿ.

ಮಳೆ: ಮೈಸೂರು - ಶಿವಮೊಗ್ಗ ಪಂದ್ಯ ರದ್ದು

ಮೈಸೂರು: ಮೈಸೂರು ವಾರಿಯರ್ಸ್ ಮತ್ತು ಶಿವಮೊಗ್ಗ ಲಯನ್ಸ್ ಪಂದ್ಯವು ಮಳೆ ಕಾರಣ ರದ್ದಾಯಿತು. ಎರಡೂ ತಂಡಗಳಿಗೆ ತಲಾ 1 ಅಂಕ ನೀಡಲಾಯಿತು.

ಟಾಸ್ ಗೆದ್ದ ಶಿವಮೊಗ್ಗ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತ್ತು. ಲಯನ್ಸ್ ದಾಳಿಗೆ ನಲುಗಿದ್ದ ವಾರಿಯರ್ಸ್‌ಗೆ ಮಂಡ್ಯದ ಹುಡುಗ ಕೆ.ಎಸ್. ಲಂಕೇಶ್ (46; 26 ಎಸೆತ, 4x4, 6x3) ಹಾಗೂ ಮೈಸೂರಿನ ಪ್ರತಿಭೆ ಎಸ್.ಯು.ಕಾರ್ತಿಕ್ (42, 33 ಎಸೆತ, 4x1, 6x1) ಆಸರೆಯಾಗಿದ್ದರು. 20 ಓವರ್‌ಗಳಲ್ಲಿ 7 ವಿಕೆಟ್‌ಗೆ 167 ರನ್ ಕಲೆಹಾಕಿತ್ತು. ಇನ್ನಿಂಗ್ಸ್ ಮುಗಿದ ನಂತರ ಆರಂಭವಾದ ಮಳೆ ಬಿಡುವು ನೀಡದೇ 11.30ರ ವರೆಗೂ ಸುರಿಯಿತು. ಪಿಚ್ ಹಾಗೂ ಔಟ್‌ಫೀಲ್ಡ್ ಒದ್ದೆಯಾದ ಕಾರಣ ಅಂಪೈರ್‌ಗಳು ಪಂದ್ಯ ರದ್ದುಗೊಳಿಸಿದರು.

ಸಂಕ್ಷಿಪ್ತ ಸ್ಕೋರ್: ಮೈಸೂರು ವಾರಿಯರ್ಸ್ 20 ಓವರ್‌ಗಳಲ್ಲಿ 7ಕ್ಕೆ 167 (ಕೆ.ಎಸ್.ಲಂಕೇಶ್ 46, ಎಸ್.ಯು.ಕಾರ್ತಿಕ್ 42, ಮನೀಷ್ ಪಾಂಡೆ 23. ಎಂ.ಬಿ.ದರ್ಶನ್ 37ಕ್ಕೆ 3, ವಿದ್ವತ್ ಕಾವೇರಪ್ಪ 19ಕ್ಕೆ 1, ಆನಂದ ದೊಡ್ಡಮನಿ 19ಕ್ಕೆ 1) ಶಿವಮೊಗ್ಗ ಲಯನ್ಸ್ ವಿರುದ್ಧ.

ಡೈಮಂಡ್ ಲೀಗ್ ಫೈನಲ್‌ಗೆ ನೀರಜ್ ಚೋಪ್ರಾ ಅರ್ಹ



ನೀರಜ್ ಚೋಪ್ರಾ
ಪಿಟಿಐ ಸಂಗ್ರಹ ಚಿತ್ರ

ನವದೆಹಲಿ (ಪಿಟಿಐ): ಭಾರತದ ಜಾವೆಲಿನ್ ಥ್ರೋ ತಾರೆ ನೀರಜ್ ಚೋಪ್ರಾ ಅವರು ಈ ತಿಂಗಳ ಅಂತ್ಯದಲ್ಲಿ ಸ್ವಿಟ್ಜರ್ಲೆಂಡ್‌ನ ಜೂರಿಚ್‌ನಲ್ಲಿ ನಡೆಯಲಿರುವ ಡೈಮಂಡ್ ಲೀಗ್ ಫೈನಲ್‌ಗೆ ಕ್ವಾಲಿಫೈ ಆಗಿದ್ದಾರೆ.

ಹಾಲಿ ವಿಶ್ವ ಚಾಂಪಿಯನ್ ಚೋಪ್ರಾ ಅವರು ಪೋಲೆಂಡ್‌ನ ಸಿಲೆಸಿಯಾದಲ್ಲಿ ಕಳೆದ ಶನಿವಾರ ನಡೆದ ಡೈಮಂಡ್ ಲೀಗ್‌ನಲ್ಲಿ ಭಾಗವಹಿಸಿರಲಿಲ್ಲ. ಆಗಸ್ಟ್ 22ರಂದು ನಡೆಯಲಿರುವ ಬ್ರುಸೆಲ್ಸ್ ಆವೃತ್ತಿಯಲ್ಲಿಯೂ ಅವರು ಸ್ಪರ್ಧಿಸುವ ಖಚಿತತೆ ಇಲ್ಲ. ಆದಾಗ್ಯೂ, ಈಗಾಗಲೇ 15 ಅಂಕಗಳೊಂದಿಗೆ ಮೂರನೇ ಸ್ಥಾನದಲ್ಲಿರುವ ಅವರು ಜೂರಿಚ್ ಡೈಮಂಡ್ ಲೀಗ್ ಫೈನಲ್‌ಗೆ ನೇರ ಅರ್ಹತೆ ಗಿಟ್ಟಿಸಿಕೊಂಡಿದ್ದಾರೆ.

ಟ್ರಿನಿಡಾಡ್ - ಟೊಬ್ಯಾಗೊದ ಕೆಶೊರ್ನ್ ವಾಲ್‌ಕಾಟ್ (17) ಹಾಗೂ ಜರ್ಮನಿಯ ಜೂಲಿಯನ್ ವೆಬರ್ (15) ಅವರು ಪಾಯಿಂಟ್ಸ್ ಪಟ್ಟಿಯಲ್ಲಿ ಮೊದಲ ಎರಡು ಸ್ಥಾನಗಳಲ್ಲಿದ್ದಾರೆ.

ಜೂನ್‌ನಲ್ಲಿ ನಡೆದ ಪ್ಯಾರಿಸ್ ಡೈಮಂಡ್ ಲೀಗ್‌ನಲ್ಲಿ ಚಿನ್ನದ ಪದಕ ಗೆದ್ದಿದ್ದ ಚೋಪ್ರಾ, ಮೇ ತಿಂಗಳಲ್ಲಿ ನಡೆದ ದೋಹಾ ಡೈಮಂಡ್ ಲೀಗ್‌ನಲ್ಲಿ ದ್ವಿತೀಯ ಸ್ಥಾನ ಪಡೆದಿದ್ದರು.

ಕೆಸಿಎ ಟ್ರೋಫಿ ರ‍್ಯಾಪಿಡ್ ಚೆಸ್: ಧನುಷ್ ರನ್ನರ್ ಅಪ್

ಗೋವಾದ ಚೈತನ್ಯ ಚಾಂಪಿಯನ್

ಪ್ರಜಾವಾಣಿ ವಾರ್ತೆ



ಚೈತನ್ಯ ಗಾಂವ್ಕರ್

ಮಂಗಳೂರು: ಕುತೂಹಲ ಕೆರಳಿಸಿದ 8ನೇ ಸುತ್ತಿನಲ್ಲಿ ಸ್ಥಳೀಯ ಪ್ರತಿಭೆಯನ್ನು ಮಣಿಸಿದ ಗೋವಾದ ಚೈತನ್ಯ ವಿ.ಗಾಂವ್ಕರ್ ನಗರದ ಕಿಂಗ್ಸ್ ಚೆಸ್ ಅಕಾಡೆಮಿ ಆಯೋಜಿಸಿದ್ದ ರಾಷ್ಟ್ರಮಟ್ಟದ 11ನೇ ಕೆಸಿಎ ಟ್ರೋಫಿ ಫಿಡೆ ರೇಟೆಡ್ ರ‍್ಯಾಪಿಡ್ ಚೆಸ್ ಟೂರ್ನಿಯ ಚಾಂಪಿಯನ್ ಪಟ್ಟ ತಮ್ಮದಾಗಿಸಿಕೊಂಡರು.

ಬಾಳಂಭಟ್ ಸಭಾಂಗಣದಲ್ಲಿ ನಡೆದ ಟೂರ್ನಿಯ ಮೊದಲ ದಿನವಾದ ಶನಿವಾರ ಚೈತನ್ಯ ಮತ್ತು ದಕ್ಷಿಣ ಕನ್ನಡದ ಧನುಷ್ ರಾಮ್ ತಲಾ 7 ಪಾಯಿಂಟ್‌ಗಳೊಂದಿಗೆ ಅಗ್ರ ಸ್ಥಾನ ಹಂಚಿಕೊಂಡಿದ್ದರು. ಭಾನುವಾರ ಎರಡು ಸುತ್ತುಗಳು ಉಳಿದಿದ್ದವು. ಮೊದಲ ಸುತ್ತಿನ ಪಂದ್ಯದಲ್ಲಿ ಇವರಿಬ್ಬರೂ ಕಾದಾಡಿದರು. ಗೆಲುವಿನೊಂದಿಗೆ ಪ್ರಶಸ್ತಿ ಕಡೆಗಿರುವ ಚೈತನ್ಯ ಅವರ ಹಾದಿ ಸುಲಭವಾಯಿತು. ಕೊನೆಯ ಸುತ್ತಿನಲ್ಲಿ ಅವರು ದಕ್ಷಿಣ ಕನ್ನಡದ ಆರುಷ್ ಭಟ್ ಜೊತೆ ಡ್ರಾ ಮಾಡಿಕೊಂಡರು. ಇದರೊಂದಿಗೆ 8.5 ಪಾಯಿಂಟ್‌ಗಳೊಂದಿಗೆ ಪ್ರಶಸ್ತಿಗೆ ಮುತ್ತಿಕ್ಕಿದರು. ಧನುಷ್ ರಾಮ್ ಅಂತಿಮ ಸುತ್ತಿನಲ್ಲಿ ದಕ್ಷಿಣ ಕನ್ನಡದ ಲಕ್ಷಿತ್ ಸಾಲ್ಯಾನ್ ವಿರುದ್ಧ ಜಯ ಸಾಧಿಸಿ 8 ಪಾಯಿಂಟ್ ತಮ್ಮದಾಗಿಸಿಕೊಂಡರು.

ಒಟ್ಟು ₹2 ಲಕ್ಷ ಬಹುಮಾನ ಮೊತ್ತದ ಟೂರ್ನಿಯ ಚಾಂಪಿಯನ್ ₹35,001 ತಮ್ಮದಾಗಿಸಿಕೊಂಡರು. ಧನುಷ್ರಾಮ್‌ಗೆ ₹25,001 ಲಭಿಸಿತು. 7.5 ಪಾಯಿಂಟ್‌ಗಳೊಂದಿಗೆ 3ನೇ ಸ್ಥಾನಕ್ಕೆ ಸಮಾಧಾನಪಟ್ಟುಕೊಂಡ ಸುದರ್ಶನ್ ಭಟ್ ₹15,001 ಗಳಿಸಿದರು. 7.5 ಪಾಯಿಂಟ್ ಗಳಿಸಿದರೂ ಉತ್ತಮ ಟೈಬ್ರೇಕರ್‌ನಲ್ಲಿ ಹಿಂದುಳಿದ ಆರುಷ್ ಭಟ್ 4ನೇ ಸ್ಥಾನದೊಂದಿಗೆ ₹7,500 ಗಳಿಸಿದರು.

ಲಕ್ಷಿತ್ ಸಾಲ್ಯಾನ್, ಅಗ್ರ ಶ್ರೇಯಾಂಕಿತ ಅರುಳ್ ಆನಂದ್, ಪ್ರಹ್ಲಾದ್ ಸೇನ್, ರಿತೇಶ್ ಕೆ, ಶರದ್ ಎಸ್ ರೈ ಹಾಗೂ ನಿಹಾಲ್ ಶೆಟ್ಟಿ ತಲಾ 6 ಪಾಯಿಂಟ್ ಗಳಿಸಿ ಕ್ರಮವಾಗಿ 5ರಿಂದ 10ರ ವರೆಗಿನ ಸ್ಥಾನ ಗಳಿಸಿದರು.

18 ವರ್ಷದೊಳಗಿನವರ ವಿಭಾಗದಲ್ಲಿ ಸಮರ್ಥ ಜೆ ರಾವ್ (7.5 ಪಾಯಿಂಟ್ಸ್), 16 ವರ್ಷದೊಳಗಿನವರ ವಿಭಾಗದಲ್ಲಿ ಶ್ರಿಯಾನ್ಸ್ ಸಿನ್ಹ, 15 ವರ್ಷದೊಳಗಿನವರ ವಿಭಾಗದಲ್ಲಿ ತುಳಸಿ ರೆಡ್ಡಿ ಚಾಂಪಿಯನ್ ಆದರು. ಇವರೆಲ್ಲರೂ ಕರ್ನಾಟಕದವರು. ಮೂವರಿಗೂ ತಲಾ ₹12 ಸಾವಿರ ಲಭಿಸಿತು.

ಡಿಕೆ ಕೆಸಿಎ: ಅನೂಪ್‌ಗೆ ಅಗ್ರಸ್ಥಾನ

ಆತಿಥೇಯ ಕ್ಲಬ್ ಪರವಾಗಿ ಅನೂಪ್ ಎ.ರಾವ್ ಅಗ್ರಸ್ಥಾನ ಗಳಿಸಿದರು. 5.5 ಪಾಯಿಂಟ್ ಕಲೆ ಹಾಕಿದ ಅವರಿಗೆ ₹3,001 ಲಭಿಸಿತು.

3.5 ಪಾಯಿಂಟ್‌ಗಳೊಂದಿಗೆ ಎಲಿನಾ ಲಿವಿಯಾ ಡಿಸೋಜ ಎರಡನೆಯವರಾದರು. ಅವರಿಗೆ ₹ 2001 ಲಭಿಸಿತು. ಅಭಯ್ ನಾಯಕ್, ಪುಂಡಲೀಕ ಭಟ್ ಮತ್ತು ಕುನಾಲ್ ನಾಗರಾಜ ದೇವಾಡಿಗ ಕ್ರಮವಾಗಿ 3, 4 ಮತ್ತು 5ನೇ ಸ್ಥಾನ ಗಳಿಸಿದರು.

ಭಾನುವಾರ ಪ್ರತ್ಯೇಕವಾಗಿ ನಡೆದ 6 ಸುತ್ತುಗಳ 11ನೇ ಕೆಸಿಎ ಟೂರ್ನಿಯಲ್ಲೂ ಧನುಷ್ ರನ್ನರ್ ಅಪ್ ಆದರು. ಮಹಾರಾಷ್ಟ್ರದ ಅಭಿಷೇಕ್ ಪಾಟೀಲ್ ಚಾಂಪಿಯನ್ ಆದರು.

ಚಿಟಿಕೆ ಸುದ್ದಿ

ಜಾವಗಲ್ ಶ್ರೀನಾಥ್‌ಗೆ ಮಾತೃ ವಿಯೋಗ



ಭಾಗ್ಯಲಕ್ಷ್ಮಿ

ಮೈಸೂರು: ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ರೆಫರಿ ಜಾವಗಲ್ ಶ್ರೀನಾಥ್ ಅವರ ತಾಯಿ ಜೆ.ಸಿ. ಭಾಗ್ಯಲಕ್ಷ್ಮಿ (87) ಅವರು ನಗರದ ಯಾದವಗಿರಿಯ ನಿವಾಸದಲ್ಲಿ ಭಾನುವಾರ ಬೆಳಿಗ್ಗೆ ವಯೋಸಹಜ ಅನಾರೋಗ್ಯದಿಂದ ನಿಧನರಾದರು.

ಅವರಿಗೆ ಶ್ರೀನಾಥ್ ಸೇರಿದಂತೆ ಇಬ್ಬರು ಪುತ್ರರು ಹಾಗೂ ಇಬ್ಬರು ಪುತ್ರಿಯರು ಇದ್ದಾರೆ. ಪತಿ ಜಾವಗಲ್ ಚಂದ್ರಶೇಖರ್ ಅವರು 2018ರಲ್ಲಿ ಮೃತಪಟ್ಟಿದ್ದರು.

ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ವಿದ್ಯುತ್ ಚಿತಾಗಾರದಲ್ಲಿ ಭಾನುವಾರ ಮಧ್ಯಾಹ್ನ ನೆರವೇರಿತು.

ಶ್ರೀನಾಥ್ ಅವರು ಭಾರತ ಕ್ರಿಕೆಟ್ ತಂಡದಲ್ಲಿ ವೇಗದ ಬೌಲರ್ ಆಗಿ ಆಡಿದವರು.

ವೇಸ್ ಪೇಸ್ ಅಂತ್ಯಕ್ರಿಯೆಯಲ್ಲಿ ಗಂಗೂಲಿ ಭಾಗಿ

ಡಾ.ವೇಸ್ ಪೇಸ್

ಕೋಲ್ಕತ್ತ (ಪಿಟಿಐ): ಟೆನಿಸ್ ದಿಗ್ಗಜ ಲಿಯಾಂಡರ್ ಪೇಸ್ ಅವರ ತಂದೆ, 1972ರ ಮ್ಯೂನಿಕ್ ಒಲಿಂಪಿಕ್ಸ್‌ನಲ್ಲಿ ಕಂಚು ವಿಜೇತ ಭಾರತ ಹಾಕಿ ತಂಡದ ಆಟಗಾರ ಡಾ.ವೇಸ್ ಪೇಸ್ ಅವರ ಅಂತ್ಯಕ್ರಿಯೆ ಭಾನುವಾರ ನೆರವೇರಿತು. ವೇಸ್ ಅವರು ಗುರುವಾರ ನಿಧನರಾಗಿದ್ದರು.

ಇಲ್ಲಿನ ಎಜೆಸಿ ಬೋಸ್ ರಸ್ತೆಯಲ್ಲಿನ ಸ್ಮಶಾನದಲ್ಲಿ ಅಂತ್ಯಕ್ರಿಯೆ ನಡೆಯಿತು.

ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ಸೌರವ್ ಗಂಗೂಲಿ, ಹಾಕಿ ಇಂಡಿಯಾ ಅಧ್ಯಕ್ಷ ದಿಲೀಪ್ ಟಿರ್ಕಿ, ಹಾಕಿ ಬಂಗಾಳ ಪದಾಧಿಕಾರಿಗಳು ಸೇರಿ ಹಲವಾರು ಗಣ್ಯರು ಅಂತಿಮ ನಮನ ಸಲ್ಲಿಸಿದರು.

ಭಾರತ ಕ್ರಿಕೆಟ್ ತಂಡದ ಮಾಜಿ ಆಟಗಾರ ಅರುಣ್ ಲಾಲ್, ಟಿಎಂಸಿ ನಾಯಕ ಡೆರೆಕ್ ಒಬ್ರಯಾನ್ ಅವರೂ ಅಂತ್ಯಕ್ರಿಯೆಯಲ್ಲಿ ಪಾಲ್ಗೊಂಡಿದ್ದರು.

ಪೇಸ್ ಅವರ ಪಾರ್ಥಿವ ಶರೀರವನ್ನು ತೆರೆದ ವಾಹನದಲ್ಲಿ ಸ್ಮಶಾನಕ್ಕೆ ಕರೆದೊಯ್ಯುವಾಗ ಜೂನಿಯರ್ ಆಟಗಾರರು ಹಾಕಿ ಮತ್ತು ಟೆನಿಸ್ ಬ್ಯಾಟ್‌ಗಳನ್ನು ಹಿಡಿದು, ಗೌರವ ನಮನ ಸಲ್ಲಿಸಿದರು.

ಸಿದ್ಧಾಂತ್‌ಗೆ ಕಂಚು

ಬೆಂಗಳೂರು: ಕರ್ನಾಟಕದ ಸಿದ್ಧಾಂತ್ ಧಾರಿವಾಲ್ ಅವರು ಜೋರ್ಡಾನ್‌ನ ಅಮ್ಮಾನ್‌ನಲ್ಲಿ ನಡೆದ ವಿಶ್ವ ಟೇಬಲ್ ಟೆನಿಸ್ ಟೂರ್ನಿಯ (ಡಬ್ಲ್ಯುಟಿಟಿ) 15 ವರ್ಷದೊಳಗಿನವರ ವಿಭಾಗದಲ್ಲಿ ಕಂಚಿನ ಪದಕ ಗೆದ್ದುಕೊಂಡರು.

ಸಿದ್ಧಾಂತ್ ಅವರು ಡಬ್ಲ್ಯುಟಿಟಿ ಟೂರ್ನಿಯಲ್ಲಿ ಜಯಿಸಿದ ಚೊಚ್ಚಲ ಪದಕ ಇದಾಗಿದೆ.

ಭಾನುವಾರ ನಡೆದ ಸೆಮಿಫೈನಲ್ ಪಂದ್ಯದಲ್ಲಿ ಸಿದ್ಧಾಂತ್ ಅವರು 12-14, 5-11, 9-11ರಿಂದ ಕತಾರ್‌ನ ಅಬ್ದುಲ್ ಅಜೀಜ್ ಅಲ್ ಅಬ್ದುಲ್ಲಾ ಎದುರು ನೇರ ಸೆಟ್‌ಗಳಲ್ಲಿ ಪರಾಭವಗೊಂಡರು.

'ಸಿಂಕ್‌ಫೀಲ್ಡ್ ಕಪ್' ಗ್ರ್ಯಾಂಡ್ ಚೆಸ್ ಟೂರ್ನಿ ಇಂದಿನಿಂದ

ಕಣದಲ್ಲಿ ಗುಕೇಶ್, ಪ್ರಜ್ಞಾನಂದ

ಸೇಂಟ್ ಲೂಯಿಸ್ (ಅಮೆರಿಕ) (ಪಿಟಿಐ): ವಿಶ್ವ ಚಾಂಪಿಯನ್ ಡಿ. ಗುಕೇಶ್ ಅವರು ಕ್ಲಾಸಿಕ್ ಚೆಸ್ ಮಾದರಿಗೆ ಮರಳಿದ್ದಾರೆ. ಸೋಮವಾರ ಆರಂಭವಾಗಲಿರುವ ಖ್ಯಾತನಾಮ ಆಟಗಾರರು ಸ್ಪರ್ಧಿಸಲಿರುವ 'ಸಿಂಕ್‌ಫೀಲ್ಡ್ ಕಪ್' ಗ್ರ್ಯಾಂಡ್ ಚೆಸ್ ಟೂರ್‌ನಲ್ಲಿ (ಜಿಸಿಟಿ) ಗುಕೇಶ್ ಕಣಕ್ಕಿಳಿಯಲಿದ್ದಾರೆ. ಭಾರತದ ಮತ್ತೊಬ್ಬ ಪ್ರಮುಖ ಆಟಗಾರ ಆರ್. ಪ್ರಜ್ಞಾನಂದ ಅವರು ಈ ಟೂರ್ನಿಯಲ್ಲಿ ವಿಜಯವೇದಿಕೆ ಏರುವ ಛಲದಲ್ಲಿದ್ದಾರೆ.

ಆರ್. ಪ್ರಜ್ಞಾನಂದ

ವಿಶ್ವದ ಅಗ್ರಮಾನ್ಯ ಆಟಗಾರ, ನಾರ್ವೆ ದೇಶದ ಮ್ಯಾಗ್ನಸ್ ಕಾರ್ಲ್‌ಸನ್ ಅವರಿಲ್ಲದೇ ಟೂರ್ನಿ ಅಪೂರ್ಣ ಎನ್ನುವ ಚರ್ಚೆಗಳು ನಡೆದಿವೆ. ಆದರೆ ಸ್ವತಃ ಮ್ಯಾಗ್ನಸ್ ಅವರೇ ಕ್ಲಾಸಿಕಲ್ ಚೆಸ್‌ನಲ್ಲಿ ತಮಗೆ ಮಜಾ ಬರುತ್ತಿಲ್ಲ ಎಂದೂ ಈಗಾಗಲೇ ಹೇಳಿದ್ದಾರೆ. ಕಾರ್ಲ್‌ಸನ್ ಅವರಿಲ್ಲದ ಗ್ರ್ಯಾಂಡ್ ಚೆಸ್ ಟೂರ್ ಅನ್ನು ಈಚೆಗೆ ಪ್ರಕಟಿಸಲಾಯಿತು. ಈ ವರ್ಷದ ಅಂತ್ಯದಲ್ಲಿ ನಡೆಯಲಿರುವ ಗ್ರ್ಯಾಂಡ್ ಫೈನಲ್‌ಗೆ ಕ್ವಾಲಿಫೈ ಆಗಲು ಈ ಟೂರ್ನಿಯು ಕೊನೆಯ ಅವಕಾಶವಾಗಿದೆ.

ಅಮೆರಿಕದ ಫ್ಯಾಬಿಯಾನೊ ಕರುವಾನಾ, ಫ್ರಾನ್ಸ್‌ನ ಅಲಿರೇಝಾ ಫಿರೋಜಾ, ಶ್ರೇಷ್ಠ ಲಯದಲ್ಲಿರುವ ಅರ್ಮೇನಿಯಾ-ಅಮೆರಿಕನ್ ಲೆವೊನ್ ಅರೊನಿಯನ್ ಅವರು ಭಾರತೀಯ ಆಟಗಾರರನ್ನು ಎದುರಿಸುವರು.

ರ‍್ಯಾಪಿಡ್ ಮತ್ತು ಬ್ಲಿಟ್ಜ್ ವಿಭಾಗಗಳಲ್ಲಿ ಗುಕೇಶ್ ಉತ್ತಮಪ್ರದರ್ಶನ ನೀಡಿದ್ದರು. ಆದರೆ ಕ್ಲಾಸಿಕಲ್ ಚೆಸ್ ಎಂದರೆ ಅವರಿಗೆ ಅಚ್ಚುಮೆಚ್ಚು ಹಾಗೂ ಈ ಮಾದರಿಯಲ್ಲಿ ಅವರದ್ದು ಹೆಚ್ಚಿನ ಪಾರಮ್ಯ ಇದೆ.

ಪ್ರಜ್ಞಾನಂದ ಅವರು ಮುಂದಿನ ವರ್ಷ ನಡೆಯಲಿರುವ ಕ್ಯಾಂಡಿಡೇಟ್ಸ್ ಚೆಸ್ ಟೂರ್ನಿಗೆ ಅರ್ಹತೆ ಪಡೆಯುವತ್ತ ದಾಪುಗಾಲಿಟ್ಟಿದ್ದಾರೆ. ಗುಕೇಶ್ ಮತ್ತು ಪ್ರಜ್ಞಾನಂದ ಅವರು ಮುಂದಿನ ತಿಂಗಳು ಉಜ್ಬೇಕಿಸ್ತಾನ ದಲ್ಲಿ ನಡೆಯಲಿರುವ ಗ್ರ್ಯಾಂಡ್ ಸ್ವಿಸ್ ಚಾಂಪಿಯನ್‌ಷಿಪ್‌ನಲ್ಲಿ ಸ್ಪರ್ಧಿಸಲು ನಿರ್ಧರಿಸಿದ್ದಾರೆ.

ಜಿ.ಸಿ.ಟಿ ಸ್ಟ್ಯಾಂಡಿಂಗ್‌ನಲ್ಲಿ ಪ್ರಜ್ಞಾನಂದ ಅವರು ಗುಕೇಶ್‌ಗಿಂತ ಮುಂದಿದ್ದಾರೆ. ಆದರೆ ಸ್ಥಿರ ಪ್ರದರ್ಶನ ಮಾತ್ರ ಇಲ್ಲಿ ನಿರ್ಣಾಯಕವಾಗಲಿದೆ. ಇಬ್ಬರೂ ಅನುಭವಿ ಆಟಗಾರರು ತೋರುವ ತಾಳ್ಮೆ ಮತ್ತು ಏಕಾಗ್ರತೆಯ ಮಟ್ಟವೇ ಫಲಿತಾಂಶವನ್ನು ನಿರ್ಧರಿಸುವುದರಲ್ಲಿ ಪ್ರಮುಖ ಪಾತ್ರ ವಹಿಸಲಿವೆ.

ಸ್ಪರ್ಧಿಗಳು: ಡಿ. ಗುಕೇಶ್, ಆರ್. ಪ್ರಜ್ಞಾನಂದ (ಇಬ್ಬರೂ ಭಾರತ), ಫ್ಯಾಬಿಯಾನೊ ಕರುವಾನಾ, ವೆಸ್ಲಿಸೋ, ಲೆವೋನ್ ಅರೋನಿಯನ್, ಸ್ಯಾಮ್ ಸೇವಿನ್ (ಎಲ್ಲರೂ ಅಮೆರಿಕ), ಮ್ಯಾಕ್ಸಿಮ್ ವೇಷಿಯರ್-ಲಗ್ರೇವ್, ಅಲಿರೇಜಾ ಫಿರೋಜಾ (ಇಬ್ಬರೂ ಫ್ರಾನ್ಸ್), ಡುಡಾ ಜಾನ್ ಕ್ರಿಸ್ಟೋಫ್ (